Editor: NITYANANDASWAMI Publisher: U. BASAVARAJA
RNI No. KARKAN/2006/17926

# ಜನಶಕ್ತಿ ಕನ್ನಡ ವಾರ ಪತ್ರಿಕೆ


JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–39 ಸೆಪ್ಟೆಂಬರ್ 25–ಅಕ್ಟೋಬರ್ 1, 2023 ಪುಟ 16 ರೂ. 10/–
Volume-17 Issue-39 September 25-October 1, 2023 Pages:16 Price: 10/-



## ಮಹಿಳಾ ಮೀಸಲಾತಿ: ಸರ್ಕಾರದ ಒಂದು ಮೋಸ

### ಮಹಿಳಾ ದೌರ್ಜನ್ಯ ಮತ್ತು ಅತ್ಯಾಚಾರಗಳ ಬೇರು ಎಲ್ಲಿವೆ?



ಸೆಪ್ಟೆಂಬರ್ 17: ವಿಮೋಚನಾ ದಿನ
ತೆಲಂಗಾಣ ರೈತ ಸಶಸ್ತ್ರ ಹೋರಾಟದ
ಹಿರಿಮೆಯನ್ನು ಮರೆಮಾಚುವ ಯತ್ನ

ಮೋದಿಯವರು
ಬೆಲೆ ಏರಿಕೆಯನ್ನು
ಎದುರಿಸಿದ ಈ ಪರಿ

# ಮೋದಿಯವರು ಬೆಲೆಯೇರಿಕೆಯನ್ನು ಎದುರಿಸಿದ ಈ ಪರಿ!

**ಬೆಲೆ ಏರಿಕೆಯ ಸ್ಥಿತಿಯನ್ನು ತಡೆದು ಜನರಿಗೆ ಅನುಕೂಲ ಮಾಡಿಕೊಡುವ ಮನಸ್ಸು ಸರ್ಕಾರಕ್ಕಿದ್ದರೆ ಅದನ್ನು ಸಾಧಿಸಲು ಹಲವು ದಾರಿಗಳಿದ್ದವು. ದೊಡ್ಡ ದೊಡ್ಡ ಮಾತನಾಡುವ ಸರ್ಕಾರ ವಾಸ್ತವವಾಗಿ ಈ ದಿಸೆಯಲ್ಲಿ ಏನನ್ನೂ ಮಾಡದಿರಲು ನಿರ್ಧರಿಸಿರುವಂತೆ ನಡೆದುಕೊಂಡಿದೆ. ಮಾರುಕಟ್ಟೆಯನ್ನು ಅದರ ದಾರಿಗೆ ಬಿಟ್ಟು ಬಡ ಜನ ಅದರ ಇಂತಹ ನೀತಿಗೆ ಬೆಲೆ ತೆರುವಂತೆ ಅದು ಮಾಡಿದೆ. ಜತೆಗೆ ಒಂದೆಡೆಯಲ್ಲಿ ತಾನು ಅಪಾರ ಸಂಖ್ಯೆಯ "ಲಾಭಾರ್ಥಿಗಳನ್ನು" ಸೃಷ್ಟಿಸಿರುವುದಾಗಿ ಕೊಚ್ಚಿಕೊಳ್ಳುತ್ತಲೇ ಇನ್ನೊಂದೆಡೆಯಲ್ಲಿ, ಆಧಾರ್‌ಗೆ ಸಂಯೋಜಿಸಿದ ವಿದ್ಯುನ್ಮಾನ ವಿತರಣಾ ವ್ಯವಸ್ಥೆಯನ್ನು ಜಾರಿಗೆ ತಂದು ದೊಡ್ಡ ಸಂಖ್ಯೆಯಲ್ಲಿ ಬಡ ಕುಟುಂಬಗಳನ್ನು ಹೊರಗಟ್ಟಿದೆ.**

**ಮೋದಿಯವರು 2024ರ ಸಾರ್ವತ್ರಿಕ ಚುನಾವಣೆಗಳಿಗೆ ಭರದಿಂದ ಸಿದ್ಧತೆ ಆರಂಭಿಸಿರುವ ಹಿನ್ನೆಲೆಯಲ್ಲಿ ಜನರನ್ನು ಪ್ರಮುಖವಾಗಿ ಬಾಧಿಸುವ ಬೆಲೆಯೇರಿಕೆ ತಡೆಯಲ್ಲಿ ಅವರ ನೇತೃತ್ವದ ಎರಡು ಸರಕಾರಗಳ ಒಂಭತ್ತು ವರ್ಷಗಳ ದಾಖಲೆಯತ್ತ ಒಂದು ನೋಟ.**

**ಮೂಲ: ಪೀಪಲ್ಸ್ ಡೆಮಾಕ್ರಸಿ, ಅನು: ಜಿ.ಎಸ್.ಮಣಿ**

ಬಿಜೆಪಿ ಯ 2014 ರ ಚುನಾವಣಾ ಪ್ರಣಾಳಿಕೆಯ ಪ್ರಾರಂಭ "ತಕ್ಷಣದ ಕಾರ್ಯ" ಎಂಬ ವಿಭಾಗದೊಂದಿಗೆ ಆಗಿತ್ತು ಮತ್ತು ಅದರಲ್ಲಿ ಮೊದಲ ಅಂಶವೇ ಬೆಲೆ ಏರಿಕೆ. ಅದು ಯುಪಿಎ ಸರ್ಕಾರವನ್ನು ಲಕ್ಷ ಲಕ್ಷ ಜನರ ಆಹಾರದ ಭದ್ರತೆಯನ್ನು ಅಪಾಯದಲ್ಲಿ ತಂದಿರಿಸಿತು, ಆಹಾರಗಳ ನಾಗಾಲೋಟದ ಬೆಲೆ ಏರಿಕೆ ಜನರ ಹೊಟ್ಟೆಯ ಮೇಲೆ ಹೊಡೆಯುತ್ತಿದೆ ಎಂದು ಆಪಾದಿಸಿತ್ತು.

ಐದು ವರ್ಷಗಳ ನಂತರ, 2019 ರಲ್ಲಿ ಆ ಪಕ್ಷದ ಪ್ರಣಾಳಿಕೆ ಈ ವಿಷಯದಲ್ಲಿ ಮೌನವಾಗಿತ್ತು ಅಷ್ಟೇ ಅಲ್ಲ "ಬೆಲೆ ಏರಿಕೆ" ಎಂಬ ಶಬ್ದ ಅದರ ಈ ದಸ್ತಾವೇಜಿನಲ್ಲಿ ನಾಪತೆಯಾಗಿತ್ತು. ಯಾಕೆ? ಬೆಲೆ ಏರಿಕೆಯ ಭೂತವನ್ನು ಅದು ಮಣಿಸಿತ್ತೇ ಅಥವಾ ಈ ವಿಷಯ ತನ್ನ ಕಾರ್ಯ ಸಾಧನೆಯ ಬಗೆಗೆ ಕೆಟ್ಟ ತೀರ್ಮಾನಕ್ಕೆ ಎಡೆ ಮಾಡಿಕೊಡುತ್ತದೆಂಬ ಅರಿವು ಹೀಗೆ ಮಾಡಿಸಿತೆ?

ನಾವು ಪುರಾವೆ ಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಅಧಿಕೃತ ಸಗಟು ಬೆಲೆ ಸೂಚ್ಯಂಕ ನೋಡಿದರೆ ಮೋದಿ ಸರ್ಕಾರ ಅಧಿಕಾರ ವಹಿಸಿಕೊಂಡ 2014 ರ ಮೇ ತಿಂಗಳಿಗೆ ಹೋಲಿಸಿದರೆ ಬೆಲೆಗಳು 2023 ರ ಮೇ ತಿಂಗಳಿನಲ್ಲಿ ಶೇ 30 ಕ್ಕಿಂತ ಸ್ವಲ್ಪ ಹೆಚ್ಚು ಏರಿವೆ. ಆದರೆ ಇದು ಸರಾಸರಿ ಮಾತ್ರ. ಅದೇ ಸೂಚ್ಯಂಕ ನೋಡಿದರೆ ಗೋಧಿಯ ಬೆಲೆ ಶೇ 53 ರಷ್ಟು, ದ್ವಿದಳ ಧಾನ್ಯಗಳ ಬೆಲೆ ಶೇ 53 ರಷ್ಟು, ಹಣ್ಣು ಮತ್ತು ತರಕಾರಿಗಳ ಬೆಲೆ ಶೇ 43 ರಷ್ಟು, ಹಾಲು ಶೇ 42 ರಷ್ಟು ಮತ್ತು ಮೊಟ್ಟೆಗಳು ಶೇ 45 ರಷ್ಟು ದುಬಾರಿಯಾಗಿದ್ದವು. ಸ್ಥೂಲವಾಗಿ ಇವು ದಿನ ನಿತ್ಯ ಸೇವಿಸುವ ಆಹಾರಗಳು.

ಆಳಕ್ಕೆ ಇಳಿದು ನೋಡಿದರೆ ಚಿತ್ರ ಇನ್ನೂ ಗಂಭೀರವಾಗಿ ಕಾಣುತ್ತದೆ. ಗ್ರಾಹಕ ವ್ಯವಹಾರಗಳ ಮಂತ್ರಾಲಯದ ಚಿಲ್ಲರೆ ಬೆಲೆ ದತ್ತಾಂಶ ನೋಡಿದರೆ, ಕಳೆದ ಒಂಬತ್ತು ವರ್ಷಗಳ ಅವಧಿಯಲ್ಲಿ (2014 ರ ಮೇ ನಿಂದ 2023 ರ ಮೇ), ಗೋಧಿ ಹಿಟ್ಟು ಶೇ 50 ರಷ್ಟು ಮತ್ತು ಅಕ್ಕಿಯ ಬೆಲೆ ಶೇ 43 ರಷ್ಟು ಏರಿರುವುದು ಗೊತ್ತಾಗುತ್ತದೆ. ಇದಕ್ಕಿಂತ ಮಾಂಸ ತಿನ್ನದವರ ಅಥವಾ ಮಾಂಸ ಕೊಳ್ಳುವ ಸಾಮರ್ಥ್ಯವಿಲ್ಲದ ಬಡ ಜನರಿಗೆ ಪ್ರೊಟೀನುಗಳನ್ನು ಪೂರೈಸುವ ದ್ವಿದಳ ಧಾನ್ಯಗಳ ಬೆಲೆ ನೋಡಿದರೆ ಗಾಬರಿಯಾಗುತ್ತದೆ. ತೊಗರಿಯ ಬೆಲೆ ತಿಂಗಳಿಗೆ ಶೇ 83 ರಷ್ಟು ಏರಿದ್ದರೆ, ಉದ್ದಿನ ಬೆಲೆ ಶೇ 62 ರಷ್ಟು ಮತ್ತು ಕಡಲೆ ಬೆಲೆಯ ಬೆಲೆ ಶೇ 52 ರಷ್ಟು ಏರಿತ್ತು. ಅಡುಗೆ ಎಣ್ಣೆಗಳ ಬೆಲೆ ನೋಡಿ: ಶೇಂಗಾ ಎಣ್ಣೆ ಶೇ 57 ರಷ್ಟು ದುಬಾರಿಯಾಗಿದ್ದರೆ, ಸಾಸಿವೆ ಎಣ್ಣೆ ಶೇ 46 ರಷ್ಟು ತುಟ್ಟಿಯಾಗಿದೆ. ಸೋಯಾ ಎಣ್ಣೆ ಶೇ 60 ರಷ್ಟು ಬೆಲೆ ಏರಿಕೆ ಕಂಡಿದೆ. ಬಡವರ ವನಸ್ಪತಿ ಎಣ್ಣೆ ಶೇ 70 ರಷ್ಟು ದುಬಾರಿಯಾಗಿದೆ. ಹಾಗೆಯೇ ಸೂರ್ಯಕಾಂತಿ ಎಣ್ಣೆ ಮತ್ತು ತಾಳೆ ಎಣ್ಣೆಗಳು ಅನುಕ್ರಮವಾಗಿ ಶೇ 41 ಮತ್ತು ಶೇ 49 ರಷ್ಟು ಬೆಲೆ ಹೆಚ್ಚಳವನ್ನು ಈ ಅವಧಿಯಲ್ಲಿ ಕಂಡಿವೆ.

**ಉಪ್ಪು, ಯಾವುದಿಲ್ಲದಿದ್ದರೆ ಅಡುಗೆಯೇ ಸಾಧ್ಯವಿಲ್ಲವೋ ಅದು ಶೇ 53 ರಷ್ಟು ತುಟ್ಟಿಯಾಗಿದೆ. ಟೊಮಾಟೊ ಶೇ 130 ರಷ್ಟು ಬೆಲೆ ಹೆಚ್ಚಳ ಕಂಡಿದೆ. ಇವೆಲ್ಲ ಬಡ ಜನರ ಆಹಾರ ಭದ್ರತೆಗೆ ಏನು ಮಾಡುತ್ತವೆ ಮೋದಿಯವರೇ?**

ನೆನಪಿಡಿ, ಈ ಅಧಿಕೃತ ದರಗಳು ಒಂಬತ್ತು ವರ್ಷಗಳ ಅವಧಿಯ ಏರಿಕೆಯನ್ನಷ್ಟೇ ಹಿಡಿದಿಡುತ್ತವೆ. ಈ ಒಂಬತ್ತು ವರ್ಷಗಳಲ್ಲಿನ ಒಂದೊಂದು ಸಾಮಗ್ರಿಯ ಬೆಲೆಗಳಲ್ಲಿ ದಿನದಿಂದ ದಿನದ ಏರಿಕೆಯನ್ನು ಇವು ಗ್ರಹಿಸುವುದಿಲ್ಲ. ಉದಾಹರಣೆಗೆ ಅರಹರ್ ಬೇಳೆಯ ಬೆಲೆ 2015 ರ ಸೆಪ್ಟೆಂಬರ್–ನವೆಂಬರ್ ಅವಧಿಯಲ್ಲಿ ಕಿಲೋಕ್ಕೆ 200 ರೂಪಾಯಿಗಳಿಗೆ ಮತ್ತು ಸಕ್ಕರೆ ಬೆಲೆ 2017 ರಲ್ಲಿ ಕಿಲೋಕ್ಕೆ 50 ರೂಪಾಯಿಗಳಿಗೂ ಏರಿದ್ದನ್ನು ಇವು ಹೇಳುವುದಿಲ್ಲ. ಮೋದಿ ಸರ್ಕಾರದ ಮೊದಲ ವರ್ಷದಲ್ಲೇ ಈರುಳ್ಳಿಯ ಬೆಲೆ ಕಿಲೋಕ್ಕೆ 100 ರೂಪಾಯಿಗಳಿಗೂ ಏರಿತ್ತು ಹಾಗೂ ನಂತರ ಅದು ಹಲವು ದಿಡೀರ್ ಏರಿಕೆ ಕಂಡಿದೆ. 2015 ರ ಅಕ್ಟೋಬರನಲ್ಲಿ ಸಾಸಿವೆ ಎಣ್ಣೆಯ ಬೆಲೆ ಕಿಲೋಕ್ಕೆ 150 ರೂಪಾಯಿಗಳನ್ನು ಮೀರಿ ಹೋಗಿತ್ತು. ಕಳೆದೊಂದು ವರ್ಷದ ಹಿಂದೆ ಅದು ಕಿಲೋಕ್ಕೆ 200 ರೂಪಾಯಿಗಳಿಗೂ ಮೇಲೆ ಹೋಗಿತ್ತು. ಈ ಕೆಲವು ತಿಂಗಳುಗಳಲ್ಲಿ ಟೊಮಾಟೊ ಬೆಲೆ ಕಿಲೋಕ್ಕೆ 100 ರೂಪಾಯಿಗಳನ್ನು ಮೀರಿರುವುದು ದೇಶದ ವಿವಿಧ ಭಾಗಗಳಲ್ಲಿ ಕಂಡಿದೆ. ಅನುಕೂಲಸ್ತರಿಗೆ ಇಂತಹ ದಿಡೀರ್ ಏರಿಕೆ ಅಷ್ಟಾಗಿ ಅನಿಸದೆ ಇರಬಹುದು. ಆದರೆ ಎರಡು ಹೊತ್ತಿನ ಊಟಕ್ಕೆ ಹೆಣಗುವ ಬಡವರಿಗೆ ಇಂತಹ ಏರಿಕೆ ಬೇರೇನೋ ಅವಶ್ಯಕ ವಸ್ತುವನ್ನು ಬಿಡಲೇಬೇಕಾದಂತಹ ಸ್ಥಿತಿಗೆ ತಳ್ಳಿ ಬಿಡುತ್ತದೆ ಎಂಬುದು ವಾಸ್ತವ.

ಬೆಲೆ ಏರಿಕೆಯ ಇಂತಹ ಸ್ಥಿತಿಯನ್ನು ತಡೆದು ಜನರಿಗೆ ಅನುಕೂಲ ಮಾಡಿಕೊಡುವ ಮನಸ್ಸು ಸರ್ಕಾರಕ್ಕಿದ್ದರೆ ಅದನ್ನು ಸಾಧಿಸಲು ಹಲವು ದಾರಿಗಳು ಇವೆ.

ಬೆಲೆ ಸ್ಥಿರೀಕರಣ ನಿಧಿ ಇತ್ಯಾದಿಗಳ ಬಗೆಗೆ ದೊಡ್ಡ ದೊಡ್ಡ ಮಾತನಾಡುವ ಸರ್ಕಾರ ವಾಸ್ತವವಾಗಿ ಈ ದಿಸೆಯಲ್ಲಿ ಏನನ್ನೂ ಮಾಡದಿರಲು ನಿರ್ಧರಿಸಿರುವಂತೆ ನಡೆದುಕೊಂಡಿದೆ. ಮಾರುಕಟ್ಟೆಯನ್ನು ಅದರ ದಾರಿಗೆ ಬಿಟ್ಟು ಬಡ ಜನ ಅದರ ಇಂತಹ ನೀತಿಯ ಬೆಲೆ ತೆರುವಂತೆ ಅದು ಮಾಡಿದೆ.

**ಇಂತಹ ಬೆಲೆ ಏರಿಕೆಗಳು ರೈತರ ಆದಾಯವನ್ನು ಹೆಚ್ಚಳ ಮಾಡಿವೆಯೇ?**

ಇಲ್ಲ. ಕಳೆದ 2020–21 ರ ಅವಧಿಯಲ್ಲಿ ನ್ಯಾಯ ಬೆಲೆ ಮತ್ತು ಇತರ ಬೇಡಿಕೆಗಳನ್ನು ಹೊತ್ತು ದೊಡ್ಡ ರೈತ ಸಮೂಹವೇ ಕೋರೋನ ಮಹಾಸೋಂಕಿನ ಎದುರಲ್ಲೂ ದೆಹಲಿಯ ಸುತ್ತ ಮುತ್ತಲ ರಸ್ತೆಗಳ ಮೇಲೆ ಇದ್ದರು ಎಂಬುದೂ ವಾಸ್ತವ. ಇದೇ ಅವಧಿಯಲ್ಲಿ ರೈತರು ಬಳಸುವ ಲಾಗವಾಡುಗಳ – ರಸಗೊಬ್ಬರ, ಕೀಟ ನಾಶಕಗಳು, ಡೀಸೆಲ್ , ಮೇವು, ಇತ್ಯಾದಿ– ಬೆಲೆಗಳು ಅಂಕೆ ಇಲ್ಲದೆ ನೆಗೆದವು ಎಂಬುದೂ ವಾಸ್ತವ. ನೀರಾವರಿ ಪಂಪ್ಸೆಟ್ಟುಗಳಲ್ಲಿ ಬಳಸುವ ಡೀಸೆಲ್ ಬೆಲೆ ಶೇ 23.7 ರಷ್ಟು 2015–16 ಮತ್ತು 2016–17 ರ ನಡುವೆ ಏರಿತು. ಹೀಗೆ ಮೋದಿ ಆಡಳಿತದಡಿ ಈ ಎಲ್ಲ ಬೆಲೆಗಳು ಮಿತಿ ಮೀರಿ ಏರಿಕೆಯಾಗಿ ರೈತಾಪಿಗಳಿಗೆ ಗೋಳು ತಂದಿತು.


**ಬೆಲೆಗಳ ಏರಿಕೆಯಲ್ಲಿ ಅತ್ಯಂತ ದೊಡ್ಡ ದ್ರೋಹವೆಂದರೆ ತೈಲ ಕ್ಷೇತ್ರದ್ದು**

ಅಂತರಾಷ್ಟ್ರೀಯ ತೈಲ ಬೆಲೆಗಳು ಇಳಿತ ಕಂಡಾಗಲೂ ಅದರ ಲಾಭಗಳನ್ನು ಜನರಿಗೆ ವರ್ಗಾಯಿಸದೇ ಅವುಗಳ ಮೇಲೆ ಅಪಾರ ತೆರಿಗೆ ಹೇರಿ ಜನರನ್ನು ಹಿಂಡಿದ್ದು ಈ ತೈಲ ನೀತಿ. ಈ ಕೆಲವು ಅಂಶಗಳನ್ನು ನೋಡೋಣ.

ಈ ವರ್ಷದ ಜೂನ್ 27 ಕ್ಕೆ ದೆಹಲಿಯಲ್ಲಿ ತೈಲ ಬೆಲೆ 96.72 ರೂಪಾಯಿಗಳಾಗಿತ್ತು. ದೇಶದ ಇತರ ರಾಜ್ಯಗಳು ಮತ್ತು ನಗರಗಳಲ್ಲಿ ಅದು 100 ರೂಪಾಯಿಗಳ ಮೇಲೇ ಇತ್ತು. ಡೀಸೆಲ್ ಪ್ರತಿ ಲೀಟರಿಗೆ 89.62 ರ ದರದಲ್ಲಿ ಸ್ವಲ್ಪ ಕಡಿಮೆ ದುಬಾರಿಯಾಗಿತ್ತು ಅಷ್ಟೇ. ಇದೂ ಸಹ ಬೇರೆ ರಾಜ್ಯಗಳು ಮತ್ತು ನಗರಗಳಲ್ಲಿ ಹೆಚ್ಚಿನ ದರದಲ್ಲೇ ಇತ್ತು.

ಸರ್ಕಾರ ಇದರಲ್ಲಿ ತನ್ನ ಪಾತ್ರವೇನೂ ಇಲ್ಲ; ಯಾಕೆಂದರೆ ಈ ಬೆಲೆಗಳನ್ನು ತೈಲ ಕಂಪನಿಗಳು ನಿರ್ಧರಿಸುತ್ತವೆ ಎಂಬ ಸೋಗು ಹಾಕಿದೆ. ಈ ಸ್ವಾಯತ್ತ ಕಂಪನಿಗಳು ಮುಖ್ಯ ರಾಜ್ಯಗಳ ಚುನಾವಣೆ ಘೋಷಿಸಲ್ಪಟ್ಟಾಗ ವಾರಗಳೇ ಏಕೆ ತಿಂಗಳುಗಳ ಕಾಲ ಬೆಲೆಗಳನ್ನು ಸ್ಥಿರಗೊಳಿಸಿ ಹಿಡಿದಿರುತ್ತವೆ ಎಂಬುದೂ ವಾಸ್ತವ.

ಸತ್ಯವೇನೆಂದರೆ ನಾವು ಡೀಸೆಲ್‌ಗೆ ತೆರುವ ಶೇ 35 ರಷ್ಟು ಮತ್ತು ಪೆಟ್ರೋಲಿಗೆ ತೆರುವ ಬೆಲೆಯ ಶೇ 41 ರಷ್ಟು ತರಿಗೆಯಾಗಿರುತ್ತದೆ ಮತ್ತು ಇದರ ಬಹು ದೊಡ್ಡಭಾಗ ಕೇಂದ್ರ ಸರ್ಕಾರಕ್ಕೇ ಹೋಗುತ್ತದೆ ಎಂಬುದು. ಈ ತೆರಿಗೆಯನ್ನು ಕಡಿತಗೊಳಿಸಿ ಜನರಿಗೆ ನೆಮ್ಮದಿ ನೀಡುವುದು ಖಂಡಿತ ಸಾಧ್ಯ.




ಸರ್ಕಾರಿ ದತ್ತಾಂಶಗಳೇ ತೋರಿಸುವಂತೆ ಪೆಟ್ರೋಲಿಯಂ ಕಚ್ಚಾ ಮತ್ತು ಉತ್ಪನ್ನಗಳ ಮೇಲಿನ ತೆರಿಗೆ ಸಂಗ್ರಹದ ಕೇಂದ್ರ ಸರ್ಕಾರದ ಪಾಲು 2014–15 ರಲ್ಲಿ 1.26 ಲಕ್ಷ ಕೋಟಿ ರೂಪಾಯಿಗಳಿದ್ದದ್ದು 2021–22 ರಲ್ಲಿ 4.32 ಲಕ್ಷ ಕೋಟಿಗಳಿಗೇರಿದ್ದು, ಇದು ಶೇ 243 ರಷ್ಟು ಏರಿಕೆ!! ಇದು ಪ್ರತಿ ಕುಟುಂಬಕ್ಕೆ ವರ್ಷಕ್ಕೆ 13000 ರೂಪಾಯಿಗಳ ಹೊರೆ ಹೇರಿದಂತೆ!! ಸರ್ಕಾರ ಇದು ಪೆಟ್ರೋಲ್ ಡೀಸೆಲ್ ಬಳಸುವವರು ಮಾತ್ರ ತೆರುವ ಹೊರೆ ಎನ್ನುತ್ತದೆ. ಆದರೆ ವಾಸ್ತವದಲ್ಲಿ ಪ್ರತಿಯೊಬ್ಬರೂ ಕೊಳ್ಳುವ ಪ್ರತಿ ವಸ್ತುವಿನ ಸಾಗಾಣಿಕೆಯಲ್ಲೂ ಈ ಹೊರೆಯ ಭಾರವಿದೆ.

ಹೀಗೆ ಇಂದು ಅಂತರ್ರಾಷ್ಟ್ರೀಯ ತೈಲ ಬೆಲೆಗಳು 2014 ಕ್ಕಿಂತ ಕಡಿಮೆ ಇರುವಾಗ, ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರದ ತೆರಿಗೆಗಳಿಂದಾಗಿ ಪೆಟ್ರೋಲಿಯಂ ಮತ್ತು ಅದರ ಉತ್ಪನ್ನಗಳ ಬೆಲೆಗಳು ತೀವ್ರವಾಗಿ ಏರಿವೆ. ಉದಾಹರಣೆಗೆ, ಭಾರತ ಆಮದು ಮಾಡಿಕೊಳ್ಳುವ ಪೆಟ್ರೋಲಿಯಂ ಉತ್ಪನ್ನಗಳ ಬುಟ್ಟಿಯ (ಸಾಮಾನ್ಯವಾಗಿ ಭಾರತ ತನ್ನ ಅವಶ್ಯಕತೆಗಳಿಗೆ ತಕ್ಕಂತೆ ಆಮದು ಮಾಡಿಕೊಳ್ಳುವ ಕಚ್ಚಾ ಪೆಟ್ರೋಲಿಯಂ ಮತ್ತು ಇತರ ಉತ್ಪನ್ನಗಳು) ಬೆಲೆ ಬ್ಯಾರಲ್ ಗೆ 2014 ರಲ್ಲಿ 107 ಡಾಲರುಗಳಷ್ಟು ಇತ್ತು. ಈ ವರ್ಷದ ಮೇ ತಿಂಗಳಲ್ಲಿ ಈ ಬುಟ್ಟಿಯ ಬೆಲೆ ಬ್ಯಾರಲ್ಲಿಗೆ 75 ಡಾಲರುಗಳಷ್ಟು ಇತ್ತು.

ಮೋದಿ ತಮ್ಮ ಒಂದು ಚುನಾವಣಾ ಭಾಷಣದಲ್ಲಿ ಅಂತರ್ರಾಷ್ಟ್ರೀಯ ತೈಲ ಬೆಲೆಗಳು ತಮ್ಮ ಅವಧಿಯಲ್ಲಿ ಇಳಿಯುತ್ತಿರುವುದು ತಮ್ಮ ಅದೃಷ್ಟ ಎಂದು ಕೊಚ್ಚಿಕೊಂಡಿದ್ದರು. ಇದು ಭಾರತದ ಎಲ್ಲ ಪ್ರಜೆಗಳಿಗೂ ಅದೃಷ್ಟವಾಗಬೇಕಿತ್ತು. ಅದು ಹಾಗಾಗದಿರುವುದಕ್ಕೆ ಕಾರಣ ಈ ಸರ್ಕಾರ ಜನರಿಗೆ ಈ ಬೆಲೆ ಇಳಿತದ ಲಾಭದ ನೆರವು ನೀಡಲು ತಯಾರಿಲ್ಲದೆ ಇರುವುದು. ಪರಿಣಾಮವಾಗಿ, ಅಂತರ್ರಾಷ್ಟ್ರೀಯ ತೈಲ ಬೆಲೆಗಳು ಶೇ 30 ರಷ್ಟು ಇಳಿದಿರುವಾಗ ನಮ್ಮ ದೇಶದಲ್ಲಿ ಬೆಲೆಗಳು ಶೇ 35 ರಷ್ಟು ಹೆಚ್ಚಾಗಿರುವುದು, ಹಾಗೆಯೇ ಡೀಸೆಲ್ ದರ ಶೇ 60 ರಷ್ಟು ಹೆಚ್ಚಾಗಿರುವುದು ಸರ್ಕಾರದ ನೀತಿಯ ವಿಪರ್ಯಾಸದಿಂದಾಗಿ!! ಇದೆ ಸಮಯದಲ್ಲಿ, ಸಹಾಯ ಧನವಿಲ್ಲದ ಅಡುಗೆ ಅನಿಲದ ಬೆಲೆ ಸೆಪ್ಟೆಂಬರ್ 2016 ರ ನಂತರ ಎರಡು ಪಟ್ಟಿಗಿಂತ ಹೆಚ್ಚಾಗಿದೆ– 466.5 ರೂಪಾಯಿಗಳಿಂದ 1053 ರೂಪಾಯಿಗಳಿಗೆ ಏರಿತು.

ಇಂತಹ ಬೆಲೆ ಏರಿಕೆಯ ತಾಪದಿಂದ ಬಡ ಜನರನ್ನು ರಕ್ಷಿಸಲು ಸರ್ಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವ್ಯಾಪ್ತಿಯನ್ನು ವಿಸ್ತರಿಸಬಹುದಾಗಿತ್ತು. ಬದಲಿಗೆ ಆಧಾರ್‌ಗೆ ಸಂಯೋಜಿಸಿದ ವಿದ್ಯುನ್ಮಾನ ವಿತರಣಾ ವ್ಯವಸ್ಥೆಯನ್ನು ಜಾರಿಗೆ ತಂದು ದೊಡ್ಡ ಸಂಖ್ಯೆಯಲ್ಲಿ ಬಡ ಕುಟುಂಬಗಳನ್ನು ಹೊರಗಿಟ್ಟು ತಾನು ಅಪಾರ ಸಂಖ್ಯೆಯ "ಲಾಭಾರ್ಥಿಗಳನ್ನು" ಸೃಷ್ಟಿಸಿರುವುದಾಗಿ ಕೊಚ್ಚಿಕೊಳ್ಳುತ್ತಿದೆ.



# ಸೌಹಾರ್ದ ಸಂದೇಶ ಸಾರಿದ ಶರಣ–ಸೂಫಿ–ಸಂತರ ಸಮಾವೇಶ

ನಮ್ಮ ದೇಶದಲ್ಲಿ ಎಲ್ಲ ಧರ್ಮದ, ಜನಾಂಗದ ಜನರಿದ್ದಾರೆ. ನಮ್ಮದು ಬಹುಸಂಸ್ಕೃತಿಯ ದೇಶ. ಅನೇಕ ಜಾತಿ, ಮತ, ಪಂಥಗಳಿವೆ. ಬೇರೆ ಬೇರೆ ವಿಚಾರ, ಆಚಾರ, ಆಹಾರ ಪದ್ಧತಿ, ಉಡಿಗೆ, ತೊಡಿಗೆ ಹೊಂದಿದ್ದಾರೆ. ನೂರಾರು ಭಾಷೆಗಳನ್ನು ಮಾತನಾಡುತ್ತಾರೆ. ಅನೇಕ ವೈವಿಧ್ಯತೆ, ವೈಶಿಷ್ಟ್ಯತೆಗಳನ್ನು ಹೊಂದಿದ್ದು ಸಾಮರಸ್ಯದಿಂದ ಬದುಕಿದ್ದಾರೆ ಮತ್ತು ಬದುಕುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಸಾಮರಸ್ಯ, ಸೌಹಾರ್ದತೆ, ಸಹಬಾಳ್ವೆ ಹದಗೆಟ್ಟು ಕೋಮುದ್ವೇಷ, ಹಿಂಸೆ, ಅಪನಂಬಿಕೆ, ಧಾರ್ಮಿಕ ಅಸಹಿಷ್ಣುತೆಗಳು ತಾಂಡವವಾಡುತ್ತಿವೆ. ಒಬ್ಬರ ಮೇಲೆ ಇನ್ನೊಬ್ಬರು ಭರವಸೆ ಇಡದಷ್ಟು ವಾತಾವರಣ ಹಾಳಾಗಿದೆ. ನಿತ್ಯೋಪಯೋಗಿ ವಸ್ತುಗಳ ಬೆಲೆ ಗಗನಕ್ಕೇರಿವೆ. ನಿರುದ್ಯೋಗ ಹೆಚ್ಚಾಗಿದೆ. ಬಡವರು ಬದುಕುವುದೇ ದುಸ್ತರವಾಗಿದೆ. ಆಪ್ರಾಪ್ತ ಬಾಲಕಿಯರ ಮೇಲೆ ಅತ್ಯಾಚಾರ, ಕೊಲೆಗಳು ದಿನ ನಿತ್ಯ ನಡೆಯುತ್ತಿವೆ. ಇದರಿಂದ ಜನ ಹತಾಶಗೊಂಡಿದ್ದಾರೆ. ಅಪರಾಧಿಗಳಿಗೆ ಕಾನೂನಿನ ಭಯವಿಲ್ಲದಂತಾಗಿದೆ. ಇವುಗಳನ್ನು ವಿರೋಧಿಸಿದವರಿಗೆ ದೇಶದ್ರೋಹದ ಪಟ್ಟ ಕಟ್ಟುತ್ತಿದ್ದಾರೆ.

ಕಲ್ಯಾಣ ಕರ್ನಾಟಕದ ಕಲಬುರ್ಗಿ, ಬೀದರ ಪ್ರದೇಶದ ಪ್ರತಿಪರರು, ಎಡಪಂಥೀಯ ಮತ್ತು ಮಾನವೀಯ ಕಳಕಳಿಯುಳ್ಳವರು ಸೇರಿ 'ಸೌಹಾರ್ದ ಕರ್ನಾಟಕ ವೇದಿಕೆ' ಯನ್ನು ರಚಿಸಿಕೊಂಡು, ಸಮಾಜದಲ್ಲಿ ಸಹಬಾಳ್ವೆ, ಸಾಮರಸ್ಯವನ್ನು ಕಾಪಾಡುವ ಉದ್ದೇಶದಿಂದ ಸರ್ವ ಧರ್ಮಿಯರು, ಎಲ್ಲ ಜಾತಿ, ಮತ, ಪಂಥದವರೊಂದಿಗೆ ಪ್ರೀತಿ, ವಿಶ್ವಾಸದಿಂದ ಬಾಳಿ, ಸಮಾಜದಲ್ಲಿ ಐಕ್ಯತೆಯನ್ನು ಸಾಧಿಸುವ ಉದ್ದೇಶದಿಂದ "ಶರಣ–ಸೂಫಿ–ಸಂತರ" ಸಮಾವೇಶವನ್ನು ಹಮ್ಮಿಕೊಂಡು, ಬೀದರ ಜಿಲ್ಲೆಯ ಚಿಟಗುಪ್ಪಾ, ಬಸವಕಲ್ಯಾಣ ಮತ್ತು ಹುಮನಾಬಾದ ಪಟ್ಟಣಗಳಲ್ಲಿ ಕಾರ್ಯಕ್ರಮವನ್ನು ಮಾಡಿ, ಜನರಲ್ಲಿ ಸಾಮರಸ್ಯ ಉಳಿಸುವ, ಬೆಳಸುವ ಕಾರ್ಯಕ್ರಮ ಹಮ್ಮಿಕೊಂಡು, ಜನರಲ್ಲಿ ಜಾಗ್ರತಿ ಮೂಡಿಸುವ ಕಾರ್ಯ ಮಾಡಿದ್ದಾರೆ.

ಈ ಸಮಾವೇಶದಲಿ ಭೌದ್ಧ, ಹಿಂದು. ಮುಸ್ಲಿಂ, ಕ್ರೈಸ್ತರು ಭಾಗವಹಿದರು. ಪಟ್ಟಣದ ಮುಖ್ಯ ಸ್ಥಳದಿಂದ ಕಾರ್ಯಕ್ರಮ ನಡೆಯುವ ಜಾಗದವರೆಗೆ ಮೆರಣಿಗೆಯಲ್ಲಿ ಘೋಷಣೆ ಹಾಕಿ ಜನರ ಗಮನವನ್ನು ಸೆಳೆದರು. 'ಶರಣ–ಸೂಫಿ–ಸಂತರ" ಇವರು ಬೇರೆ ಬೇರೆಯಾಗಿ ಕಂಡರು ಅವರೆಲ್ಲರದು ವಿಚಾರ ಒಂದೇ. ಮಾನವ ಕಲ್ಯಾಣ ಸಾಧಿಸುವುದೆ ಹೊರತು, ಮನುಷ್ಯ ಮನುಷ್ಯರ ನಡುವೆ ಭೇದ ಮಾಡುವುದಲ್ಲ. ಪರಸ್ಪರ ಪ್ರೀತಿ, ಪ್ರೇಮ, ಸಹಬಾಳ್ವೆ, ಸಹೋದರತೆ, ಸಾಮರಸ್ಯವನ್ನು ಪ್ರತಿಪಾದಿಸುತ್ತಾರೆ.

ಮಣಿಪುರ ರಾಜ್ಯದಲ್ಲಿ ನಡೆದ ಮಹಿಳೆಯರ ಮೇಲಿನ ದೌರ್ಜನ್ಯ, ಬತ್ತಲೆ ಮೆರವಣಿಗೆ, ಕೊಲೆ ಇತ್ತಾದಿಗಳನ್ನು ಖಂಡಿಸಿದರು. ಸಂಘ ಪರಿವಾರ ನಡೆಸುವ ಕೋಮುಗಲಭೆ ಮತ್ತು ದಂಗೆಗಳಲ್ಲಿ ಮಹಿಳೆಯರೆ ಪ್ರಥಮ ಬಲಿಯಾಗುತ್ತಾರೆ. ದೇಶ ಪ್ರೇಮದ ಹೆಸರಿನಲ್ಲಿ ದೇಶದ್ರೋಹ ಮತ್ತು ಜನದ್ರೋಹದ ಕೃತ್ಯಗಳನ್ನು ನಡೆಸುತ್ತಿರುವುದು ದುರಂತದ ಸಂಗತಿಯಾಗಿದೆ.

ಮಹಾರಾಷ್ಟ್ರದ ನಿಲಂಗಾ ತಾಲುಕಿನ ಉಸ್ತುರಿ ಕೋರಣೇಶ್ವರ ಮಠದ ಮಠಾದಿಪತಿಗಳಾದ ಶ್ರೀ ವಿಶ್ವನಾಥ ಸ್ವಾಮಿಜಿಯವರ ಸಾನಿಧ್ಯದಲ್ಲಿ ಕಾರ್ಯಕ್ರಮ ನಡೆಯಿತು. ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯರಾದ ಡಾ: ಮೀನಾಕ್ಷಿ ಬಾಳಿ, ಹೋರಾಟಗಾರ್ತಿ ಕೆ.ನೀಲಾ, ಫಾದರ ಸಚಿನ, ಶ್ರೀ ಎನ್.ವಿ ಖಾದಿ, ಮಿಲಿಂದ ಗುರೂಜಿ ಮುಂತಾದವರು ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತ ಪಡಿಸಿದರು.

ಬಿಜೆಪಿ ಸರ್ಕಾರ ಅತ್ಯಾಚಾರ, ಭ್ರಷ್ಟಾಚಾರ, ಕೊಲೆ, ಸುಲಿಗೆ, ಶೋಷಣೆ ಇತ್ಯಾದಿ ಕೃತ್ಯಗಳನ್ನು ಕಂಡು ಕಾಣದಂತೆ ವರ್ತಿಸುತ್ತಿದೆ. ಧಾರ್ಮಿಕ ದ್ವೇಷ ಬಿತ್ತುತಿದೆ. ಸಮಸ್ಯೆಗಳಿಗೆ ಸ್ಪಂದಿಸದೆ ಜನರ ಗಮನವನ್ನು ಬೇರೆಡೆ ಸೆಳೆದು ಕೃತ್ಯಗಳಿಗೆ ಕುಮ್ಮಕ್ಕು ನೀಡುತ್ತಿದೆ. ಕಾಲಾನುಕಾಲದಿಂದ ನಡೆದು ಬಂದ ಸಹಬಾಳ್ವೆ, ಸಮನ್ವಯ ಸಂಸ್ಕೃತಿಯ ಜಾಗದಲ್ಲಿ ಲಿಂಗ ತಾರತಮ್ಯ, ಜಾತಿ ಭೇದ, ಧಾರ್ಮಿಕ ಉನ್ಮಾದವನ್ನು ಹುಟ್ಟು ಹಾಕಿ ಬಡವರ ಬಾಳು ಮೂರಾಬಟ್ಟೆ ಮಾಡುತ್ತಿದೆಯೆಂದು ಅತಿಥಿಗಳು ಅಭಿಪ್ರಾಯ ಪಟ್ಟರು.



## ಜಂಟಿಯಾಗಿ ಮಹಿಳಾ ದೌರ್ಜನ್ಯ ತಡೆಗಾಗಿ ಜಿಲ್ಲೆಯಾದ್ಯಂತ ಅರಿವಿನ ಆಂದೋಲನ

# ಸಂಪನ್ಮೂಲ ವ್ಯಕ್ತಿಗಳನ್ನು ಸಿದ್ಧಪಡಿಸುವ ಕಾರ್ಯಾಗಾರ



ಪ್ರಾಸ್ತಾವಿಕ ಮತ್ತು ಸ್ವಾಗತ ಮಾತುಗಳನ್ನಾಡಿದ ಜನವಾದಿ ಮಹಿಳಾ ಸಂಘಟನೆ ಯ ಅಧ್ಯಕ್ಷರಾದ ಡಾ ಮೀನಾಕ್ಷಿ ಬಾಳಿಯವರು ಕಲಬುರಗಿ ಜಿಲ್ಲೆಯಲ್ಲಿ ಇತ್ತೀಚೆಗೆ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ಅತ್ಯಾಚಾರ ಹೆಚ್ಚುತ್ತಿರುವುದು ಚಿಂತಾಜನಕವಾಗಿದೆ ಎಂದರು. ಅತ್ಯಾಚಾರ ಗಳು ಜರುಗಿದ ನಂತರ ನಡೆಸುವ ಪ್ರತಿಭಟನೆಕ್ಕಿಂತ ಅವುಗಳು ಘಟಿಸದಂತೆ ಕಾವಲು ಕಾಯುವುದು, ಎಲ್ಲ ಬಗೆಯ ದೌರ್ಜನ್ಯ ಗಳು ನಿರ್ನಾಮವಾಗುವಂತೆ ನೋಡಿಕೊಳ್ಳುವುದೇ ನಮ್ಮ ಗುರಿ. ಅಸಲಿಗೆ ಇಂಥ ಘಟನೆಗಳಿಗೆ ಕಾರಣವಾಗಿರುವ ಲಿಂಗ ಅಸಮಾನತೆಯನ್ನು ಹೋಗಲಾಡಿಸಬೇಕು. ಅದಕ್ಕಾಗಿ ನಾವು ಸಮಾಜದ ಎಲ್ಲ ವಿಭಾಗಗಳಿಗೆ ಲಿಂಗ ಸಂವೇದನಾಶೀಲ ತರಬೇತಿ ನೀಡಬೇಕು. ತರಬೇತಿ ನೀಡುವ ಮಾಸ್ಟರ್ ಗಳನ್ನು ತಯಾರು ಮಾಡಲೆಂದೆ ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಸಸಿಗೆ ನೀರು ಎರೆಯುವ ಮೂಲಕ ಕಾರ್ಯಾಗಾರವನ್ನು ಉದ್ಘಾಟಿಸಿದ ಬೀ ಬೀ ರಜಾ ಮಹಿಳಾ ಪದವಿ ಕಾಲೇಜಿನ ಪ್ರಾಚಾರ್ಯರಾದ ಡಾ ಜೇಬಾ ಪರವೀನ್ ಅವರು ದೇಶದಲ್ಲಿ ಹೆಚ್ಚುತ್ತಿರುವ ಈ ದೌರ್ಜನ್ಯ ಗಳು ನಿಜವಾಗಿಯೂ ನಾಗರೀಕರು ತಲೆ ತಗ್ಗಿಸುವಂತೆ ಆಗಿದೆ. ನಾವು ಯಾವತ್ತೂ ಅರಿವಿನ ಆಂದೋಲನ ಮೂಡಿಸುವಲ್ಲಿ ಸಿದ್ಧರಾಗಿರಬೇಕು. ಪ್ರಜ್ಞಾ ವಂತರಾದ ನಮ್ಮೆಲ್ಲರ ಮೇಲೆ ಜವಾಬ್ದಾರಿ ಇದೆ ಎಂದರು. ನಂತರ ಅತಿಥಿಗಳಾಗಿದ್ದ. ಡಾ ರಾಜೇಂದ್ರ ಕೊಂಡಾ ಅವರು ದೇಶದಲ್ಲಿ ಸಂಭವಿಸುತ್ತಿರುವ ಅತ್ಯಾಚಾರ,ದೌರ್ಜನ್ಯ ಗಳ ಅಂಕಿ ಸಂಖ್ಯೆ ಗಳನ್ನು ವಿವರಿಸಿದರು. ಪ್ರತಿ ಹತ್ತು ರೇಪ್ ಗಳಲ್ಲಿ 6 ರೇಪ್ ಗಳು ಅಪ್ರಾಪ್ತ ಮಕ್ಕಳ ಮೇಲೆ ಘಟಿಸುತ್ತಿವೆ. ಆದರೆ ನಮ್ಮ ಕಾನೂನು ವಯಸ್ಕರ ಮೇಲಿನ ಅತ್ಯಾಚಾರ ಮತ್ತು ಅಪ್ರಾಪ್ತ ವಯಸ್ಕ ರ ಮೇಲಿನ ಅತ್ಯಾಚಾರ ಗಳ ನಡುವೆ ವ್ಯತ್ಯಾಸ ಮಾಡುವುದಿಲ್ಲ. ಇದನ್ನು ಕುರಿತು ಚರ್ಚೆ ಸುರು ಆಗಬೇಕಿದೆ ಎಂದು ವಿವರಿಸಿದರು. ಇನ್ನೋರ್ವ ಅತಿಥಿಗಳಾಗಿದ್ದ ನಿವೃತ್ತ ಪ್ರಾಧ್ಯಾಪಕ ರಾದ ಡಾ ಶಕುಂತಲಾ ದುರಗಿಯವರು ಸ್ತ್ರೀಯರು ಇಂದು ಹೊರಗೆ ಬಂದು ದುಡಿಯುವುದು ಅನಿವಾರ್ಯವಾಗಿ ದೆ. ಹೀಗಾಗಿ ಮನೆಯ ಒಳಗೂ ಹೊರಗೂ ರಕ್ಷಣೆ ನೀಡಬೇಕಾದುದು ನಮ್ಮೆಲ್ಲರ ಹೊಣೆ ಎಂದರು. ಅರಿವಿನ ಆಂದೋಲನ ಒಂದೇ ಇದಕ್ಕೆ ಶಾಶ್ವತ ಪರಿಹಾರವಾಗಬಲ್ಲದು ಎಂದರು.

ನಂತರ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ವಾಣಿ ಪೆರಿಯೋಡಿಯವರು ಹತ್ತಾರು ಚಟುವಟಿಕೆಗಳ ಮೂಲಕ,ಹಾಡು, ನೃತ್ಯ, ಮಾತುಕತೆಗಳೊಂದಿಗೆ ವಿಷಯ ಮಂಡಿಸಿದರು. ಅವರು ಮತ್ತೂ ಮುಂದುವರೆದು ನಾವು ಪ್ರಾಥಮಿಕ ಹಂತದ ಮಕ್ಕಳೊಂದಿಗೆ, ಹೈಸ್ಕೂಲ್ ಮಕ್ಕಳು, ಕಾಲೇಜು ಮಕ್ಕಳೊಂದಿಗೆ ಹೇಗೆ ಭಿನ್ನ ಭಿನ್ನವಾಗಿ ಮಾತಾಡಬೇಕು ಎಂಬುದನ್ನು ತುಂಬಾ ಪರಿಣಾಮಕಾರಿ ಯಾಗಿ ವಿವರಿಸಿದರು. ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾಗಿದ್ದ ನಾಗೇಂದ್ರಪ್ಪ ಅವರಾದ ಅವರು ನಮ್ಮ ವಿಭಾಗದಲ್ಲಿ 11000 ಶಿಕ್ಷಕರು ಅದರಲ್ಲಿ 6032 ಶಿಕ್ಷಕಿಯರು ಇದ್ದಾರೆ. ಇವರೆಲ್ಲರನ್ನೂ ಹೆಚ್ಚು ಕಡಿಮೆ ಈ ಅಭಿಯಾನದಲ್ಲಿ ಇಳಿಸಿದರೆ ಖಂಡಿತ ಸಕಾರಾತ್ಮಕ ಪರಿಣಾಮ ಬೀರುತ್ತದೆ ಎಂದರು. ಕೊನೆಗೆ ನೀಲಾ ಕೆ ಅವರು ಅಧ್ಯಕ್ಷೀಯ ಮಾತುಗಳನ್ನಾಡುತ್ತ ಒಟ್ಟು ಅಭಿಯಾನವು ಒಳಗೊಳ್ಳಬೇಕಾದ ಅಂಶಗಳನ್ನು ವಿವರಿಸಿದರು. ಪ್ರಾರಂಭದಲ್ಲಿ ವಿ ಜಿ ಕಾಲೇಜಿನ ಸಂಗೀತ ಉಪನ್ಯಾಸಕಿ ಡಾ ರೇಣುಕಾ ಹಾಗರಗುಂಡಗಿಯವರು ವಿಜ್ಞಾನ ಗೀತೆಯನ್ನು ಹಾಡಿದರು. ಲೈಂಗಿಕ ದೌರ್ಜನ್ಯ ತಡೆ ಸಮಿತಿ ಸಂಚಾಲಕರಾದ ಡಾ ಚಂದ್ರಕಲಾ ಪಾಟೀಲ ಉಪಸ್ಥಿತರಿದ್ದು ಇತಿಹಾಸ ಉಪನ್ಯಾಸಕಾರದ ಶಿವಲೀಲಾ ಧೋತ್ರೆಯವರು ಕಾರ್ಯಕ್ರಮ ನಿರೂಪಿಸಿದರು. ಕೊನೆಯದಾಗಿ ಆಳಂದ ಸಮುದಾಯ ತಂಡದ ಮುಖಂಡರಾದ ಸಿದ್ಧಾರ್ಥ ಹೊಸೂರೆ ಅವರು ವಂದನಾರ್ಪಣೆ ಮಾಡಿದರು. ಸಮುದಾಯ ಸಂಗಾತಿಗಳ ಕ್ರಾಂತಿಗೀತೆಯೊಂದಿಗೆ ಮುಕ್ತಾಯವಾಯಿತು.



# ಇಂಡಿಯ' ಬಣವನ್ನು ಮತ್ತಷ್ಟು ವಿಸ್ತರಿಸಲು, ಜನಚಳುವಳಿಗಳನ್ನು ಸೆಳೆಯಲು ಪ್ರಯತ್ನಗಳನ್ನು ಕೇಂದ್ರೀಕರಿಸಬೇಕು

**–ಸಿಪಿಐ(ಎಂ) ಪೊಲಿಟ್ ಬ್ಯೂರೋ**

ಬಿಜೆಪಿಯನ್ನು ಕೇಂದ್ರ ಸರ್ಕಾರ ಮತ್ತು ಪ್ರಭುತ್ವದ ಅಧಿಕಾರವನ್ನು ನಿಯಂತ್ರಿಸುವುದರಿಂದ ದೂರವಿಡಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮತ್ತಷ್ಟು ಬಲಪಡಿಸಲು, 'ಇಂಡಿಯ' ಬಣದ ಮತ್ತಷ್ಟು ಕ್ರೋಡೀಕರಣ ಮತ್ತು ವಿಸ್ತರಣೆಗಾಗಿ ಕೆಲಸ ಮಾಡಲು ಸೆಪ್ಟೆಂಬರ್ 16–17 ರಂದು ನವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಪೊಲಿಟ್ ಬ್ಯೂರೋ ನಿರ್ಧರಿಸಿದೆ. 'ಇಂಡಿಯ' ಬಣವನ್ನು ಮತ್ತಷ್ಟು ವಿಸ್ತರಿಸಲು ಮತ್ತು ಇದರಲ್ಲಿ ಜನಚಳುವಳಿಗಳ ಗಮನಾರ್ಹ ವಿಭಾಗಗಳನ್ನು ,ಸೆಳೆಯಲು ಪ್ರಯತ್ನಗಳನ್ನು ಕೇಂದ್ರೀಕರಿಸಬೇಕು ಎಂದು ಅದು ಕರೆ ನೀಡಿದೆ.

'ಒಂದು ರಾಷ್ಟ್ರ ಒಂದು ಚುನಾವಣೆ'ಯ ಘೋಷಣೆಯನ್ನು ಚರ್ಚಿಸಿದ ಅದು ಸರ್ಕಾರವನ್ನು ಆಯ್ಕೆ ಮಾಡುವ ಜನರ ಹಕ್ಕನ್ನು ನಿರಾಕರಿಸಿ ಕೇಂದ್ರದ ಆಳ್ವಿಕೆಯನ್ನು ಹೇರಿದರೆ, ಅದು ಪ್ರಜಾಪ್ರಭುತ್ವ–ವಿರೋಧಿ ಕ್ರಮ ಎಂದು ಈ ಪ್ರಸ್ತಾಪವನ್ನು ಬಲವಾಗಿ ವಿರೋಧಿಸಿದೆ.

ಸರಕಾರ ಪ್ರಕಟಿಸಿರುವ ಚುನಾವಣಾ ಆಯೋಗದಲ್ಲಿ ನೇಮಕದ ಕುರಿತಾದ ಮಸೂದೆ ಖಂಡಿತವಾಗಿಯೂ ಪ್ರಜಾಪ್ರಭುತ್ವ ವಿರೋಧಿಯಾಗಿದೆ ಮತ್ತು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವ ತನ್ನ ಸಾಂವಿಧಾನಿಕ ಆದೇಶವನ್ನು ಜಾರಿಗೊಳಿಸುವ ಚುನಾವಣಾ ಆಯೋಗದ ಪ್ರಯತ್ನಗಳನ್ನು ದುರ್ಬಲಗೊಳಿಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ ರಾಜ್ಯ ಸಭೆಯಲ್ಲಿ ಈ ಮಸೂದೆಯನ್ನು ವಿರೋಧಿಸುವಂತೆ ಮತ್ತು ಸೋಲಿಸುವಂತೆ 'ಇಂಡಿಯ' ಬಣದ ಎಲ್ಲಾ ಪಕ್ಷಗಳನ್ನು ಸಿಪಿಐ(ಎಂ) ಒತ್ತಾಯಿಸಿದೆ.

ಸಭೆಯ ನಂತರ ಸಿಪಿಐ(ಎಂ) ಪ್ರಕಟಿಸಿರುವ ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ.

**'ಇಂಡಿಯ' ಬಣ**

ಭಾರತೀಯ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪ, ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಜನರ ಮೂಲಭೂತ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ರಕ್ಷಿಸುವ ಪ್ರಯತ್ನಗಳನ್ನು ಬಲಪಡಿಸಲು 'ಇಂಡಿಯ' ಬಣದ ಮತ್ತಷ್ಟು ಕ್ರೋಡೀಕರಣ ಮತ್ತು ವಿಸ್ತರಣೆಗಾಗಿ ಕೆಲಸ ಮಾಡಲು ಪೊಲಿಟ್ ಬ್ಯೂರೋ ನಿರ್ಧರಿಸಿದೆ. ಬಿಜೆಪಿಯನ್ನು ಕೇಂದ್ರ ಸರ್ಕಾರ ಮತ್ತು ಪ್ರಭುತ್ವದ ಅಧಿಕಾರವನ್ನು ನಿಯಂತ್ರಿಸುವುದರಿಂದ ದೂರವಿಡಬೇಕಾದ ಅಗತ್ಯವಿದೆ. ಈ ಪ್ರಯತ್ನಗಳನ್ನು ಮತ್ತಷ್ಟು ಬಲಪಡಿಸಲು ಪೊಲಿಟ್‌ಬ್ಯೂರೋ ನಿರ್ಧರಿಸಿದೆ. ದೇಶಾದ್ಯಂತ ಸರಣಿ ಸಾರ್ವಜನಿಕ ಸಭೆಗಳನ್ನು ಆಯೋಜಿಸಲು ಮತ್ತು ಮುಂಬರುವ ಚುನಾವಣೆಯಲ್ಲಿ ಬಿಜೆಪಿಯ ಸೋಲನ್ನು ಖಚಿತಪಡಿಸುವುದಕ್ಕೆ ಜನರನ್ನು ಸಜ್ಜುಗೊಳಿಸಲು ಪಾಟ್ನಾ, ಬೆಂಗಳೂರು ಮತ್ತು ಮುಂಬೈನಲ್ಲಿ ನಡೆದ 'ಇಂಡಿಯ' ಬಣದ ಇದುವರೆಗಿನ ಮೂರು ಸಭೆಗಳಲ್ಲಿ ಸಿಪಿಐ(ಎಂ) ನಿಲುವನ್ನು ಪೊಲಿಟ್ ಬ್ಯೂರೋ ಅನುಮೋದಿಸಿದೆ. 'ಇಂಡಿಯ' ಬಣವನ್ನು ಮತ್ತಷ್ಟು ವಿಸ್ತರಿಸಲು ಮತ್ತು ಇದರಲ್ಲಿ ಜನಚಳುವಳಿಗಳ ಗಮನಾರ್ಹ ವಿಭಾಗಗಳನ್ನು ಸೆಳೆಯಲು ಪ್ರಯತ್ನಗಳನ್ನು ಕೇಂದ್ರೀಕರಿಸಬೇಕು. ಎಲ್ಲಾ ನಿರ್ಧಾರಗಳನ್ನು ಅಂಗಪಕ್ಷಗಳ ನಾಯಕರು ತೆಗೆದುಕೊಳ್ಳುತ್ತಾರೆ, ಆದರೆ ಅಂತಹ ನಿರ್ಧಾರಗಳಿಗೆ ಅಡ್ಡಿಯಾಗುವ ಯಾವುದೇ ಸಂಘಟನಾ ರಚನೆಗಳು ಇರಬಾರದು.

**ಒಂದು ರಾಷ್ಟ್ರ ಒಂದು ಚುನಾವಣೆ**

ಇದು ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಿರುವ ಸಂಸದೀಯ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲೆ ಅವಳಿ ಆಕ್ರಮಣವಾಗಿದೆ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಯನ್ನು ಹೇಗೆ ಜಾರಿಗೊಳಿಸಬೇಕು ಎಂಬುದನ್ನು ಶಿಫಾರಸು ಮಾಡಲು ಭಾರತದ ಮಾಜಿ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ನೇತೃತ್ವದ 8 ಸದಸ್ಯರ ಸಮಿತಿಯನ್ನು ಮೋದಿ ಸರ್ಕಾರ ನೇಮಿಸಿದೆ. ಅಂತಹ ಪ್ರಸ್ತಾಪದಲ್ಲಿ ಸಂವಿಧಾನಕ್ಕೆ ಗಮನಾರ್ಹ ತಿದ್ದುಪಡಿಗಳಲ್ಲದೆ, ಲೋಕಸಭೆ ಚುನಾವಣೆಗಳೊಂದಿಗೆ ಸರಿಹೊಂದುವಂತೆ ಮಾಡಲು ರಾಜ್ಯ ವಿಧಾನ ಸಭೆಗಳ ಕಾರ್ಯಕಾಲವನ್ನು ಮೊಟಕುಗೊಳಿಸುವುದು ಅಥವಾ ವಿಸ್ತರಿಸುವುದು ಕೂಡ ಸೇರಿರುತ್ತದೆ. ಸದನದಲ್ಲಿ ಸರ್ಕಾರವು ತನ್ನ ಬಹುಮತವನ್ನು ಕಳೆದುಕೊಂಡಾಗ, ಅದರ ಮುಂದುವರಿಕೆ ಕಾನೂನು ಬಾಹಿರವಾಗಿರುತ್ತದೆ. ಸರ್ಕಾರವನ್ನು ಆಯ್ಕೆ ಮಾಡುವ ಜನರ ಹಕ್ಕನ್ನು ನಿರಾಕರಿಸಿ ಕೇಂದ್ರದ ಆಳ್ವಿಕೆಯನ್ನು ಹೇರಿದರೆ, ಅದು ಪ್ರಜಾಪ್ರಭುತ್ವ–ವಿರೋಧಿಯಾಗಿದೆ. ಈ ಪ್ರಸ್ತಾಪವನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸುತ್ತದೆ.

**ಅದಾನಿ ವ್ಯವಹಾರ**

ಅದಾನಿ ಸಮೂಹ ತನ್ನ ಕಂಪನಿಗಳ ಷೇರುಗಳ ಬೆಲೆಯಲ್ಲಿ ಕೈಚಳಕ ನಡೆಸಿರುವುದರ ಬಗ್ಗೆ ಹೊರಹೊಮ್ಮಿರುವ ತಾಜಾ ಪುರಾವೆಗಳು ಗಂಭೀರವಾದ ತನಿಖೆಯ ಅಗತ್ಯವನ್ನು ತೋರಿಸಿವೆ. ಮತ್ತು ಈ ವಿಷಯದ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್ ಯಾವುದನ್ನೂ ಮುಚ್ಚಿ ಹಾಕದಂತೆ ಎಂದು ಖಚಿತಪಡಿಸಬೇಕಾಗಿದೆ. ಫೈನಾನ್ಶಿಯಲ್ ಟೈಮ್ಸ್ ಮತ್ತು ದಿ ಗಾರ್ಡಿಯನ್, 'ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿ ಮಾಡುವ ಯೋಜನೆ'(ಒಸಿಸಿಆರ್‌ಪಿ) ಒದಗಿಸಿರುವ ಮಾಹಿತಿಗಳ ಆಧಾರದ ಮೇಲೆ, ವಿನೋದ್ ಅದಾನಿಯವರ ಇಬ್ಬರು ನಿಕಟ ಸಹವರ್ತಿಗಳು ಬರ್ಮುಡಾದಲ್ಲಿ ಹೂಡಿಕೆ ನಿಧಿಯನ್ನು ಹೇಗೆ ಬಳಸಿದರು ಮತ್ತು ಅದಾನಿಯಲ್ಲಿ ಕೋಟ್ಯಂತರ ಡಾಲರ್ ಷೇರುಗಳನ್ನು ಖರೀದಿಸಲು ಚಿಪ್ಪು(ಶೆಲ್) ಕಂಪನಿಗಳನ್ನು ಹೇಗೆ ಸ್ಥಾಪಿಸಿದರು ಎಂಬುದನ್ನು ಬಹಿರಂಗಪಡಿಸಿವೆ. ಕಂಪನಿಗಳು. ಇದು ಅಸ್ತಿತ್ವದಲ್ಲಿರುವ ನಿಯಂತ್ರಕ ನಿಬಂಧನೆಗಳ ಸಂಪೂರ್ಣ ಉಲ್ಲಂಘನೆಯಾಗಿದೆ.

2014 ರಲ್ಲಿ ಅದಾನಿ ಕಂಪನಿಗಳ ಕಡಲಾಚೆಯ ನಿಧಿ ನೀಡಿಕೆಯ ವಿಷಯವನ್ನು ಸೆಬಿ ಪರಿಶೀಲಿಸುತ್ತಿತ್ತು, ಆದರೆ ನಂತರ ವಿಚಾರಣೆಯನ್ನು ಮುಚ್ಚಿತು ಎಂದು ವರದಿಗಳು ತೋರಿಸುತ್ತವೆ.

**ಚುನಾವಣಾ ಆಯೋಗ ಕುರಿತ ಶಾಸನ**

ಮೋದಿ ಸರ್ಕಾರ ಚುನಾವಣಾ ಆಯುಕ್ತರ ನೇಮಕಾತಿ ಮತ್ತು ಸಂಬಂಧಿತ ವಿಷಯಗಳ ಕರಡು ಮಸೂದೆಯನ್ನು ಪ್ರಸಾರ ಮಾಡಿದೆ. ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರನ್ನು ಪ್ರಧಾನ ಮಂತ್ರಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಭಾರತದ ಮುಖ್ಯ ನ್ಯಾಯಾಧೀಶರನ್ನು ಒಳಗೊಂಡ ಆಯ್ಕೆ ಸಮಿತಿಯು ನೇಮಿಸಬೇಕು ಎಂದು ಪ್ರಸ್ತಾಪಿಸಿದ ಸುಪ್ರೀಂಕೋರ್ಟ್ ಸಂವಿಧಾನ ಪೀಠದ ತೀರ್ಪನ್ನು ಈ ಮಸೂದೆ ಇಲ್ಲಗಳೆಯುತ್ತದೆ. ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಪರಿಗಣಿಸಬೇಕಾದ ಈ ಪ್ರಸ್ತಾವಿತ ಶಾಸನವು ಭಾರತದ ಮುಖ್ಯ ನ್ಯಾಯಾಧೀಶರ ಬದಲಿಗೆ ಪ್ರಧಾನ ಮಂತ್ರಿಯಿಂದ ನಾಮ ನಿರ್ದೇಶನಗೊಳ್ಳುವ ಕೇಂದ್ರ ಸಂಪುಟದ ಮಂತ್ರಿಯನ್ನು ಸೇರಿಸುತ್ತದೆ. ಇದು ಚುನಾವಣಾ ಆಯೋಗದ ಮೇಲೆ ಸರ್ಕಾರದ ಪ್ರಾಬಲ್ಯವನ್ನು ಖಾತ್ರಿಪಡಿಸುತ್ತದೆ, ಇದು ಖಂಡಿತವಾಗಿಯೂ ಪ್ರಜಾಪ್ರಭುತ್ವ ವಿರೋಧಿಯಾಗಿದೆ ಮತ್ತು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವ ತನ್ನ ಸಾಂವಿಧಾನಿಕ ಆದೇಶವನ್ನು ಜಾರಿಗೊಳಿಸುವ ಚುನಾವಣಾ ಆಯೋಗದ ಪ್ರಯತ್ನಗಳನ್ನು ದುರ್ಬಲಗೊಳಿಸುತ್ತದೆ.

ರಾಜ್ಯಸಭೆಯಲ್ಲಿ ಈ ಮಸೂದೆಯನ್ನು ವಿರೋಧಿಸುವಂತೆ ಮತ್ತು ಸೋಲಿಸುವಂತೆ 'ಇಂಡಿಯ' ಬಣದ ಎಲ್ಲಾ ಪಕ್ಷಗಳನ್ನು ಸಿಪಿಐ(ಎಂ) ಒತ್ತಾಯಿಸುತ್ತದೆ.

**ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ದಾಳಿ**

ಜಮ್ಮು ಮತ್ತು ಕಾಶ್ಮೀರದ ಅನಂತ್ ನಾಗ್‌ನಲ್ಲಿಗರೋಲ್ ಕಾರ್ಯಾಚರಣೆಯ ವೇಳೆ ಭಯೋತ್ಪಾದಕರ ಗುಂಡಿಗೆ ಬಲಿಯಾದ ಕರ್ನಲ್ ಮನ್‌ಪ್ರೀತ್ ಸಿಂಗ್, ಮೇಜರ್ ಆಶಿಶ್ ಧೋಂಚಕ್ ಮತ್ತು ಡಿವೈಎಸ್‌ಪಿ ಹುಮಾಯೂನ್ ಮುಝಮ್ಮಿಲ್ ಭಟ್ ಅವರ ಶೌರ್ಯ ಮತ್ತು ತ್ಯಾಗಕ್ಕೆ ಪೊಲಿಟ್ ಬ್ಯೂರೋ ವಂದನೆ ಸಲ್ಲಿಸಿದೆ. ಕಾಶ್ಮೀರದಲ್ಲಿ ಶಾಂತಿ ಮತ್ತು ಸಹಜತೆಯನ್ನು ಸ್ಥಾಪಿಸಲಾಗಿದೆ ಎಂಬ ಮೋದಿ ಸರ್ಕಾರದ ಹೇಳಿಕೆಗಳನ್ನು ಇದು ಸಂಪೂರ್ಣವಾಗಿ ಬಯಲಿಗೆಳೆಯುತ್ತದೆ.

ದು:ಖತಪ್ತ ಕುಟುಂಬಗಳಿಗೆ ಪೊಲಿಟ್ ಬ್ಯೂರೋ ತನ್ನ ಆಳವಾದ ಸಂತಾಪವನ್ನು ವ್ಯಕ್ತಪಡಿಸುತ್ತದೆ.

**ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಕೊಲೆ**

ಸೆಪ್ಟೆಂಬರ್ 5 ರಂದು ತ್ರಿಪುರಾದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿಯಿಂದ ಸಂಪೂರ್ಣ ರಿಗ್ಗಿಂಗ್ ಮಾಡಿರುವುದನ್ನು ಪೊಲಿಟ್ ಬ್ಯೂರೋ ಖಂಡಿಸಿದೆ. ಸರ್ಕಾರ ಮತ್ತು ಕಾನೂನು ಜಾರಿ ಅಧಿಕಾರಿಗಳ ನೇರ ಉಸ್ತುವಾರಿಯಲ್ಲಿ ಭಯೋತ್ಪಾದನೆಯ ಅಸಾಧಾರಣ ಪರಿಸ್ಥಿತಿಯನ್ನು ಸೃಷ್ಟಿಸಲಾಯಿತು. ಸಂಪೂರ್ಣ ರಿಗ್ಗಿಂಗ್ ನಡೆಸಲಾಯಿತು. ಈ ಚುನಾವಣೆಗಳನ್ನು ತಡೆಹಿಡಿಯಬೇಕಾಗಿತ್ತು ಮತ್ತು ಕಟ್ಟುನಿಟ್ಟಾದ ಭದ್ರತಾ ವ್ಯವಸ್ಥೆಗಳ ಅಡಿಯಲ್ಲಿ ಹೊಸ ಚುನಾವಣೆಗಳನ್ನು ನಡೆಸಬೇಕಾಗಿತ್ತು. ತ್ರಿಪುರಾದಲ್ಲಿ ಆಡಳಿತಾರೂಢ ಬಿಜೆಪಿಯ ಇಂತಹ ಭಯೋತ್ಪಾದನೆ ಮತ್ತು ಪ್ರಜಾಪ್ರಭುತ್ವದ ಹತ್ಯೆಯನ್ನು ಪೊಲಿಟ್ ಬ್ಯೂರೋ ಖಂಡಿಸಿದೆ.

**ಜಿ 20 ಶೃಂಗಸಭೆ**

ಜಿ 20 ಶೃಂಗಸಭೆಯ ನಂತರ, ಮೋದಿ ಸರ್ಕಾರವು ತನ್ನನ್ನು 'ಭೌಗೋಳಿಕ ದಕ್ಷಿಣ' (ಗ್ಲೋಬಲ್ ಸೌತ್)ದ ನಾಯಕ ಎಂದು ಬಿಂಬಿಸಿಕೊಂಡಿತು. ಆದರೂ, ಕ್ಯೂಬಾದ ಹವಾನಾದಲ್ಲಿ ನಡೆದ ಶೃಂಗಸಭೆಯಲ್ಲಿ ಭಾಗವಹಿಸುವುದಾಗಿ ಪ್ರಕಟಿಸಿದ್ದ ಭಾರತದ ವಿದೇಶಾಂಗ ಸಚಿವರು ಗೈರು ಹಾಜರಾಗಿದ್ದರು. ಸ್ಪಷ್ಟವಾಗಿ, ಮೋದಿ ಸರ್ಕಾರವು ಯುಎಸ್‌ಎ ನ ಅಡಿಯಾಳು ಮಿತ್ರನಾಗಿ, ಕ್ಯೂಬಾಗೆ ಪ್ರಯಾಣಿಸಿ 'ಭೌಗೋಳಿಕ ದಕ್ಷಿಣ'ದ ಈ ಅತ್ಯಂತ ಪ್ರಾತಿನಿಧಿಕ ಸಭೆಯಲ್ಲಿ ಮಂತ್ರಿಮಟ್ಟದ ಉಪಸ್ಥಿತಿಯನ್ನು ಹೊಂದಿರದಿರಲು ನಿರ್ಧರಿಸಿದೆ.

**ಕೇಂದ್ರ ಸಮಿತಿಯ ಸಭೆ**

ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆಯನ್ನು 27–29 ಅಕ್ಟೋಬರ್ 2023ರಂದು ಕರೆಯಲಾಗಿದೆ.

## ಚಾರಿತ್ರಿಕ ವಿಪರ್ಯಾಸ–ಸಿಐಟಿಯು

**ಹೊಸ ಸಂಸದ್ ಕಟ್ಟಡದ ಉದ್ಘಾಟನೆಯಂದೇ ದೇಶಕ್ಕೆ ಕೀರ್ತಿತಂದ ಮಹಿಳಾ ಕುಸ್ತಿಪಟುಗಳನ್ನು ದಿಲ್ಲಿಯ ಬೀದಿಗಳಲ್ಲಿ ಥಳಿಸಿದ ಸರಕಾರ ಅದೇ ಕಟ್ಟಡದಲ್ಲಿ ನಡೆದಿರುವ ಮೊದಲ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಮೊದಲ ಮಸೂದೆಯಾಗಿ ತರಬೇಕಾಗಿ ಬಂದಿರುವುದು ಒಂದು ಐತಿಹಾಸಿಕ ವಿಪರ್ಯಾಸ ಎಂದು ಸಿಐಟಿಯು ಈ ಬಗ್ಗೆ ಪ್ರತಿಕ್ರಿಯಿಸುತ್ತ ಹೇಳಿದೆ.**

ಸಂಸತ್ತು ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿಯ ಬೇಡಿಕೆಯು ಮಹಿಳಾ ಚಳುವಳಿ, ಸಿಐಟಿಯು ಮತ್ತು ಹಲವಾರು ಇತರ ಕಾರ್ಮಿಕ ಸಂಘಟನೆಗಳ ಬಹುಕಾಲದ ಬೇಡಿಕೆಯಾಗಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು, ಅದರ ಎರಡನೇ ಅಧಿಕಾರಾವಧಿಯಲ್ಲಿ ಆರು ತಿಂಗಳಿಗಿಂತಲೂ ಕಡಿಮೆ ಅವಧಿ ಉಳಿದಿರುವಾಗ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು 128 ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆಯಾಗಿ ನಾಟಕೀಯವಾಗಿ ಪರಿಚಯಿಸಿದೆ. ಆದರೆ ಅದರ ಅನುಷ್ಠಾನವನ್ನು ಜನಗಣತಿಯೊಂದಿಗೆ ಜೋಡಿಸಿದೆ ಎಂದು ಸಿಐಟಿಯು ಹೇಳಿದೆ. ಹಾಗಾಗಿ ಈಗಲೂ ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿ 2029 ರ ಮೊದಲು ಜಾರಿಗೆ ಬರುವ ನಿರೀಕ್ಷೆಯಿಲ್ಲ ಎಂದು ಅದು ಹೇಳಿದೆ.

ಹೀಗೆ ಮನುವಾದಿ ಸಿದ್ಧಾಂತ ಮತ್ತು ಕುಖ್ಯಾತ ಮಹಿಳಾ ವಿರೋಧಿ ಧೋರಣೆಯಿಂದ ಗುರುತಿಸಿಕೊಂಡಿರುವ ಈ ಬಿಜೆಪಿ ಸರಕಾರದ ಅವಧಿಯ ಅಂತ್ಯದಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿರುವುದು ತನ್ನ ವೈಫಲ್ಯಗಳನ್ನು ಮರೆಮಾಚಲು ಪ್ರತಿಷ್ಠೆ ಕಟ್ಟುವ ವಂಚಕ ಕೃತ್ಯವೆಂದೇ ಭಾವಿಸಬೇಕಾಗಿದೆ ಎಂದು ಸಿಐಟಿಯು ಹೇಳಿದೆ.

ಬಿಜೆಪಿ ಸಂಸದ ಬ್ರಿಜ್ ಭೂಷಣ್ ಸರಣ್ ಸಿಂಗ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪದ ಮೇಲೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿರುವ ಒಲಿಂಪಿಯನ್ ಮಹಿಳಾ ಕುಸ್ತಿಪಟುಗಳ ಬಗ್ಗೆ ಈ ಬಿಜೆಪಿ ಸರ್ಕಾರದ ಧೋರಣೆಯನ್ನು ನೆನಪಿಸಿಕೊಳ್ಳಬೇಕು. ಕಾನೂನು ಪ್ರಕಾರ ಕ್ರಮ ಕೈಗೊಳ್ಳುವ ಬದಲು ದೇಶಕ್ಕೆ ಕೀರ್ತಿ ತಂದ ಮಹಿಳಾ ಕುಸ್ತಿಪಟುಗಳನ್ನು ಥಳಿಸಲಾಗಿದೆ. ಮತ್ತು ಹೊಸ ಸಂಸತ್ ಭವನದ ಉದ್ಘಾಟನೆಯ ದಿನದಂದೇ ಬೀದಿಗಳಲ್ಲಿ ಹೊಡೆಯಲಾಗಿದೆ.

ಸಿಐಟಿಯು ಮತ್ತು ಅದರ ಮಹಿಳಾ ಉಪಸಮಿತಿ, ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ (ಸಿಐಟಿಯು), ಮಹಿಳಾ ಸಂಘಟನೆಗಳೊಂದಿಗೆ ಕಳೆದ ಮೂರು ದಶಕಗಳಿಂದ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿಗಾಗಿ ಹೋರಾಟಗಳಲ್ಲಿ ಸತತವಾಗಿ ಮುಂಚೂಣಿಯಲ್ಲಿದೆ. ಪ್ರಾತಿನಿಧ್ಯಕ್ಕಾಗಿನ ಈ ಹೋರಾಟವನ್ನು ಇದು ಕಾರ್ಯಗತಗೊಳ್ಳುವವರೆಗೆ ಮುಂದುವರೆಸುವುದು ಒಟ್ಟಾರೆಯಾಗಿ ಕಾರ್ಮಿಕ ವರ್ಗದ ಚಳುವಳಿ ಮತ್ತು ನಿರ್ದಿಷ್ಟವಾಗಿ ದುಡಿಯುವ ಮಹಿಳೆಯರ ಕರ್ತವ್ಯವಾಗಿದೆ ಎಂದು ಸಿಐಟಿಯು ಹೇಳಿದೆ.

**ತೆಲಂಗಾಣದ ಸಶಸ್ತ್ರ ರೈತ ಹೋರಾಟವು ನಿಜಾಮರ ಊಳಿಗಮಾನ್ಯ ಆಳ್ವಿಕೆಯನ್ನು ಕೊನೆಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ರೈತರು ಸ್ವಾಧೀನಪಡಿಸಿಕೊಂಡ ಹೆಚ್ಚಿನ ಭೂಮಿಯನ್ನು ಭೂಮಾಲೀಕರು ಮತ್ತೆ ವಶಪಡಿಸಿಕೊಳ್ಳುವುದನ್ನು ತಡೆಯಲಾಯಿತು. ಆದರೆ, ಊಳಿಗಮಾನ್ಯ ಪದ್ಧತಿಯನ್ನು ಬೇರು ಸಮೇತ ಕಿತ್ತೊಗೆಯುವ ಗುರಿ ತೆಲಂಗಾಣ ಮತ್ತು ದೇಶದಲ್ಲಿ ಇನ್ನೂ ಉಳಿದಿದೆ.**

# ಸೆಪ್ಟೆಂಬರ್ 17ರ ವಿಮೋಚನಾ ದಿನ: ತೆಲಂಗಾಣ ರೈತ ಸಶಸ್ತ್ರ ಹೋರಾಟದ ಹಿರಿಮೆಯನ್ನು ಮರೆಮಾಚುವ ಪ್ರಯತ್ನ



**ಬಿ.ವಿ. ರಾಘವುಲು**
ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರು

ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಸೆಪ್ಟೆಂಬರ್ 17 ರಂದು ಸಭೆಗಳು ಮತ್ತು ಇತರ ಕಾರ್ಯಕ್ರಮಗಳನ್ನು ನಡೆಸಿದವು. ಈ ದಿನವನ್ನು ರಾಷ್ಟ್ರೀಯ ಏಕತಾ ದಿನವನ್ನಾಗಿ ವ್ಯಾಪಕವಾಗಿ ಆಚರಿಸಲು ತೆಲಂಗಾಣದ ಬಿಆರ್‌ಎಸ್ (ಭಾರತ್ ರಾಷ್ಟ್ರ ಸಮಿತಿ) ಸರ್ಕಾರ ಕರೆ ನೀಡಿತು. ವಿಮೋಚನಾ ದಿನದ ಹೆಸರಿನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮುಖ್ಯ ಅತಿಥಿಯಾಗಿ ಬಿಜೆಪಿ ಸಾರ್ವಜನಿಕ ಸಭೆಯನ್ನು ಆಯೋಜಿಸಿತು. ಕಾಂಗ್ರೆಸ್ ಪಕ್ಷವೂ ಚುನಾವಣಾ ಪ್ರಚಾರದ ದಿನವೇ ಅದ್ಧೂರಿ ಸಭೆ ನಡೆಸಿತು. ಈ ಸಭೆಯಲ್ಲಿ ಸೋನಿಯಾ ಗಾಂಧಿ ಮತ್ತು ಇತರ ನಾಯಕರು ಭಾಗವಹಿಸಿದ್ದರು. ನಿಜಾಮರ ಊಳಿಗಮಾನ್ಯ ಆಳ್ವಿಕೆಯಿಂದ ತೆಲಂಗಾಣ ವಿಮೋಚನೆಗೊಂಡಿತು ಎಂದು ಸಂಭ್ರಮಿಸುವುದಕ್ಕಿಂತ, ಮುಂಬರುವ ವಿಧಾನಪರಿಷತ್ ಮತ್ತು ಸಂಸತ್ತಿನ ಚುನಾವಣೆಗಳ ಲಾಭ ಪಡೆಯುವುದೇ ಈ ಪಕ್ಷಗಳ ಆತುರದ ಹಿಂದಿನ ಕಾರಣವಾಗಿದೆ. ಆದ್ದರಿಂದಲೇ ಈ ಪಕ್ಷಗಳು ತಮ್ಮ ರಾಜಕೀಯ ಮತ್ತು ಚುನಾವಣಾ ಅಗತ್ಯಗಳಿಗೆ ತಕ್ಕಂತೆ ಸೆಪ್ಟೆಂಬರ್ 17ರ ಐತಿಹಾಸಿಕ ಸಂದರ್ಭವನ್ನು ಅರ್ಥೈಸಿ ತಿರುಚಿ ಜನರನ್ನು ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿವೆ. ಇದರಲ್ಲಿ ಬಿಜೆಪಿ ಮತ್ತು ಸಂಘಪರಿವಾರದ ಶಕ್ತಿಗಳು ಊಳಿಗಮಾನ್ಯ ಆಡಳಿತದ ವಿರುದ್ಧದ ವೀರಾವೇಶದ ಜನರ ಹೋರಾಟವನ್ನು ಸುಳ್ಳು ಮತ್ತು ವಿರೂಪಗಳೊಂದಿಗೆ ಮುಸ್ಲಿಂ ರಾಜನ ವಿರುದ್ಧ ಹಿಂದೂಗಳ ದಂಗೆ ಎಂದು ಬಿಂಬಿಸಲು ಪ್ರಯತ್ನಿಸುತ್ತಿವೆ. ಇವುಗಳಿಗೆ ವ್ಯತಿರಿಕ್ತವಾಗಿ, ಕಮ್ಯುನಿಸ್ಟರು ಮಾತ್ರ ಹೈದರಾಬಾದ್ ರಾಜ್ಯವನ್ನು ನಿಜಾಮರ ಆಳ್ವಿಕೆಯಿಂದ ವಿಮೋಚನೆಗಾಗಿ ವೀರ ರೈತ ಹೋರಾಟದ ಸತ್ಯ ಮತ್ತು ಪರಂಪರೆಯನ್ನು ಸಾರ್ವಜನಿಕರ ಮುಂದೆ ತರುತ್ತಿದ್ದಾರೆ.

ಅವರು ಸೆಪ್ಟೆಂಬರ್ 17 ಅನ್ನು ಅವರವರ ಅಭಿಪ್ರಾಯಗಳು ಮತ್ತು ಅಗತ್ಯಗಳಿಗೆ ಅನುಗುಣವಾಗಿ ವಿಲೀನ ದಿನ, ವಿಮೋಚನಾ ದಿನ, ನವಾಬನ ಶರಣಾಗತಿ ದಿನ ಎಂದು ಅರ್ಥೈಸುತ್ತಾರೆ. ಈ ಎಲ್ಲಾ ವ್ಯಾಖ್ಯಾನಗಳಲ್ಲಿ ಸ್ವಲ್ಪ ಸತ್ಯ ಇರಬಹುದು. ಸೆಪ್ಟೆಂಬರ್ 17 ರಂದು, ನಿಜಾಮರ ಪಡೆಗಳು ಒಕ್ಕೂಟದ ಪಡೆಗಳಿಗೆ ಶರಣಾದವು. ಹೈದರಾಬಾದ್ ರಾಜ್ಯವನ್ನು ಭಾರತೀಯ ಒಕ್ಕೂಟದಲ್ಲಿ ವಿಲೀನಗೊಳಿಸಲು ನಿಜಾಮರು ಒಪ್ಪಿಕೊಂಡರು. ಆ ಮೂಲಕ ಹೈದರಾಬಾದಿನ ಜನತೆಗೆ ನಿಜಾಮರ ಆಡಳಿತದಿಂದ ಮುಕ್ತಿ ದೊರಕಿತು. ಇದನ್ನು ಯಾರೂ ಅಲ್ಲಗಳೆಯುವುದಿಲ್ಲ. ಈ ವಿವರಗಳನ್ನು ಮಾತ್ರ ಉಲ್ಲೇಖಿಸುವುದು ತೆಲಂಗಾಣ ರೈತ ಸಶಸ್ತ್ರ ಹೋರಾಟದ ಹಿರಿಮೆಯನ್ನು ಮರೆಮಾಚುವ ಪ್ರಯತ್ನವಾಗುತ್ತದೆ. ಇನ್ನೂ ಮುಂದುವರಿದು, ಬಿಜೆಪಿ ಮತ್ತು ಸಂಘಪರಿವಾರದ ಶಕ್ತಿಗಳು ಸೆಪ್ಟೆಂಬರ್ 17 ರ ಕುರಿತು ಮಾಡುತ್ತಿರುವ ತಪ್ಪು ಮಾಹಿತಿ ಮತ್ತು ತಿರುಚುವಿಕೆಗಳು ತೆಲಂಗಾಣ ರೈತರ ತ್ಯಾಗವನ್ನು ಅವಮಾನಿಸುತ್ತಿವೆ.

**ಆರ್‌ಎಸ್‌ಎಸ್‌ಗೂ ವಿಮೋಚನೆಗೂ ಸಂಬಂಧವಿಲ್ಲ**

ಹೈದರಾಬಾದ್ ಪ್ರಾಂತ್ಯದ ವಿಲೀನಕ್ಕೂ, ವಿಮೋಚನೆಗೂ ಸಂಬಂಧವೇ ಇಲ್ಲದ ಸಂಘಪರಿವಾರ ಹಾಗೂ ಅದರ ರಾಜಕೀಯ ಸಂಘಟನೆಯಾದ ಬಿಜೆಪಿ 'ವಿಮೋಚನಾ ದಿನ'ಕ್ಕೆ ಹರಸಾಹಸ ಪಡುತ್ತಿವೆ. ಸೆಪ್ಟೆಂಬರ್ 17ರ ಬಗ್ಗೆ ಅವರು ಮಾಡುತ್ತಿರುವ ಪ್ರಚಾರ ಅಸಹ್ಯಕರವಾಗಿದೆ. ಯಾರು ಯಾರಿಂದ ವಿಮೋಚನೆಗೊಂಡಿದ್ದಾರೆ? ವಿಮೋಚನಾ ಚಳವಳಿಯಲ್ಲಿ ಪಾಲ್ಗೊಂಡವರು ಯಾರು? ಅದಕ್ಕಾಗಿ ತ್ಯಾಗ ಮಾಡಿದವರು ಯಾರು? ಇಂತಹ ಪ್ರಶ್ನೆಗಳನ್ನು ಕೇಳಿದರೆ ಅವರದು ಒಂದೇ ಉತ್ತರ. ನಿಜಾಮ ನವಾಬನು ಮುಸಲ್ಮಾನನಾಗಿದ್ದರಿಂದ ಮತ್ತು ರಾಜ್ಯದ ಬಹುಪಾಲು ಜನರು ಹಿಂದೂಗಳಾಗಿದ್ದರಿಂದ, ಸೆಪ್ಟೆಂಬರ್ 17 ರಂದು ನಿಜಾಮರ ಆಳ್ವಿಕೆ ಕೊನೆಗೊಂಡಿತು, ಆದ್ದರಿಂದ ಹಿಂದೂ ಜನರು ಮುಸ್ಲಿಂ ರಾಜನಿಂದ ವಿಮೋಚನೆಗೊಂಡರು ಎಂದು ಹೇಳುತ್ತಾರೆ. ಇದು ಅಗ್ಗದ ವಾದ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಆಗಸ್ಟ್ 15ರ ದಿನವನ್ನು ಇಂಗ್ಲೆಂಡ್ ರಾಣಿ ವಿಕ್ಟೋರಿಯಾಳ ಆಳ್ವಿಕೆಯಿಂದ ಹಿಂದೂ ಜನರು ವಿಮೋಚನೆಗೊಂಡ ದಿನವೆಂದು ಪ್ರಕಟಿಸಿದರೆ ಎಷ್ಟು ವಿಕೃತವಾಗಿ ಇರುತ್ತದೆಯೋ, ತೆಲಂಗಾಣ ವಿಮೋಚನೆ ಕುರಿತು ಬಿಜೆಪಿ ವಾದ ಕೂಡ ಅದೇ ರೀತಿ ಇದೆ.

ಕಾಶ್ಮೀರವನ್ನು ಹೈದರಾಬಾದ್‌ಗಿಂತ ಮೊದಲು ಅಕ್ಟೋಬರ್ 26, 1947 ರಂದು ಒಕ್ಕೂಟಕ್ಕೆ ಸೇರಿಸಲಾಯಿತು. ಆದರೆ ಬಿಜೆಪಿ ಕಾಶ್ಮೀರದಲ್ಲಿ ವಿಮೋಚನಾದಿನವನ್ನು ಆಚರಿಸುವುದಿಲ್ಲ. ಹಾಗೆ ಆಚರಿಸಿದರೆ, ಅಲ್ಲಿ ಮುಸ್ಲಿಂ ಜನರಿಗೆ ಹಿಂದೂ ರಾಜನಿಂದ ಮುಕ್ತಿ ಸಿಕ್ಕಿತು ಎಂದು ಹೇಳಬೇಕಾಗುತ್ತದೆ. ಕಮ್ಯುನಿಸ್ಟರ ನೇತೃತ್ವದಲ್ಲಿ ನಡೆದ ಸಂಘಟಿತ ಹೋರಾಟದಿಂದಾಗಿ ತಿರುವಾಂಕೂರು ರಾಜ್ಯವು 30 ಜೂನ್ 1947 ರಂದು ಒಕ್ಕೂಟದೊಂದಿಗೆ ವಿಲೀನಗೊಂಡಿತು. ಬಿಜೆಪಿಯ ವ್ಯಾಖ್ಯಾನದ ಪ್ರಕಾರ, ಹಿಂದೂ ರಾಜನ ವಿರುದ್ಧದ ಹೋರಾಟದಲ್ಲಿ ಹಿಂದೂ ಜನರು ಭಾಗವಹಿಸಿದರು ಎಂದು ಹೇಳಬೇಕು. ಕಮ್ಯುನಿಸ್ಟ್ ನೇತೃತ್ವದ ಸಶಸ್ತ್ರ ಹೋರಾಟದ ಪರಿಣಾಮವಾಗಿ ತ್ರಿಪುರಾ ರಾಜ್ಯವು ಸೆಪ್ಟೆಂಬರ್ 9, 1949 ರಂದು ದೇಶದೊಂದಿಗೆ ವಿಲೀನಗೊಂಡಿತು. ಅಲ್ಲಿನ ಬುಡಕಟ್ಟು ರಾಜಪ್ರಭುತ್ವದ ವಿರುದ್ಧ ಬುಡಕಟ್ಟು ಜನರು ಕಮ್ಯುನಿಸ್ಟರ ನೇತೃತ್ವದಲ್ಲಿ ಬಂಡಾಯವೆದ್ದರು ಎಂದೇ ಹೇಳಬೇಕು. ಬಿಜೆಪಿಯವರು ಇವುಗಳ ಬಗ್ಗೆ ಮಾತನಾಡುವುದಿಲ್ಲ. ಏಕೆಂದರೆ ಧಾರ್ಮಿಕ ವಿರೂಪಗಳೊಂದಿಗೆ ಮಾತನಾಡಲು ಸಾಧ್ಯವಿಲ್ಲ.

**ಎಲ್ಲ ಸಾಮಾಜಿಕ ಭೇದ ಮರೆತು ಎಲ್ಲರೂ ಒಗ್ಗಟ್ಟಾಗಿ**

ನಿಜಾಮರ ಆಡಳಿತದ ವಿರುದ್ಧ ಹೋರಾಡಿ ಬಲಿದಾನ ಮಾಡಿದವರಲ್ಲಿ ಹಿಂದೂಗಳೂ ಸೇರಿದ್ದಾರೆ, ಮುಸ್ಲಿಮರಿದ್ದಾರೆ, ಎಲ್ಲ ಧರ್ಮದವರೂ ಇದ್ದಾರೆ. ಗ್ರಾಮೀಣ ಸಮಾಜದಲ್ಲಿ ಎಲ್ಲ ಜಾತಿ, ಸಮುದಾಯಗಳಿವೆ. ಎಲ್ಲಾ ರೀತಿಯ ಭಾಷೆಗಳಿವೆ. ನಿಜಾಮನ ಊಳಿಗಮಾನ್ಯ ಆಳ್ವಿಕೆಯ ಅನ್ಯಾಯ ಮತ್ತು ಅಕ್ರಮಗಳು ಯಾವುದೇ ವರ್ಗವನ್ನು ಬಿಡಲಿಲ್ಲ. ಎಲ್ಲ ಸಾಮಾಜಿಕ ಭೇದ ಮರೆತು ಎಲ್ಲರೂ ಒಗ್ಗಟ್ಟಾಗಿ ವಿರೋಧಿಸಿದರು. ಈ ಏಕತೆಯನ್ನು ಸಾಧಿಸುವಲ್ಲಿ, ದೇಶಾದ್ಯಂತ ಭುಗಿಲೆದ್ದ ಸ್ವಾತಂತ್ರ್ಯ ಚಳವಳಿಯಿಂದ ಪ್ರಭಾವಿತರಾದ ರಾಷ್ಟ್ರೀಯವಾದಿಗಳು, ಆಂಧ್ರ ಮಹಾಸಭಾ ಮತ್ತು ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಪ್ರಮುಖ ಪಾತ್ರ ವಹಿಸಿದರು. ಈ ಹೋರಾಟದಲ್ಲಿ ಆರ್‌ಎಸ್‌ಎಸ್ ಎಲ್ಲಿಯೂ ಕಾಣಿಸುತ್ತಿಲ್ಲ. ಆರ್‌ಎಸ್‌ಎಸ್ ದೇಶದ ಆಳವಾದ ರಾಷ್ಟ್ರೀಯ ಚಳುವಳಿಯಿಂದ ದೂರವಿದೆ. ಆರ್‌ಎಸ್‌ಎಸ್ ಬ್ರಿಟಿಷ್ ಸರ್ಕಾರದ ಭದ್ರಕೋಟೆಯಾಯಿತು. ಅದು ದೇಶದಲ್ಲಿ ವಸಾಹತುಶಾಹಿಗಳ ಪರವಾಗಿ ನಿಂತಿತು. ರಾಜವಂಶಸ್ಥ ನಿಜಾಮನ ವಿರುದ್ಧದ ಹೋರಾಟದಲ್ಲಿ ಆರ್ ಎಸ್ ಎಸ್ ಎಲ್ಲಿಯೂ ಕಾಣಸಿಗದಿರುವುದು ಕಾಕತಾಳೀಯವೇನಲ್ಲ. ಆಗ ಕಾಂಗ್ರೆಸ್ ಕೂಡ ಜಮೀನ್ದಾರಿ ಮತ್ತು ವಸಾಹತುಶಾಹಿ ಪ್ರದೇಶಗಳಲ್ಲಿ ಚಳುವಳಿಗಳನ್ನು ನಿರುತ್ಸಾಹಗೊಳಿಸಿತು. ಕಾಂಗ್ರೆಸ್ ಭಾಗವಹಿಸದಿರಲು ನಿರ್ಧರಿಸಿತು. ಹಾಗಾಗಿಯೇ ತೆಲಂಗಾಣ ಹೋರಾಟದಲ್ಲಿ ಕಾಂಗ್ರೆಸ್ ಸಕ್ರಿಯವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿಲ್ಲ. ಕಮ್ಯುನಿಸ್ಟ್ ಪಕ್ಷವು ರಾಜಕೀಯ ಸಂಘಟನೆಯಾಗಿ ಮತ್ತು ಇತರ ಪ್ರಗತಿಪರ ಶಕ್ತಿಗಳು ನಿಜಾಮನ ವಿರುದ್ಧ ಊಳಿಗಮಾನ್ಯ ವಿರೋಧಿ ಹೋರಾಟವನ್ನು ನಡೆಸಬೇಕಾಯಿತು. ಕಠಿಣ ನಿರ್ಬಂಧಗಳ ನಡುವೆಯೂ ಮಹಾನ್ ತ್ಯಾಗ ಮಾಡುವ ಮೂಲಕ ಆ ಜವಾಬ್ದಾರಿಯನ್ನು ನಿರ್ವಹಿಸಿದರು. ಈ ವೀರಾವೇಶದ ಹೋರಾಟದ ಫಲವೇ ಸೆಪ್ಟೆಂಬರ್ 17ರಂದು ನಿಜಾಮನ ಶರಣಾಗತಿ ಮತ್ತು ಹೈದರಾಬಾದ್ ಸಂಸ್ಥಾನದ ವಿಲೀನ!

ಕಮ್ಯುನಿಸ್ಟ್ ಪಕ್ಷವು ರಾಜಕೀಯ ಸಂಘಟನೆಯಾಗಿ ಮತ್ತು ಇತರ ಪ್ರಗತಿಪರ ಶಕ್ತಿಗಳು ನಿಜಾಮನ ವಿರುದ್ಧ ಊಳಿಗಮಾನ್ಯ ವಿರೋಧಿ ಹೋರಾಟವನ್ನು ನಡೆಸಬೇಕಾಯಿತು. ಕಠಿಣ ನಿರ್ಬಂಧಗಳ ನಡುವೆಯೂ ಮಹಾನ್ ತ್ಯಾಗ ಮಾಡುವ ಮೂಲಕ ಆ ಜವಾಬ್ದಾರಿಯನ್ನು ನಿರ್ವಹಿಸಿದರು. ಈ ವೀರಾವೇಶದ ಹೋರಾಟದ ಫಲವೇ ಸೆಪ್ಟೆಂಬರ್ 17ರಂದು ನಿಜಾಮನ ಶರಣಾಗತಿ ಮತ್ತು ಹೈದರಾಬಾದ್ ಸಂಸ್ಥಾನದ ವಿಲೀನ!

ಸಂಘ ಪರಿವಾರದ ಶಕ್ತಿಗಳು ಖಾಸಿಂ ರಜ್ವಿ ನಿಜಾಮನ ರಜಾಕರಿಗಿಂತ ಕಮ್ಯುನಿಸ್ಟರನ್ನು ದುಷ್ಟರೆಂದು ಬಿಂಬಿಸುತ್ತಿವೆ. ರೈತರು, ಕಾರ್ಮಿಕರು, ವೃತ್ತಿಪರರು, ದಲಿತರು ಮತ್ತು ಮಹಿಳೆಯರ ಮೇಲೆ ಭೂಮಾಲೀಕರು ಮತ್ತು ಅವರ ಗೂಂಡಾಗಳು ನಡೆಸುವ ದೌರ್ಜನ್ಯಗಳು ಅವರಿಗೆ ಕಾಣುವುದಿಲ್ಲ. ನಿಜಾಮರ ಊಳಿಗಮಾನ್ಯ ಆಳ್ವಿಕೆಯಲ್ಲಿ ಬಹುತೇಕ ಜಮೀನ್ದಾರರು ಮತ್ತು ಜಾಗೀರದಾರರು ಹಿಂದೂಗಳಾಗಿದ್ದರು ಎಂದು ಅವರು ಉಲ್ಲೇಖಿಸುವುದಿಲ್ಲ. ಊಳಿಗಮಾನ್ಯ ಶೋಷಣೆಯಲ್ಲಿ ಧರ್ಮಕ್ಕೆ ಬಣ್ಣವಿಲ್ಲ ಎಂದು ಗೊತ್ತಿದ್ದರೂ ಅದನ್ನು ಗಮನಿಸದೆ ನಟಿಸುತ್ತಾರೆ. ಏಕೆಂದರೆ ಊಳಿಗಮಾನ್ಯ ಶೋಷಣೆ ಮತ್ತು ದಬ್ಬಾಳಿಕೆಯನ್ನು ಬೆಂಬಲಿಸುವವರು ಭೂಮಾಲೀಕರನ್ನು ರಕ್ಷಿಸಲು ಧಾರ್ಮಿಕ ಭಿನ್ನತೆಗಳು ಪರಿಣಾಮಕಾರಿ ಸಾಧನವೆಂದು ನಂಬುತ್ತಾರೆ.

**ಸಶಸ್ತ್ರ ಹೋರಾಟದ ಇತಿಹಾಸವನ್ನು ತಿರುಚುತ್ತಿದ್ದಾರೆ**

ನಿಜಾಮ ಆಡಳಿತದ ವಿರುದ್ಧ ಹೋರಾಡಿದ್ದು ಕಮ್ಯುನಿಸ್ಟರಲ್ಲ ಆರ್ಯ ಸಮುದಾಯ ಎಂದು ಹೇಳುವ ಮೂಲಕ ಇತಿಹಾಸವನ್ನು ತಿರುಚುವ ಪ್ರಯತ್ನ ನಡೆದಿದೆ. ಆರ್ಯ ಸಮಾಜವು ಹೆಚ್ಚಾಗಿ ಹೈದರಾಬಾದ್ ರಾಜ್ಯದ ಮರಾಠವಾಡ ಪ್ರದೇಶಗಳಲ್ಲಿ ಕೆಲಸ ಮಾಡಿತು. ಶುದ್ಧೀಕರಣ ಕಾರ್ಯಕ್ರಮಗಳು, ಹಿಂದೂ ಧಾರ್ಮಿಕ ಹಕ್ಕುಗಳಿಗಾಗಿ ಕಾರ್ಯಕ್ರಮಗಳು ಮತ್ತು ಹಿಂದೂ ಧಾರ್ಮಿಕ ಪುನರುಜ್ಜೀವನ ಕಾರ್ಯಕ್ರಮಗಳನ್ನು ಆಯೋಜಿಸಿದರು. ರಜಾಕಾರರ ಬೆಂಬಲದೊಂದಿಗೆ ಮುಸ್ಲಿಂ ಧಾರ್ಮಿಕ ಶಕ್ತಿಗಳೂ ಸಕ್ರಿಯವಾಗಿದ್ದವು. ಈ ಪರಿಸ್ಥಿತಿಯು ಧಾರ್ಮಿಕ ಸಂಘರ್ಷಗಳಿಗೆ ಕಾರಣವಾಯಿತು. ಸೆಪ್ಟೆಂಬರ್ 17 ರ ನಂತರ, ಈ ವಾತಾವರಣವು ತೀವ್ರ ಕೋಮು ಘರ್ಷಣೆಗೆ ಕಾರಣವಾಯಿತು. ಸುಂದರ್‌ಲಾಲ್ ಸಮಿತಿಯ ವರದಿಯ ಪ್ರಕಾರ ಈ ಘರ್ಷಣೆಗಳಲ್ಲಿ 40 ಸಾವಿರ ಜನರು ಪ್ರಾಣ ಕಳೆದುಕೊಂಡಿದ್ದಾರೆ. ಆರ್ಯಸಮಾಜವು ಎಂದು ಭೂಮಾಲೀಕರ ವಿರುದ್ಧ ಹೋಗಲಿಲ್ಲ. ಬಿಟ್ಟಿ ಚಾಕರಿ, ಉಪಪತ್ನಿಯರು ಮತ್ತು ದೇವದಾಸಿ ಪದ್ಧತಿ ಬಗ್ಗೆ ಮಾತನಾಡಲಿಲ್ಲ. ಆರ್ಯಸಮಾಜವು ಹಿಂದೂ–ಮುಸ್ಲಿಂ ಭಿನ್ನತೆಯನ್ನು ಮುಂದೆ ತಂದಿತು. ಇದಕ್ಕೆ ತದ್ವಿರುದ್ಧವಾಗಿ,

ಪುಟ 7 ಕ್ಕೆ

# ಕಾರ್ಮಿಕ ವಿರೋಧಿ ಕೇಂದ್ರ ಸರ್ಕಾರದ ವಿರುದ್ಧ ಬೃಹತ್ ಮಹಾಪಡಾವ್‌ಗೆ ಸಂಯುಕ್ತ ಹೋರಾಟ ಕರ್ನಾಟಕ ನಿರ್ಧಾರ



ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಮೋದಿ ನೇತೃತ್ವದ ಒಕ್ಕೂಟ ಸರ್ಕಾರ ಜಾರಿಗೆ ತಂದಿರುವ ರೈತ, ಕಾರ್ಮಿಕ, ದಲಿತ, ಮಹಿಳಾ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ದೇಶಾದ್ಯಂತ ನವೆಂಬರ್ 26, 27, 28 ರಂದು 3 ದಿನಗಳು 72 ಗಂಟೆಗಳ ಕಾಲ ರಾಜ್ಯ ರಾಜಧಾನಿಯಲ್ಲಿ ರಾಜಭವನದ ಮುಂದೆ ಬೃಹತ್ ಮಹಾ ಪಡಾವ್ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧರಿಸಿದ್ದು, ಇದನ್ನು ಕರ್ನಾಟಕದಲ್ಲಿ ಯಶಸ್ವಿಗೊಳಿಸಲು ಬೆಂಗಳೂರಿನ ಗಾಂಧಿಭವನದಲ್ಲಿ ಸಂಯುಕ್ತ ಹೋರಾಟ ಕರ್ನಾಟಕ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಒಕ್ಕೂರಲು ನಿರ್ಣಯವನ್ನು ಕೈಗೊಳ್ಳಲಾಯಿತು.

ಒಂದೆಡೆ ಭಾರತದ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿ ಅಧಿಕಾರವನ್ನು ನಡೆಸುತ್ತಿರುವ ಈ ಸರ್ಕಾರದ ನೀತಿಗಳನ್ನು ಬದಲಾಯಿಸಿ ಸಂವಿಧಾನವನ್ನು ರಕ್ಷಿಸುವ ಮೂಲಕ ದೇಶದ ಜನತೆಯನ್ನು ರಕ್ಷಣೆ ಮಾಡಬೇಕಿದೆ. ಅದಕ್ಕಾಗಿ ನವೆಂಬರ್ 26 ರ ಸಂವಿಧಾನ ದಿನವನ್ನು ನಿಗದಿ ಮಾಡಲಾಗಿದೆ. ಈ ಮಹಾಪಡಾವ್ ಹೋರಾಟವನ್ನು ಯಶಸ್ವಿಗೊಳಿಸಲು ಅಕ್ಟೋಬರ್ 9 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಮಾವೇಶವನ್ನು ನಡೆಸಲು ನಿರ್ಧರಿಸಲಾಯಿತು.

ದುಂಡು ಮೇಜಿನ ಸಭೆಯಲ್ಲಿ ಬಡಗಲಪುರ ನಾಗೇಂದ್ರ, ಜಿ.ಸಿ.ಬಯ್ಯಾರೆಡ್ಡಿ, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ಎಸ್. ವರಲಕ್ಷ್ಮಿ, ಕೆ.ವಿ.ಭಟ್, ದೇವಿ, ಪುಟ್ಟಮಾದು, ನೂರ್ ಶ್ರೀಧರ್, ಟಿ.ಯಶವಂತ್, ದಿವಾಕರ್, ಸಿದ್ದನಗೌಡ ಪಾಟೀಲ್, ಮಾನಸಯ್ಯ, ದು.ಸರಸ್ವತಿ ಮುಂತಾದವರು ಭಾಗವಹಿಸಿದ್ದರು, ಸಭೆಯ ಅಧ್ಯಕ್ಷತೆಯನ್ನು ಎಚ್. ಆರ್.ಬಸವರಾಜಪ್ಪ ಭಾಗವಹಿಸಿದ್ದರು.

# ಕಾಂ.ಕನ್ನೈ ಬ್ಯಾನರ್ಜಿ–ಶ್ರದ್ಧಾಂಜಲಿ



ಹಿರಿಯ ಕಾರ್ಮಿಕ ಸಂಘಟನೆಯ ನಾಯಕರು ಮತ್ತು ಪಕ್ಷದ ಕೇಂದ್ರ ಸಮಿತಿಯ ಮಾಜಿ ಸದಸ್ಯರಾದ ಕಾಮ್ರೇಡ್ ಕನ್ನೈ ಬ್ಯಾನರ್ಜಿ ಸಪ್ಟಂಬರ್ 15 ರಂದು ನಿಧನರಾಗಿದ್ದಾರೆ. ಅವರಿಗೆ 97 ವರ್ಷವಾಗಿತ್ತು. ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಶೋಕ ವ್ಯಕ್ತಪಡಿಸಿದೆ.

ಕನ್ನೈ ಬ್ಯಾನರ್ಜಿಯವರು ತಮ್ಮ ವಿದ್ಯಾರ್ಥಿ ದಿನಗಳಲ್ಲಿ ಸ್ವಾತಂತ್ರ್ಯ ಚಳವಳಿಗೆ ಮತ್ತು ನಂತರ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದರು. ಅವರು ಒಬ್ಬ ರೈಲ್ವೆ ಉದ್ಯೋಗಿಯಾದರು ಮತ್ತು ರೈಲ್ವೇ ಕಾರ್ಮಿಕ ಸಂಘಟನೆಯ ಚಳವಳಿಯ ಬೆಳವಣಿಗೆಗೆ ಜೀವಮಾನದ ಕೊಡುಗೆ ನೀಡಿದರು. ಅವರು ಸಿಐಟಿಯು ಕೇಂದ್ರ ಪದಾಧಿಕಾರಿಯಾದರು ಮತ್ತು ಕಾರ್ಮಿಕ ವರ್ಗದ ಚಳುವಳಿಯ ಅಭಿವೃದ್ಧಿಗೆ ಪ್ರಮುಖ ಕೊಡುಗೆಗಳನ್ನು ನೀಡಿದರು.

ಅವರು ತತ್ವಶಾಸ್ತ್ರ ಮತ್ತು ಸಂಸ್ಕೃತಿಯಲ್ಲಿ ಚೆನ್ನಾಗಿ ಪಾರಂಗತರಾಗಿದ್ದರು. ಅವರ ಜೀವನ ಶೈಲಿ ಬಹಳ ಸರಳವಾಗಿತ್ತು ಎಂದಿರುವ ಪೊಲಿಟ್ ಬ್ಯುರೊ ಅವರ ಕುಟುಂಬದ ಎಲ್ಲ ಸದಸ್ಯರಿಗೆ ಪಾಲಿಟ್ ತನ್ನ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದೆ.

ಸಿಐಟಿಯು ಕೂಡ ಒಂದು ಪ್ರತ್ಯೇಕ ಶ್ರದ್ಧಾಂಜಲಿ ಸಂದೇಶದಲ್ಲಿ ಅವರ ಅತ್ಯಂತ ಸರಳ ಜೀವನ ಶೈಲಿಯನ್ನು ನೆನಪಿಸಿಕೊಂಡಿದೆ. ಅವರು ಕಾರ್ಯಕರ್ತರೊಂದಿಗೆ ಬಹಳ ಪ್ರೀತಿಯಿಂದ ವರ್ತಿಸುತ್ತಿದ್ದರು, ಅದೇ ವೇಳೆಗೆ ಪರಿಷ್ಕರಣವಾದದ ವಿರುದ್ಧ ರಾಜಕೀಯ ಸೈದ್ಧಾಂತಿಕ ಹೋರಾಟದಲ್ಲಿ ಅಷ್ಟೇ ಕಠಿಣವಾಗಿ ವರ್ತಿಸುತ್ತಿದ್ದರು ಎಂದು ಅದು ಹೇಳಿದೆ. ಪರಿಷ್ಕರಣವಾದ ಮತ್ತು ಆಧುನಿಕೋತ್ತರವಾದದ ವಿರುದ್ಧ ಕಠಿಣ ಸೈದ್ಧಾಂತಿಕ ಹೋರಾಟ ನಡೆಯುತ್ತಿರುವ ಸಂದರ್ಭದಲ್ಲಿ ಅವರ ನಿಧನ ಸಿಐಟಿಯು ಗೆ ಮತ್ತು ದೇಶದ ಕ್ರಾಂತಿಕಾರಿ ಚಳುವಳಿಗೆ ಒಂದು ದೊಡ್ಡ ನಷ್ಟ ಎಂದು ಅದು ಅಗಲಿದ ಮುಖಂಡನಿಗೆ ಮತ್ತು ಕ್ರಾಂತಿಕಾರಿಗೆ ಶ್ರದ್ಧಾಂಜಲಿ ಅರ್ಪಿಸಿದೆ.

ಈಗಿನ ಬಾಂಗ್ಲಾದೇಶದಲ್ಲಿರುವ ಒಂದು ಹಳ್ಳಿಯಲ್ಲಿ 1926ರಲ್ಲಿ ಜನಿಸಿದ 'ಕನ್ನೈ ದಾ' ತಮ್ಮ ಹದಿಹರೆಯದಲ್ಲೇ ಸ್ವಾತಂತ್ರ್ಯ ಆಂದೋಲನ ಮತ್ತು ಕಮ್ಯುನಿಸ್ಟ್ ಆಂದೋಲನದತ್ತ ಆಕರ್ಷಿರಾಗಿದ್ದರು. 1939ರಲ್ಲಿ, ಅಂದರೆ 13ನೇ ವಯಸ್ಸಿನಲ್ಲಿ ಢಾಕಾದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಉದ್ದೇಶಿಸಿ ಮಾತಾಡಿದ ಸಭೆಯಲ್ಲಿ ಭಾಗವಹಿಸಿದ್ದರು. ಅವರು ತಮ್ಮ ಟ್ರೇಡ್ ಯೂನಿಯನ್ ಕಾರ್ಯವನ್ನು ನಲ್ವತ್ತರ ದಶಕದಲ್ಲಿ ಕೂಚ್ ಬಿಹಾರಿನಲ್ಲಿ ಆರಂಭಿಸಿದರು. ಬೀಡಿ ಕಾರ್ಮಿಕರು, ಟೈಲರುಗಳು, ಮಡಿವಾಳರು ಮುಂತಾದವರನ್ನು ಸಂಘಟಿಸಿದ ಅವರು ಅವರೆಲ್ಲರಿಗಾಗಿ ಒಂದು ಸಹಕಾರ ಸಂಘವನ್ನು ನಡೆಸಿದರು.

ದೇಶ ವಿಭಜನೆಯ ನಂತರ ಅವರ ಕುಟುಂಬ ಕೊಲ್ಕತಾಕ್ಕೆ ಬಂತು. ಆಗ ಅವರು ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರಿಯರಾದರು. ನಂತರ ರೈಲ್ವೆ ನೌಕರನಾಗಿ ರೈಲ್ವೆ ನೌಕರರ ಸಂಘಟನೆಯಲ್ಲಿ ತೊಡಗಿದರು, ದೀರ್ಘ ಕಾಲ ಅಖಿಲ ಭಾರತರೈಲ್ವೆ ನೌಕರರ ಒಕ್ಕೂಟ(ಎಐಆರ್‌ಎಫ್) ದ ಮುಖಂಡತ್ವದಲ್ಲಿದ್ದು 1974ರ ಚಾರಿತ್ರಿಕ ರೈಲ್ವೆ ಮುಷ್ಕರದಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. 1984ರಲ್ಲಿ ಕಾಂ. ಬಿಟಿಆರ್ ರವರ ಮುತುವರ್ಜಿಯಿಂದ ರೈಲ್ವೆ ನೌಕರಿಯಿಂದ ನಿವೃತ್ತಿ ಪಡೆದು ಸಿಐಟಿಯು ಸೇರಿದರು, 1989ರಿಂದ ಸಿಐಟಿಯುನ ಕೇಂದ್ರ ಕಚೇರಿಯಲ್ಲಿ ಕೆಲಸ ಮಾಡಲಾರಂಭಿಸಿದರು. ಎರಡೂವರೆ ದಶಕಗಳ ನಂತರ 2013ರಲ್ಲಿ ಅಲ್ಲಿಂದ ಬಿಡುಗಡೆ ಪಡೆದು ಕೊಲ್ಕತಾಕ್ಕೆ ಮರಳಿದರು. ಈ ನಡುವೆ ವಿವಿಧ ರಾಜ್ಯಗಳ, ವಲಯಗಳ ಕಾರ್ಮಿಕ ಸಂಘಟನೆಗಳ ಜವಾಬ್ದಾರಿ ನಿರ್ವಹಿಸಿದರು. ದುಡಿಯುವ ಮಹಿಳೆಯರನ್ನು ಮುಖಂಡತ್ವಕ್ಕೆ ತರುವ ಬಗ್ಗೆ ಅವರು ಆಗ್ರಹಿಸುತ್ತಿದ್ದರು. ಸಿಐಟಿಯು ಗ್ರಂಥಾಲಯವನ್ನು ರಚಿಸುವಲ್ಲಿ ಅವರು ಮುಖ್ಯ ಪಾತ್ರ ವಹಿಸಿದರು ಎಂದು ಸಿಐಟಿಯು ತನ್ನ ಶ್ರದ್ಧಾಂಜಲಿ ಹೇಳಿಕೆಯಲ್ಲಿ ನೆನಪಿಸಿಕೊಂಡಿದೆ.

ತತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆಯಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಅವರು ನವ–ಉದಾರವಾದಿ ಸೈದ್ಧಾಂತಿಕ ದಾಳಿಯನ್ನು ಎದುರಿಸುವಲ್ಲಿ ಮಾರ್ಗದರ್ಶನ ನೀಡಿರುವ ಮುಂಚೂಣಿಯ ಮುಖಂಡರಲ್ಲಿ ಒಬ್ಬರು. ಸಿಐಟಿಯುವಿನ ಚಾರಿತ್ರಿಕ ಭುವನೇಶ್ವರ ಸಂಘಟನಾ ದಸ್ತಾವೇಜು ರೂಪಿಸುವಲ್ಲಿ ಅವರ ಕೊಡುಗೆ ಗಮನಾರ್ಹ.

ಅವರು ವೈದ್ಯಕೀಯ ಕಾಲೇಜಿಗೆ ತಮ್ಮ ದೇಹದಾನ ಮಾಡಿದ್ದರು.

# ಮಹಿಳಾ ಮೀಸಲಾತಿ ಮಸೂದೆಯ ಮೇಲೆ ಚರ್ಚೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯಬೇಕು– ಮೂರು ರಾಷ್ಟ್ರೀಯ ಮಹಿಳಾ ಸಂಘಟನೆಗಳ ಆಗ್ರಹ

ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ 33 ಪ್ರತಿಶತ ಮೀಸಲಾತಿಯನ್ನು ಖಾತರಿಪಡಿಸಲು ಅನುವು ಮಾಡಿಕೊಡುವ ಮಸೂದೆಗೆ ಕೊನೆಗೂ ಕೇಂದ್ರ ಸಚಿವ ಸಂಪುಟವು ಒಪ್ಪಿಗೆ ನೀಡಿದೆ ಎಂದು ಮಾಧ್ಯಮಗಳಲ್ಲಿ ಸುದ್ದಿಗಳು ಬಂದವು, ನಂತರ, ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಇದನ್ನು ಚರ್ಚೆಗೆ ಲೋಕಸಭೆಯ ಮುಂದೆ ಇಡಲಾಯಿತು. ಆಗ ಇದಕ್ಕೆ ಪ್ರತಿಕ್ರಿಯಿಸುತ್ತ ಮೂರು ಪ್ರಮುಖ ಅಖಿಲ ಭಾರತ ಮಹಿಳಾ ಸಂಘಟನೆಗಳು. ಕಳೆದ 25 ವರ್ಷಗಳಿಂದ ಈ ಮಸೂದೆಯನ್ನು ಅಂಗೀಕರಿಸಬೇಕು ಎಂದು ಮಹಿಳಾ ಸಂಘಟನೆಗಳು ಒತ್ತಾಯಿಸುತ್ತ ಬಂದಿವೆ ಎಂದು ನೆನಪಿಸಿದೆ.

ಸಂಸತ್ತು ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳಾ ಮೀಸಲಾತಿಯ ಬಗ್ಗೆ ಬಿಜೆಪಿ ಸರ್ಕಾರವು ಗಂಭೀರವಾಗಿದ್ದಿದ್ದರೆ, 2014 ರಲ್ಲೇ ಅದನ್ನು ಅಂಗೀಕರಿಸಬಹುದಿತ್ತು ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ), ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಮತ್ತು ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆ (ಎಐಪಿಡಬ್ಲ್ಯುಎ) ಜಂಟಿ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿವೆ.

ಮಸೂದೆಯ ಮೇಲಿನ ಚರ್ಚೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯುವಂತೆ ಸರ್ಕಾರ ನೋಡಿಕೊಳ್ಳಬೇಕು ಮತ್ತು ಮಹಿಳಾ ಸಂಘಟನೆಗಳ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ಎಂದು ಈ ಮೂರು ಸಂಘಟನೆಗಳ ಪ್ರಧಾನ ಕಾರ್ಯದರ್ಶಿಗಳು, ಮರಿಯಮ್ ಧವಳೆ, ಛಬಿ ಮೊಹಂತಿ ಮತ್ತು ಮೀನಾ ತಿವಾರಿ ಆಗ್ರಹಿಸಿದ್ದಾರೆ.


**ಚಂದಾ ವಿವರ**

**ವಾರ್ಷಿಕ ಚಂದಾ :** ರೂ.500.00
**ದ್ವೈವಾರ್ಷಿಕ ಚಂದಾ :** ರೂ.1000.00

**ಚಂದಾದಾರರು ಸಂರ್ಕಿಸಿ:**
ಕ್ರಿಯಾ ಪ್ರಕಾಶನ, ಸೂರಿ ಭವನ, ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು 560027
**ಕಛೇರಿ ದೂರವಾಣಿ:** 080–22234369
**ಫೋನ್:** 9448578021, 9483966467



# ಮಹಿಳಾ ಮೀಸಲಾತಿ ಅಂಗೀಕೃತ ಆದರೆ ಅನಿರ್ದಿಷ್ಟವಾಗಿ ವಿಳಂಬ

**ಪ್ರಕಾಶ ಕಾರತ್**

27 ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ, ಬಹು ನಿರೀಕ್ಷಿತ ಮಹಿಳಾ ಮೀಸಲಾತಿ ಮಸೂದೆಯು ಅಂಗೀಕಾರವಾಗಿದೆ. ಆದರೆ, ಸಂತೋಷ ಪಡಬೇಕಾದ ಸಂದರ್ಭವಾಗಿ ಮಾತ್ರ ಉಳಿದಿಲ್ಲ. ಇಷ್ಟು ವರ್ಷಗಳ ಕಾಲ, ಬಂದ ಎಲ್ಲಾ ಸರ್ಕಾರಗಳು ಅದನ್ನು ತಮ್ಮ ಕೈಲಾದಷ್ಟು ಮಟ್ಟಿಗೆ, ನಾಶಮಾಡಿ ಅದನ್ನು ಮರೆಮಾಚಲು ಪ್ರಯತ್ನಿಸಿವೆ. ಎಡ ಪಕ್ಷಗಳು ಮತ್ತು ಅಖಿಲ ಭಾರತ ಡೆಮಾಕ್ರೆಟಿಕ್ ವುಮೆನ್ಸ್ ಅಸೋಸಿಯೇಷನ್ (AIDWA) ಸೇರಿದಂತೆ ಮಹಿಳಾ ಚಳುವಳಿಯ ವಿಭಾಗಗಳು ಮಾತ್ರ ಇದನ್ನು ಜೀವಂತವಾಗಿಡಲು ಸತತವಾಗಿ ಪ್ರಚಾರ ಮತ್ತು ಹೋರಾಟ ನಡೆಸಿಕೊಂಡು ಬಂದಿವೆ.

ದುಃಖಕರ ಆದಾಗ್ಯೂ, ಸತ್ಯವೆಂದರೆ ಮಸೂದೆಯನ್ನು ಪ್ರಸ್ತುತ ಅಂಗೀಕರಿಸಲಾಗಿದೆ ನಿಜ. ಆದರೆ, ಇದರ ಅನುಷ್ಠಾನವನ್ನು, ಮುಂದಿನ ಸಾರ್ವತ್ರಿಕ ಚುನಾವಣೆಯ ನಂತರಕ್ಕೆ ಮುಂದೂಡಲಾಗಿದೆ, ಇದು ಪ್ರಶ್ನಾರ್ಹವಾಗಿದೆ.

ಮುಂದಿನ ಜನಗಣತಿ ಕಾರ್ಯಾಚರಣೆ ಮತ್ತು 2026 ರಲ್ಲಿ ಪ್ರಾರಂಭವಾಗುವ ಸೀಟುಗಳ ವಿಂಗಡಣೆಯ ಪ್ರಕ್ರಿಯೆಯ ಆಧಾರದ ಮೇಲೆ, ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಸೀಟುಗಳನ್ನು ಆ ನಂತರವಷ್ಟೆ, ಮೀಸಲಿಡಲಾಗುವುದು ಎಂದು ಕರಡು ಮಸೂದೆ ಹೇಳುತ್ತದೆ. ಮಹಿಳೆಯರಿಗೆ ಸೀಟುಗಳ ಮೀಸಲಾತಿಯನ್ನು, ಮಸೂದೆ ಅಂಗೀಕಾರವಾದ ತಕ್ಷಣವೇ ನಿಜವಾಗಲೂ ಕೈಗೊಳ್ಳಬಹುದು ಮತ್ತು ಸೀಟುಗಳ ಸಂಖ್ಯೆಯನ್ನು ಪ್ರಮಾಣಕ್ಕೆ ಅನುಗುಣವಾಗಿ ಹೆಚ್ಚಿಸಬಹುದು ಆದರೆ ಕೆಲವು ವರ್ಷಗಳವರೆಗೆ ಚುನಾಯಿತ ಪ್ರತಿನಿಧಿಗಳಾಗುವ ಮಹಿಳೆಯರ ಹಕ್ಕನ್ನು ನಿರಾಕರಿಸಲು ಅಸಭ್ಯ ವಾದಗಳನ್ನು ಬಳಸಲಾಗುತ್ತಿದೆ.

ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನಿಯಮಿತವಾಗಿ ಮಸೂದೆಯ ಅಂಗೀಕಾರವನ್ನು ಸೇರಿಸಿಕೊಂಡಿದೆ. 2014 ಮತ್ತು 2019 ರ ಎರಡು ಸಾರ್ವತ್ರಿಕ ಚುನಾವಣೆಗಳ, ಮೊದಲು ಇದನ್ನು ಜಾರಿಗೊಳಿಸಲಾಗುವುದು ಎಂದು ಈ ದೇಶದ ಮಹಿಳೆಯರಿಗೆ ಗಂಭೀರ ಭರವಸೆಯನ್ನು ನೀಡಿತ್ತು. ಆ ಎರಡೂ ಚುನಾವಣೆಗಳ ನಂತರ ಲೋಕಸಭೆಯಲ್ಲಿ ಬಹುಮತವನ್ನು ಕೂಡ ಹೊಂದಿತ್ತು ಮತ್ತು ಈ ಅವಧಿಯಲ್ಲಿ,ಹೆಚ್ಚು ವಿವಾದಾತ್ಮಕ ಶಾಸನಗಳ ಮೂಲಕ ಈ ಮಸೂದೆಯನ್ನು ಬುಲ್ಡೋಜರ್ ಮಾಡಿದೆ. ಆದಾಗ್ಯೂ, ತಾನು ಅಧಿಕಾರದಲ್ಲಿದ್ದ ಒಂಬತ್ತು ವರ್ಷಗಳ ಸುದೀರ್ಘ ಅವಧಿಯಲ್ಲಿ ಮಸೂದೆಯನ್ನು ಅಂಗೀಕರಿಸುವ ತನ್ನ ಚುನಾವಣಾ ಭರವಸೆಯನ್ನು ಅದು ಉತ್ತಮಗೊಳಿಸಲು ಪ್ರಯತ್ನಿಸಲಿಲ್ಲ. ಇದೀಗ, ತನ್ನ ಸತತ ಎರಡನೇ ಅವಧಿಯ ಅಂತ್ಯದಲ್ಲಿ, ಮಸೂದೆಯನ್ನು ಪರಿಚಯಿಸಿದೆ. ಬಿಜೆಪಿ ಮತ್ತು ಪ್ರಧಾನಿ ಅವರು ಇದೀಗ ತಮ್ಮ ಕೇಕ್ ಅನ್ನು ತಿನ್ನಬಹುದು ಎಂಬ ನಂಬಿಕೆಯಲ್ಲಿದ್ದಾರೆ. ಅವರು ತಮ್ಮ ಪಿತೃ ಪ್ರಭುತ್ವದ ದೋಣಿಯನ್ನು ಅಲುಗಾಡಿಸದೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರ ಮತಗಳನ್ನು ಗಳಿಸಬಹುದು ಎಂಬ ಲೆಕ್ಕಾಚಾರ ಹೊಂದಿದ್ದಾರೆ.

ಇದು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ದೇಶಾದ್ಯಂತ ಮಹಿಳೆಯರು ಮೋಸ ಹೋಗಿರುವ ಭಾವನೆಯಲ್ಲಿದ್ದಾರೆ. ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಅವರ ಸಂಖ್ಯೆ ಹೆಚ್ಚಾಗಬೇಕೆಂದರೆ, ಅದಕ್ಕೆ, ಇನ್ನೂ ಒಂದು ಸಾರ್ವತ್ರಿಕ ಚುನಾವಣೆ ಮತ್ತು ಹಲವಾರು ರಾಜ್ಯಗಳ ಚುನಾವಣೆಗಳು ಹಾದು ಮುಗಿಯಬೇಕು ಎಂಬುದು ಅವರಿಗೆ ಕ್ರೂರವಾಗಿ ಕಾಣುತ್ತದೆ. 'ಪ್ರಜಾಪ್ರಭುತ್ವದ ತೊಟ್ಟಿಲು' ಎಂದು ಬಿಜೆಪಿ ಪ್ರತಿಪಾದಿಸುತ್ತಿರುವ ನಮ್ಮ ಸ್ವಾತಂತ್ರ್ಯದ 75 ವರ್ಷಗಳಲ್ಲಿ ಲೋಕಸಭೆಯಲ್ಲಿ ಮಹಿಳೆಯರ ಪಾಲು ಶೇ.5ರಿಂದ ಶೇ.15 ರಷ್ಟು ಮಾತ್ರ ಏರಿರುವುದು ನಾಚಿಕೆಗೇಡಿನ ಸಂಗತಿ. ಈ ವಿಚಾರದಲ್ಲಿ ವಿಶ್ವದ ಹೆಚ್ಚಿನ ದೇಶಗಳು ಉತ್ತಮ ದಾಖಲೆಯನ್ನು ಹೊಂದಿವೆ ಮತ್ತು ಚುನಾಯಿತ ಸಂಸತ್ತಿನಲ್ಲಿ ಮಹಿಳೆಯರು ಹೊಂದಿರುವ ಸ್ಥಾನಗಳ ವಿಷಯದಲ್ಲಿ ಭಾರತವು ಕೆಳಗಿನಿಂದ 20 ನೇ ಸ್ಥಾನದಲ್ಲಿದೆ. ನಮ್ಮ ದೇಶದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸುತ್ತಾರೆ ಮತ್ತು ಪ್ರತಿ ಚುನಾವಣೆಯಲ್ಲಿ ಈ ಸಂಖ್ಯೆಗಳು ಹೆಚ್ಚಾಗುತ್ತಲೇ ಇವೆ. ಸರ್ಕಾರ ಈಗ ಹೇಳಬಹುದು, ಆದರೆ ಪರಿಸ್ಥಿತಿ ಬೇಗ ಬದಲಾಗುವುದಿಲ್ಲ. 2024 ರ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿ ಅದು ಬದಲಾಗಬಹುದು. ಆದರೆ ಅದು ಕೂಡ ಬದಲಾಗುವುದಿಲ್ಲ.

ಈ ಗಾಯದ ಮೇಲೆ ಬರೆ ಎಳೆಯುವ ಹಾಗೆ, ಸರ್ಕಾರವು ಮಸೂದೆಯ ಕೊನೆಯಲ್ಲಿ 'ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ ಪಟ್ಟಿ' ಎಂಬ ಶೀರ್ಷಿಕೆಯ ಹೆಸರಿನಲ್ಲಿ ಅತ್ಯಂತ ಪೋಷಕ ವಿಭಾಗವನ್ನು ಸೇರಿಸಿದೆ. ಇದರಲ್ಲಿ "ಮಹಿಳಾ ಸಬಲೀಕರಣ ಮತ್ತು ಮಹಿಳಾ ನೇತೃತ್ವದ ಅಭಿವೃದ್ಧಿಯ ಮೂಲಕ 'ನಾರಿ ಶಕ್ತಿ'ಯನ್ನು ಮುಂಚೂಣಿಗೆ ತರಲು ಸರ್ಕಾರವು ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ, ಇದರ ಪರಿಣಾಮವಾಗಿ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದಲ್ಲಿ ಗಣನೀಯ ಸುಧಾರಣೆ ಮತ್ತು ಶಿಕ್ಷಣ ಮತ್ತು ಆರೋಗ್ಯಕ್ಕೆ ಸಮಾನ ಪ್ರವೇಶ ಲಭ್ಯತೆ ಎಂದಿದೆ. ಉಜ್ವಲಾ ಯೋಜನೆ, ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಶೌಚಾಲಯಗಳ ಪ್ರವೇಶ, ಮುದ್ರಾ ಯೋಜನೆಯ ಮೂಲಕ ಆರ್ಥಿಕ ಸೇರ್ಪಡೆ ಇತ್ಯಾದಿ...ಸೇರಿದಂತೆ ವಿವಿಧ ಉಪಕ್ರಮಗಳ ಮೂಲಕ ವಿಶೇಷವಾಗಿ ಮಹಿಳೆಯರಿಗೆ 'ಜೀವನ ಸುಲಭ'ಕ್ಕೆ ಸರ್ಕಾರ ಒತ್ತು ನೀಡಿದೆ.

ಆದಾಗ್ಯೂ, ಮಹಿಳೆಯರ ನಿಜವಾದ ಸಬಲೀಕರಣಕ್ಕೆ ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆ ಅಗತ್ಯವಿರುತ್ತದೆ. ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅವರು ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿರುತ್ತಾರೆ ಮತ್ತು ಶಾಸಕಾಂಗ ಚರ್ಚೆಗಳು ಮತ್ತು ನಿರ್ಧಾರ ತೆಗೆದುಕೊಳ್ಳುವ ಗುಣಮಟ್ಟವನ್ನು ಅವರು ಖಂಡಿತ ಉತ್ಕೃಷ್ಟ ಗೊಳಿಸುತ್ತಾರೆ.

ಈ ವಿಭಾಗದ ಕೊನೆಯಲ್ಲಿ, ಮೇಲಿನ ಉದ್ದೇಶಗಳನ್ನು ಸಾಧಿಸಲು ಮಸೂದೆ ಪ್ರಯತ್ನಿಸುತ್ತದೆ' ಎಂದು ಹೇಳುತ್ತದೆ. ಈ ಅಂಶಗಳು ಹಲವಾರು ವಿಭಾಗಗಳಲ್ಲಿ ಆಕ್ಷೇಪಾರ್ಹವಾಗಿದ್ದರೂ ಸಹಾ, ಸರಕಾರ ಕೊಚ್ಚಿಕೊಳ್ಳುವ ಪ್ರಯತ್ನ ಮಾಡಿದೆ. ಆದರೆ,ಉಜ್ಜಲಾ ಯೋಜನೆಯು ಲಕ್ಷಾಂತರ ಬಡ ಮಹಿಳೆಯರ ಮೇಲೆ ವೆಸಗುವ ಕ್ರೂರ ನಗೆ ಪಟಲ ಎಂದು ಸಾಬೀತಾಗಿದೆ. ವಿವಿಧ ತಾಂತ್ರಿಕ ಕಾರಣಗಳಿಂದ ಉಚಿತ ಸಿಲಿಂಡರ್‌ಗಳನ್ನು ಪಡೆಯಲು ಸಾಧ್ಯವಾಗಿಲ್ಲ, ಈಗ ಅತ್ಯಂತ ದುಬಾರಿ ಸಿಲಿಂಡರ್‌ಗಳನ್ನು ಖರೀದಿಸಲು ಸಹ ಸಾಧ್ಯವಾಗುತ್ತಿಲ್ಲ. ಅದೇ ರೀತಿ, ದೇಶದ ಅನೇಕ ಭಾಗಗಳಲ್ಲಿ ನಿರ್ಮಿಸಲಾದ ಶೌಚಾಲಯಗಳ ಸಂಖ್ಯೆಗಳನ್ನು, ಕಾಗದದ ಮೇಲೆ ಮಾತ್ರ ಸಂಬಂಧಿಸಿದ ಹಕ್ಕುಗಳನ್ನು ಸರ್ಕಾರವು ಯಥೇಚ್ಛವಾಗಿ ಹೆಚ್ಚಿಸಿದೆ ಮತ್ತು ಇದನ್ನು ಸಹಿಸಿಕೊಳ್ಳುವ ಬಡ ಮಹಿಳೆಯರ ಪ್ರಸ್ತುತ ನೈರ್ಮಲ್ಯ ಪರಿಸ್ಥಿತಿ, ಗಣನೀಯವಾಗಿ ಖಂಡಿತ ಬದಲಾಗಿಲ್ಲ ಇದು ಅತ್ಯಂತ ವಾಸ್ತವಿಕ ಮತ್ತು ನಾಚಿಕೆಗೇಡಿನ ಪರಿಸ್ಥಿತಿ. ಇವೆಲ್ಲ ಅತ್ಯಂತ ನಿರಾಶಾದಾಯಕ ಯೋಜನೆಗಳಾಗಿವೆ. ಈ ಹಿನ್ನೆಲೆಯಲ್ಲಿ, ದೀರ್ಘಕಾಲದಿಂದ ದೂರ ಉಳಿದಿದ್ದ, ಸಂಸತ್ತು ಮತ್ತು ರಾಜ್ಯ ಅಸೆಂಬ್ಲಿಗಳಲ್ಲಿ ಮಹಿಳೆಯರಿಗೆ ಸೀಟುಗಳನ್ನು ಮೀಸಲಿಡುವ ಭರವಸೆ ನೀಡುವ ಈ ಮಸೂದೆ ಸೂಕ್ತ ತೀರ್ಮಾನವಾಗಿದೆ.

*ಅನು: ನಾಗರಾಜ ನಂಜುಂಡಯ್ಯ*

## ಸೆಪ್ಟೆಂಬರ್ 17ರ ವಿಮೋಚನಾ ದಿನ.... ಪುಟ 5 ರಿಂದ

ತೆಲಂಗಾಣದಲ್ಲಿ ಯಾವುದೇ ಕೋಮು ಕಲಹ ಇರಲಿಲ್ಲ. ಏಕೆಂದರೆ ಜನರು ಒಗ್ಗೂಡಿ ಊಳಿಗಮಾನ್ಯ ಆಡಳಿತದ ವಿರುದ್ಧ ಹೋರಾಡಿದರು. ಹತ್ಯಾಕಾಂಡವಿಲ್ಲ. ಇಂದಿಗೂ ಧಾರ್ಮಿಕ ಸೌಹಾರ್ದತೆಯ ವಾತಾವರಣ ಮುಂದುವರಿಯಲು ಆ ಪರಂಪರೆಯೇ ಕಾರಣ. ಸಂಘಪರಿವಾರದ ಶಕ್ತಿಗಳು ತೆಲಂಗಾಣದಲ್ಲಿ ಸಶಸ್ತ್ರ ಹೋರಾಟದ ಇತಿಹಾಸವನ್ನು ತಿರುಚುತ್ತಿದ್ದು, ಆಗ ಸೃಷ್ಟಿಸಲಾಗದ ಸಂಘರ್ಷಗಳನ್ನು ಇಂದು ಸೃಷ್ಟಿಸುವ ದುರುದ್ದೇಶವಿದೆ.

**ಕಮ್ಯುನಿಸ್ಟರ ಪಾತ್ರವನ್ನು ಗುರುತಿಸಲು ನಿರಾಕರಿಸುತ್ತಾರೆ**

ಊಳಿಗಮಾನ್ಯ ನಿಜಾಮ್ ನವಾಬನ ವಿರುದ್ಧದ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರವನ್ನು ಬಿಆರ್‌ಎಸ್ ಅಥವಾ ಕಾಂಗ್ರೆಸ್ ಒಪ್ಪಿಕೊಳ್ಳಲು ಬಯಸುವುದಿಲ್ಲ. ಅವು ಭೂಮಾಲೀಕರಿಗೆ ಆಸಕ್ತಿಯ ಪಕ್ಷಗಳು. ಹೋರಾಟದ ಸಮಯದಲ್ಲಿ, ಕಮ್ಯುನಿಸ್ಟರು ಹಳ್ಳಿಗಳಲ್ಲಿ ಭೂಮಾಲೀಕರು, ದೇಶಮುಖರು ಮತ್ತು ಜಾಗೀರದಾರರ ಭೂಮಿಯಲ್ಲಿ ಸಾವಿರಾರು ಎಕರೆಯನ್ನು ಕಿತ್ತುಕೊಂಡು ರೈತರಿಗೆ ಹಂಚಿದರು. ಕೌಲ್ದಾರರ ಜಗಳ ನಿಲ್ಲಿಸಲಾಯಿತು. ವೆಟ್ಟಿಚಾಕರಿ ದೂರವಾಯಿತು. ಬಿಟ್ಟಿ ಚಾಕರಿ, ಉಪಪತ್ನಿಯರು ಮತ್ತು ದೇವದಾಸಿ ಪದ್ಧತಿಯನ್ನು ರದ್ದುಗೊಳಿಸಲಾಯಿತು. ಜಾತಿ ತಾರತಮ್ಯ ತಡೆಯಲಾಯಿತು. ಜನಾಂದೋಲನಕ್ಕೆ ಹೆದರಿ ಪಟ್ಟಣಗಳಿಗೆ ಗುಳೆ ಹೋಗಿದ್ದ ಜಮೀನ್ದಾರರು ಸೆ. 17ರಂದು ಟೋಪಿ ಮಾರ್ಚ್ ಬಳಿಕ ಧೈರ್ಯ ಮಾಡಿ ಹಳ್ಳಿಗಳಿಗೆ ಬಂದು, ಭಾರತದ ಸೇನೆಯ ಸಹಾಯದಿಂದ ರೈತರಿಂದ ಭೂಮಿಯನ್ನು ವಶಪಡಿಸಿಕೊಂಡರು. ರೈತರು ಗಳಿಸಿದ ಹಕ್ಕುಗಳನ್ನು ರಕ್ಷಿಸಲು ಕಮ್ಯುನಿಸ್ಟರು 1951 ರವರೆಗೆ ಪ್ರತಿರೋಧವನ್ನು ಮುಂದುವರೆಸಿದರು. ಕಮ್ಯುನಿಸ್ಟರ ನೆರವಿನಿಂದ ರೈತರು ಪ್ರತಿರೋಧ ವ್ಯಕ್ತಪಡಿಸಿದರು. ದೊಡ್ಡ ಭೂಮಾಲೀಕರಿಂದ ಲಕ್ಷಾಂತರ ಎಕರೆಗಳನ್ನು ಅವರು ಪಡೆದುಕೊಳ್ಳಲು ಸಾಧ್ಯವಾಯಿತು. ಊಳಿಗಮಾನ್ಯ ಶಕ್ತಿಗಳನ್ನು ಬೆಂಬಲಿಸುವ ಇಂತಹ ಪಕ್ಷಗಳಿಗೆ ಈ ಹೋರಾಟ ಇಷ್ಟವಾಗುತ್ತದೆ ಎಂದು ಹೇಳಲಾಗದು. ಆದ್ದರಿಂದಲೇ ಈ ಪಕ್ಷಗಳು ಕಮ್ಯೂನಿಸ್ಟರ ಪಾತ್ರವನ್ನು ಗುರುತಿಸಲು ನಿರಾಕರಿಸುತ್ತವೆ.

ನಿಜಾಮರ ಊಳಿಗಮಾನ್ಯ ಆಡಳಿತದ ವಿರುದ್ಧದ ಹೋರಾಟವು ದೇಶದಾದ್ಯಂತ ಪ್ರಾರಂಭವಾದ ಹೋರಾಟಗಳ ಅಲೆಯ ಮೇಲ್ಭಾಗದಲ್ಲಿತ್ತು. ವಿಶೇಷವಾಗಿ ಪುನ್ನಪ್ರ ವಯಲಾರ್, ತೆಭಾಗ, ವರ್ಲಿ ಮತ್ತು ತ್ರಿಪುರಾ ಹೋರಾಟಗಳು ಈ ವರ್ಗಕ್ಕೆ ಸೇರುತ್ತವೆ. ಇವೆಲ್ಲವುಗಳಲ್ಲಿ ಕಮ್ಯುನಿಸ್ಟ್ ಪಕ್ಷವು ಪ್ರಮುಖ ಪಾತ್ರ ವಹಿಸಿದೆ. ಈ ಎಲ್ಲಾ ಹೋರಾಟಗಳು ಮತ್ತು ಸಂಸ್ಥೆಗಳು ದೇಶದಲ್ಲಿ ಏಕೀಕರಣದ ಜಾಗವನ್ನು ಸೃಷ್ಟಿಸಿವೆ. ಭೂ ಸಮಸ್ಯೆ, ಒಕ್ಕೂಟ ರೂಪದ ಅವಶ್ಯಕತೆ, ಭಾಷಾವಾರು ರಾಜ್ಯಗಳ ರಚನೆ ಮತ್ತು ಕೌಲ್ದಾರಿ ಸಂರಕ್ಷಣಾ ಕ್ರಮಗಳ ಅಗತ್ಯವನ್ನು ರಾಜಕೀಯ ಅಜೆಂಡಾದಲ್ಲಿ ತರಲಾಯಿತು. ಈ ರೀತಿ ಪ್ರಮುಖ ಪಾತ್ರವನ್ನು ಕಮ್ಯೂನಿಸ್ಟ್ ಪಕ್ಷವು ವಹಿಸಿದ್ದರಿಂದಲೇ ದೇಶದಲ್ಲಿ ಮೊದಲ ಬಾರಿಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಜನತೆ ಕಮ್ಯೂನಿಸ್ಟರಿಗೆ ಹೆಚ್ಚಿನ ಬೆಂಬಲ ಕೊಟ್ಟರು. ಅತಿ ಹೆಚ್ಚು ಬಹುಮತದಿಂದ ಜನಪ್ರತಿನಿಧಿಗಳಾಗಿ ಗೆದ್ದು ಬಂದರು. ತೆಲಂಗಾಣದಲ್ಲೂ ಸಹಾ ಕಮ್ಯುನಿಸ್ಟರು ಸ್ಪರ್ಧಿಸಿದ ಪಿಡಿಎಫ್‌ಗೆ ಅತಿ ಹೆಚ್ಚು ಸ್ಥಾನಗಳು ಬಂದಿರುವುದು ಕಾಕತಾಳೀಯವಲ್ಲ. ಕಮ್ಯುನಿಸ್ಟರ ಬಗ್ಗೆ ಮಾತನಾಡುತ್ತಿದ್ದ ಮತ್ತು ಈಗ ಸೆಪ್ಟೆಂಬರ್ 17 ರ ಪರಂಪರೆಯ ಬಗ್ಗೆ ಮೆಲುಕು ಹಾಕುತ್ತಿರುವ ಪಕ್ಷಗಳು ಇದನ್ನು ನೆನಪಿಟ್ಟುಕೊಳ್ಳುವುದು ಒಳ್ಳೆಯದು.

ತೆಲಂಗಾಣದ ಸಶಸ್ತ್ರ ರೈತ ಹೋರಾಟವು ನಿಜಾಮರ ಊಳಿಗಮಾನ್ಯ ಆಳ್ವಿಕೆಯನ್ನು ಕೊನೆಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ರೈತರು ಸ್ವಾಧೀನಪಡಿಸಿಕೊಂಡ ಹೆಚ್ಚಿನ ಭೂಮಿಯನ್ನು ಭೂಮಾಲೀಕರು ಮತ್ತೆ ವಶಪಡಿಸಿಕೊಳ್ಳುವುದನ್ನು ತಡೆಯಲಾಯಿತು. ಆದರೆ, ಊಳಿಗಮಾನ್ಯ ಪದ್ಧತಿಯನ್ನು ಬೇರು ಸಮೇತ ಕಿತ್ತೊಗೆಯುವ ಗುರಿ ಇನ್ನೂ ತೆಲಂಗಾಣ ಮತ್ತು ದೇಶದಲ್ಲಿ ಉಳಿದಿದೆ. ●



# ಮಹಿಳಾ ದೌರ್ಜನ್ಯ ಮತ್ತು ಅತ್ಯಾಚಾರಗಳ ಬೇರು-ಬುಡ ಎಲ್ಲಿದೆ?

*ಡಾ.ಮೀನಾಕ್ಷಿ ಬಾಳಿ, ಕಲಬುರಗಿ*

ಕಲಬುರಗಿ ಜಿಲ್ಲೆಯ ಆಳಂದ ತಾಲೂಕು ಒಂದರಲ್ಲಿಯೇ ಕಳೆದ ಆರು ತಿಂಗಳ ಅವಧಿಯಲ್ಲಿ ಎರಡು ಅಪ್ರಾಪ್ತ ಬಾಲಕಿಯರ ಮೇಲೆ ಅತ್ಯಾಚಾರ ನಡೆಸಿ ನಿರ್ದಯವಾಗಿ ಕೊಲೆ ಮಾಡಿ ಬಿಸಾಡಿದ್ದಾರೆ. ಇನ್ನೊಂದು ಎರಡು ವರ್ಷದ ಮಗುವಿನ ಮೇಲೆ ಅತ್ಯಾಚಾರ ನಡೆಸುವ ಪ್ರಯತ್ನದಲ್ಲಿ 60 ವರ್ಷದ ಹಿರಿಯ ಸಿಲುಕಿ ಬಿದ್ದಿದ್ದಾನೆ. ಇನ್ನೊಂದೆಡೆ ಅನಾರೋಗ್ಯದಿಂದ ಬಳಲುತ್ತಿದ್ದ ವಯೋವೃದ್ಧೆಯ ಮೇಲೆ ಅತ್ಯಾಚಾರವೆಸಗುತ್ತಿದ್ದ ತರುಣ ತಲೆ ತಪ್ಪಿಸಿಕೊಳ್ಳಲು ಪ್ರಯತ್ನಸಿ ಸಿಲುಕಿಕೊಂಡಿದ್ದಾನೆ. ಇವಿಷ್ಟು ಬೆಳಕಿಗೆ ಬಂದ ಘಟನೆಗಳು. ಬೆಳಕಿಗೆ ಬರದಿರುವ ಘಟನೆಗಳು ಅವೆಷ್ಟೋ? ಅಷ್ಟಕ್ಕೂ ಇದು ಒಂದು ತಾಲೂಕಿನ ವರದಿ. ಇವುಗಳನ್ನು ಸರಾಸರಿ ಎಂದು ಲೆಕ್ಕ ಹಾಕಿದರೆ ನ್ಯಾಷನಲ್ ಕ್ರೈಂ ಬ್ಯೂರೋ ವರದಿ ಮಾಡಿದಂತೆ ಈ ದೇಶದಲ್ಲಿ ಪ್ರತಿ 20 ನಿಮಿಷಕ್ಕೊಂದು ರೇಪ್, ಅರ್ಧ ತಾಸಿಗೊಂದು ವರದಕ್ಷಿಣೆ ಹೆಸರಿನಲ್ಲಿ ಕೊಲೆ, 45 ನಿಮಿಷಕ್ಕೊಂದು ಲೈಂಗಿಕ ಕಿರಕುಳ, ಅಪಹರಣ ಹೀಗೆ ಹೇಳಿದ್ದು ಉತ್ಪ್ರೇಕ್ಷೆ ಅಲ್ಲವೆ ಅಲ್ಲ ಎಂಬುದನ್ನು ಅರಿಯಬೇಕಿದೆ.

ಆಳಂದ ತಾಲೂಕಿನ ಕೊರಳ್ಳಿ ಎಂಬ ಹಳ್ಳಿಯಲ್ಲಿ ಎಂಟನೆ ವರ್ಗ ಓದುತಿದ್ದ ಹೆಣ್ಣು ಶಿಶುವಿನ ಮೇಲೆ ಅದೇ ಶಾಲೆಯಲ್ಲಿ ಓದುತ್ತಿದ್ದ ಹುಡುಗ ಹಾಡೇ ಹಗಲು ರೇಪ್ ಮಾಡಿ ಬರ್ಬರಿಕವಾಗಿ ಕೊಲೆ ಮಾಡುತ್ತಾನೆ. ಜನವಾದಿ ಮಹಿಳಾ ಸಂಘಟನೆಯ ಹೋರಾಟ ಮತ್ತು ಸ್ಥಳಿಯರ ಒತ್ತಡದಿಂದಾಗಿ ಮತ್ತು ಪೊಲೀಸ್ ಇಲಾಖೆಯ ತೀವ್ರ ಕಾರ್ಯಾಚರಣೆಯಿಂದಾಗಿ ದಿನವೊಪತ್ತಿನಲ್ಲಿ ಆರೋಪಿಯ ಬಂಧನವಾಗುತ್ತದೆ. ಇಡೀ ರಾಜ್ಯದಲ್ಲಿ ಸುದ್ದಿಯಾಗುತ್ತದೆ. ಪೊಲೀಸ್ ಇಲಾಖೆ ಜಾಗೃತಗೊಂಡಿದೆ ಎನ್ನುತ್ತಿರುವಾಗಲೇ ಅದೇ ತಾಲೂಕಿ ಕಡಿಮೆ ಫಾಸಲೆಯಲ್ಲಿರುವ ಇನ್ನೊಂದು ಹಳ್ಳಿ ದೇವಂತಗಿ ಎಂಬಲ್ಲಿ ಆರನೇ ಕ್ಲಾಸ್ ಒದುತ್ತಿದ್ದ ಮಗುವಿನ ಮೇಲೆ ಮಧ್ಯ ವಯಸ್ಸಿನ ರಾಕ್ಷಸನೊಬ್ಬ ಮಗು ಪುಸ್ತಕ ತರಲೆಂದು ಹಗಲು ಹನ್ನೆರಡರ ಸುಮಾರಿಗೆ ತನ್ನ ಚಿಕ್ಕವ್ವನ ಮನೆಗೆ ಕಾಲದಾರಿ ಹಿಡಿದು ಹೋಗುತ್ತಿರುವಾಗ ಅದೆಲ್ಲಿಂದ ಎರಗಿತೂ? ಈ ಕಾಮುಕ ಗಿಡುಗ ಪಟ್ಟನೆ ಮಗುವನ್ನು ಎಳೆದುಕೊಂಡು ಬೇಲಿಯಾಚೆ ಹೋದವನೆ ವಿಕೃತವಾಗಿ ಎರಗಿದಾಗ ನೋವು ಮತ್ತು ಘಾಸಿ ಎರಡನ್ನು ತಾಳಿಕೊಳ್ಳದ ಮಗು ಅಸು ನೀಗಿಯೆ ಬಿಟ್ಟಿದೆ. ತೀಟೆ ತೀರಿದ ನಂತರ ನೋಡುತ್ತಾನೆ; ಉಸಿರು ನಿಂತಿದೆ. ಯೋನಿಯುದ್ದಕ್ಕೂ ಹರಿದ ನೆತ್ತರು ಜಮೆಗೊಂಡಿದೆ, ಗಲ್ಲಗಳು ರಕ್ತ ಸಿಕ್ತವಾಗಿವೆ. ಪುಟ್ಟ ಸ್ಥನಗಳು ಛಿದ್ರ ಛಿದ್ರವಾಗಿವೆ. ಹದ್ದು ತಡ ಮಾಡಲಿಲ್ಲ. ಅಸು ನೀಗಿದ ಕಂದಮ್ಮನ ಎಳೆ ದೇಹವನ್ನು ಅನಾಮತ್ ಎತ್ತಿ ಬಾವಿಗೆ ಎಸೆದು, ಹೊಟ್ಟೆ ಬಿರಿಯುವಂತೆ ಉಂಡು ಕುಂಡೆಗೆ ಒರೆಸಿಕೊಂಡು ನಡೆದಂತೆ ನಡೆದು ಹೋಗಿದ್ದಾನೆ. ಮೂರು ದಿನವವಾದರೂ ಹೆತ್ತವರಿಗೆ ಖಬರು ಇಲ್ಲ. ಚಿಕ್ಕವ್ವನ ಮನೆಗೆ ಹೋಗಿದ್ದಾಳೆ. ಅಲ್ಲಿಯೇ ಆಡಿಕೊಂಡು ಇದ್ದಾಳೆ ಎಂದು ಭಾವಿಸಿದ ಪಾಲಕರು ತಮ್ಮ ರೈತಾಪಿ ಕೆಲಸಗಳಲ್ಲಿ ವ್ಯಸ್ತರಾಗಿದ್ದಾರೆ. ಅಪರಿಚಿತ ಹೆಣ ತೇಲಿದೆ ಎಂದುಕೊಂಡ ಮಗುವಿನ ಚಿಕ್ಕಪ್ಪನೇ ಹೆಣ ತೆಗೆದು ದಂಡೆಗೆ ಹಾಕುತ್ತಾನೆ. ಜಲಚರಗಳು ತಿಂದು ಪುಡಿ ಪುಡಿ ಮಾಡಿವೆ. ಹೆಣದ ಗುರುತು ಹತ್ತುತ್ತಿಲ್ಲ. ಮಗುವಿನ ಪುಟ್ಟ ತಮ್ಮ ತೊಟ್ಟಿದ ಟೀ ಶರ್ಟ ನೋಡಿ ಖೂನ ಹಿಡಿದು ಕಿರುಚುತ್ತದೆ. “ಯವ್ವಾ ಇಕೀ ಅಕ್ಕಾ ಹಳಾ ನಂದೇ ಅಕ್ಕಾ ಹಳಾ! ಅವತ್ ಇದೇ ಟೀ ಶರ್ಟ ಉಟ್ಟಿದ್ದಳು. ನಂಗ್ ಬರೋಬರಿ ನೆಪ್ ಅದಾ” ಆಗ ಪಾಲಕರು ದಿಟ್ಟಿಸಿ ನಿರುಕಿಸುತ್ತರೆ. ಹ್ಹೂಂ ಅಲ್ಲೇನಿತ್ತು! ಹಸಿ ಮಾಂಸದ ಮುದ್ದೆ. ಮುಂದಿನದು ಹೇಳಬೇಕಿಲ್ಲ.

ಇಡೀ ತಾಲೂಕು ಬೆಚ್ಚಿದೆ. ರೊಚ್ಚಿಗೆದ್ದ ಜನಸಮುದಾಯಗಳು ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ನೆರೆದು ತಮ್ಮ ಆಕ್ರೋಶವನ್ನು ವ್ಯಕ್ತ ಪಡಿಸುತ್ತವೆ. ಆರೋಪಿಯ ಬಂಧನವಾಗುತ್ತದೆ. ಪೊಲೀಸ್ ವಿಚಾರಣೆ ನಡೆದಿದೆ. ತಾಲೂಕಿನಲ್ಲಿ ಬಿಸಿ ಏರಿದೆ. ಎಲ್ಲೆಲ್ಲೂ ಅದೇ ಮಾತು, ಸಿಟ್ಟು, ರೋಷ ಇರುವಾಗಲೇ ಆಳಂದ ಪಟ್ಟಣದ ಬಡಾವಣೆಯೊಂದರಲ್ಲಿ ವೃದ್ಧನೊಬ್ಬ ಇದಿರು ಮನೆಯ ಕೂಸು ಕಂದಮ್ಮನನ್ನು ಯಾವಾಗಲೂ ಎತ್ತಿ ಮುದ್ದು ಮಾಡಿ ಆಡಿಸುವವನೆ. ಮಗುವಿನ ತಾಯಿ ಚೂರು ಮಬ್ಬು. ಆದರೆ ಅವಳ ನೆಗೆಣ್ಣಿಗೆ ಮುದುಕನ ಬಗೆಗೆ ಅದೇನೋ ಗುಮಾನಿ. ಹೀಗಾಗಿ ಮಗುವನ್ನು ಹೊತ್ತುಕೊಂಡು ಅವನು ಒಳಮನೆಗೆ ಹೋಗುವುದನ್ನು ನೋಡಿ ಫಾಲೋ ಮಾಡಿದ್ದಾಳೆ. ಅವನ ಇನ್ನೇನು ಕೂಸಿನ ಮೇಲೆ ಎರಗಬೇಕು ಎಂಬಷ್ಟರಲ್ಲಿ ಚೀರಿದ್ದಾಳೆ. ಆತ ತಕ್ಷಣ ತಪ್ಪಿಸಿಕೊಂಡು ಓಡಿ ಹೋಗಿದ್ದಾನೆ. ಮನೆಯವರು ಗರಮಾ ಗರಂ ವಾತಾವರಣದಲ್ಲಿ ಪೊಲೀಸ್ ಸ್ಟೇಷನ್ ಹೋಗಿ ಕೇಸ್ ಕೊಟ್ಟಿದ್ದಾರೆ. ಆಮೇಲೆ ಆರೋಪಿಯ ಬಂಧನವಾಗಿದೆ.

ಇದೆಲ್ಲವು ಸರಿ. ಆದರೆ ಪ್ರಶ್ನೆ ಇರುವುದು ಇಲ್ಲಿ ಇಷ್ಟು ಸಲೀಸಾಗಿ ಅತ್ಯಾಚಾರಗಳ ಏಕೆ ಘಟಿಸುತ್ತವೆ? ಎಂಬುದಾಗಿದೆ. ಹಾಗಾದರೇ ಜನರಿಗೆ ಪೊಲೀಸ್, ಕಾನೂನು, ಕಾರಾಗೃಹ ಇವುಗಳ ಭಯ ಹೊರಟು ಹೋಗಿದೆಯೇ? ಅನೇಕ ಅತ್ಯಾಚಾರ ಘಟನೆಗಳಲ್ಲಿ ಅಪರಾಧಿಗಳನ್ನು ಬಂಧಿಸುವುದೇ ಬಹು ಕಾಲ ತೆಗೆದುಕೊಳ್ಳುತ್ತದೆ. ಅಪರಾಧಿಗಳು ರಾಜಕೀಯ ಪ್ರಭಾವಿಗಳಾಗಿದ್ದರಂತೂ ಬಂಧನವೇ ಆಗುವುದಿಲ್ಲ ಎಂಬುದು ಅರಿಯದೇನಲ್ಲ. ಆದರೆ ಆಳಂದದ ಕೇಸುಗಳಲ್ಲಿ ಆರೋಪಿಗಳ ಬಂಧನ ಆಗಿದೆ. ಬಂಧಿತರಿಗೂ ಪೊಲೀಸರ ಭಯ ಕಾಡಿಲ್ಲ. ಮುಂದೆ ಅಪರಾಧ ಮಾಡಬಯಸುವವರಿಗಂತೂ ಕಿಂಚತ್ತೂ ಹೆದರಿಕೆ ಇದ್ದಂತಿಲ್ಲ. ಇದೇಕೆ ಹೀಗೆ? ಈ ಮೊದಲು ಕಾಮುಕರಿಗೆ ಕನಿಷ್ಟ ಜೇಲು ಶಿಕ್ಷೆ, ದಂಡ, ಮಾನ-ಮರ್ಯಾದೆಗಳ ಕನಿಷ್ಟ ಭಯವಿತ್ತು. ಈಗ ಅದೂ ಹೋಗಿ ಬಿಟ್ಟಿದೆ. ಹಾಗಾದರೆ ಜನರು ಇಷ್ಟು ನಿರ್ಭಯ, ನಿರ್ಲಜ್ಜ ಹೇಗಾದರು? ಇಂಥ ಮನೋಸ್ಥಿತಿಯು ತನ್ನಿಂದ ತಾನೇ ಒಂದು ಮುಂಜಾನೆ ಇದ್ದಕ್ಕಿದ್ದಂತೆ ಸ್ಫುರಿಸುತ್ತದೆಯೇ? ಇಲ್ಲ. ಜನರ ಮನೋಭೂಮಿಕೆಯು ನಿರ್ವಾತದಲ್ಲಿ ನಿರ್ಮಾಣವಾಗುವುದಿಲ್ಲ. ಜನಚಿತ್ತ ಸಜ್ಜನತೆಯನ್ನು ಮೈ ಗೂಡಿಸಿಕೊಳ್ಳಲು ವಾತಾವರಣವೊಂದು ನಿರ್ಮಾಣವಾಗಬೇಕಾಗುತ್ತದೆ. ಈ ವಾತಾವರಣ ಎಂಬುದಾದರೂ ಆ ಪ್ರದೇಶದ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಅಂಶಗಳನ್ನು ಒಗ್ಗೂಡಿಸಿಕೊಂಡು ಜನರ ಪ್ರಜ್ಞಾಮಟ್ಟವನ್ನು ಎತ್ತರಿಸುವ ಮೂಲಕವೇ ಅಭಿವೃದ್ಧಿ ಪಡಿಸಲಾಗಿರುತ್ತದೆ. ಇದನ್ನೆ ಜನರೂಢಿಯಲ್ಲಿ ಸಂಸ್ಕಾರ ಎನ್ನಲಾಗುತ್ತದೆ. ಅದರಂತೆ ಜನಚಿತ್ತ ಕಲುಷಿತಗೊಂಡು ವಿಕಾರ, ವಿಕೃತವಾಗಲು ಆ ಪ್ರದೇಶದಲ್ಲಿನ ಬಡತನ, ನಿರುದ್ಯೋಗ, ಅಜ್ಞಾನ, ಮೌಢ್ಯ, ಧಾರ್ಮಿಕ ದಂಗೆ, ರಾಜಕೀಯ ಅರಾಜಕತೆ, ಜನಾಂಗೀಯ ದ್ವೇಷ ಹೀಗೆ ಎಲ್ಲವು ಕಾರಣವಾಗುತ್ತವೆ.

ಸರಿ. ಇವೆಲ್ಲವೂ ಒಟ್ಟಾರೆ ಅತ್ಯಾಚಾರಗಳಿಗೆ ಕಾರಣವಾದರೆ ಸಧ್ಯಃ ಭಾರತದಲ್ಲಿ ಅದಾವ ಕಾರಣ ಮೇಲುಗೈ ಸಾಧಿಸಿದೆ ಎಂಬುದನ್ನು ಬೇಧಿಸಲು ಸಾಧವಾದರೆ ಅವುಗಳಿಗೆ ಪರಿಹಾರವೂ ಕಾಣಬಹುದೇನೋ? ಹಾಗಾದರೇ ದೇಶವನ್ನು ಒಳಗೊಂಡಂತೆ ಹಳ್ಳಿಯಿಂದ ದಿಲ್ಲಿಯವರೆಗೆ ಮಹಿಳೆಯರು ಮತ್ತು ಮಕ್ಕಳ ಮೇಲೆ (ಗಂಡು ಮಕ್ಕಳು ಒಳಗೊಂಡಂತೆ) ಅತ್ಯಾಚಾರ, ದೌರ್ಜನ್ಯಗಳು ಹೆಚ್ಚಾಗಲು ಪ್ರಮುಖ ಕಾರಣವೆಂದರೆ ದೇಶದಲ್ಲಿ ಹೆಚ್ಚುತ್ತಿರುವ ಜನಾಂಗೀಯ ದ್ವೇಷ ಮತ್ತು ಕೋಮುವಾದ ಎಂಬುದರಲ್ಲಿ ಎರಡು ಮಾತಿಲ್ಲ. 2002 ರಲ್ಲಿ ಗುಜರಾತ್‌ನ ಕೋಮುಗಲಭೆಯಲ್ಲಿ ಬಿಲ್ಕಿಸ್ ಎಂಬ ಮುಸ್ಲಿಂ ಮಹಿಳೆಯ ಮೇಲೆ ಹನ್ನೊಂದು ದುಷ್ಕರ್ಮಿಗಳು ಬರ್ಬರಿಕ ಅತ್ಯಾಚಾರ ಮಾಡಿ ಅವಳ ಸಂಬಂಧೀಕರನ್ನು ಕೊಲೆಗೈದದ್ದು ನ್ಯಾಯಾಲಯದಲ್ಲಿ ಸಾಬೀತಾಗಿ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಆಗಿತ್ತು. ಆದರೆ ಗುಜರಾತ್ ರಾಜ್ಯ ಸರಕಾರ ರೇಪ್ ಮಾಡಿದವರು ಮೇಲ್ಜಾತಿಯವರು. ಅವರದು ಸನ್ನಡತೆ. ಅಂಥವರಿಗೆ ಬಹಳ ದಿವಸ ಜೇಲಿನಲ್ಲಿ ಕೊಳೆಸಲಾಗದು ಎಂದು ವಿವರಿಸಿ ಗುಜರಾತ್ ಸರಕಾರ ಅವರನ್ನು ಬಿಡುಗಡೆ ಮಾಡಿತು. ಹೊರಬಂದ ರೇಪಿಷ್ಟರನ್ನು ಇನ್ನೊಂದು ಕೋಮಿನವರು ಆರತಿ ಬೆಳಗಿ ಹೂ ಹಾರ ಹಾಕಿ ಸ್ವಾಗತಿಸಿದರಲ್ಲದೆ, ಸಿಹಿ ಹಂಚಿ ಅಟ್ಟಹಾಸ ಮೆರೆದರು. ಇನ್ನೊಂದೆಡೆ ಹಾತ್ರಾಸ್ ನಲ್ಲಿ ದಲಿತ ಯುವತಿಯ ಮೇಲೆ ರೇಪ್ ಮಾಡಿದ್ದನ್ನು ಸಾಕ್ಷ್ಯ ನಾಶ ಮಾಡಿದಲ್ಲದೆ, ಅದನ್ನು ವರದಿ ಮಾಡಲು ಹೋದ ಪತ್ರಿಕಾ ಕರ್ತರನ್ನು ಸುಳ್ಳು ಕೇಸ್ ಜಡಿದು ಅಂಜಿಸಲಾಯಿತು. ಕಾಶ್ಮೀರದ ಆಸಿಫಾ ಎಂಬ ಮುಸ್ಲಿಂ ಮಗುವೊಂದರ ಮೇಲೆ ದೇವಸ್ಥಾನದೊಳಗಡೆ ಸರಣಿ ಅತ್ಯಾಚಾರ ಮಾಡಿ ಹೂತು ಹಾಕಲಾಯಿತು. ಕುಸ್ತಿಪಟುಗಳು ತಮ್ಮ ಮೇಲೆ ಬ್ರಿಜ್ ಭೂಷಣ ಶರಣಸಿಂಗ್ ಎಂಬ ಸಂಸದನೊಬ್ಬ ಲೈಂಗಿಕ ಕಿರುಕುಳ ನೀಡುತ್ತಿದ್ದಾನೆ ಎಂದು ಆರೋಪ ಮಾಡಿದಾಗಲೂ ಆತನ ಮೇಲೆ ನ್ಯಾಯಾಲಯ ಛೀ ಮಾರಿ ಹಾಕಿ ಒತ್ತಡ ಹೇರುವವರೆಗೂ ಕೇಸ್ ಆಗಲಿಲ್ಲ. ಕೇಸ್ ಆದರೂ ಪೊಲೀಸರು ಆರೋಪಿಯನ್ನು ಬಂಧಿಸಲಿಲ್ಲ. ಇನ್ನೊಂದೆಡೆ ಮಣಿಪೂರದಲ್ಲಿ ಎರಡು ಜನಾಂಗಗಳ ಮಧ್ಯೆ ನಡೆದ ಜಗಳ ಆ ಸಮುದಾಯಗಳ ಮಹಿಳೆಯರನ್ನು ಅತ್ಯಂತ ಕ್ರೂರವಾಗಿ ಎರಡು ಸಾವಿರ ಪುರುಷರು ಸೇರಿ ಬತ್ತಲೆ ಮೆರವಣಿಗೆ ಮಾಡಿದ್ದು ಇದೆ. ಮಾನ್ಯ ಪ್ರಧಾನ ಮಂತ್ರಿಗಳು ಈ ಕುರಿತು ಚಕಾರ ಎತ್ತುವುದಿಲ್ಲ. ಬದಲಾಗಿ ರೇಪಿಸ್ಟರನ್ನು ಬಚಾವ್ ಮಾಡುವಲ್ಲಿ ಕೋಮುವಾದಿ ಮುಖಂಡರು ತಮ್ಮ ಕೈಲಾದ ಸಹಾಯ ಮಾಡುತ್ತಾರೆ. ಜನಾಂಗೀಯ ದ್ವೇಷದ ಪರಾಕಾಷ್ಟೆಯನ್ನು ಇಂಥ ಸಂದರ್ಭಗಳಲ್ಲಿ ಕಂಡಿದ್ದೇವೆ. ಅಂದರೆ ಪ್ರಭುತ್ವವೇ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತನ್ನ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಈಗೀಗ ನೀಚರಿಗೆ ತಾವೇನು ಮಾಡಿದರೂ ನಡೆಯುತ್ತದೆ ಎಂಬ ಹಗುರ ಭಾವನೆ ಬಂದಿದೆ. ಕಾನೂನಿನ ಕೈಯಿಂದ ಪಾರಾಗುವದನ್ನು ಪ್ರಭುತ್ವವೇ ಕಲಿಸಿಕೊಟ್ಟಿದೆ. ಹೀಗಾಗಿ ಸ್ತ್ರೀಯರ ಮೇಲೆ ಅತ್ಯಾಚಾರ ಮಾಡುವುದು ತನ್ನ ಪೌರುಷ್ಯದ ಸಂಕೇತವೆಂದೆ ಈ ಕ್ಷಣಕ್ಕೂ ಭಾವಿಸಿಕೊಂಡು ಬರಲಾಗುತ್ತಿದೆ.

ಜಾತಿ ಮತ್ತು ಬಡತನ ಇನ್ನೊಂದು ಮುಖ್ಯ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ ಆಳಂದದಲ್ಲಿ ಅತ್ಯಾಚಾರಕ್ಕೆ ಒಳಗಾದ ಮಕ್ಕಳು ಬಡವರು ಮತ್ತು ಹಿಂದುಳಿದ ಜಾತಿಗೆ ಸೇರಿದವರು. ನಿರ್ಭಯ ಕೇಸಿನಷ್ಟೇ ಬರ್ಬರಿಕವಾಗಿ ಹಲವು ಕಡೆ ದಲಿತ ಮಹಿಳೆಯರ ಮೇಲೆ ಅತ್ಯಾಚಾರಗಳು ಈ ನಡುವೆ ಘಟಿಸಿವೆ.



# ಕೊನೆ ಕ್ಷಣದಲ್ಲಿ ಮಹಿಳಾ ಮೀಸಲಾತಿ ಮಸೂದೆ! ಮೋದಿ ಸರ್ಕಾರದ ಒಂದು ಮೋಸ – ಬೃಂದಾ ಕಾರಟ್

ಸಂಸದೀಯ ಕಾರ್ಯಸೂಚಿಯೊಂದನ್ನು ಒಂದು ಸರ್ಕಾರ ನಿಗೂಢ ಉತ್ಸಾಹದಿಂದ ಮಾಡಿದಾಗ, ಕಾರ್ಯಕ್ರಮದ ಯೋಜಕರು ಕಾರ್ಯಕ್ರಮವನ್ನು ಸ್ಫೋಟಿಸಲು ಕೆಲಸ ಮಾಡಿದ್ದಾರೆ ಎಂದು ನೀವು ಖಚಿತವಾಗಿ ನಂಬಬಹುದು. ಮಹಿಳಾ ಮೀಸಲಾತಿ ಮಸೂದೆಯ ಹೋರಾಟದ ಭಾಗವಾಗಿದ್ದ ನಮ್ಮಲ್ಲಿ ಬಹುತೇಕರಿಗೆ ಸುಮಾರು ಮೂರು ದಶಕಗಳ ನಮ್ಮ ಹೋರಾಟ, ಸರ್ಕಾರದ ವೈಫಲ್ಯಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಸಾಧನವಾಗಿ ಪರಿಣಮಿಸಿರುವುದು ನಿಜಕ್ಕೂ ದುರದೃಷ್ಟಕರ. ನಾನು ಇದನ್ನು ಪ್ರಸ್ತಾಪಿಸಲು ಕಾರಣವೇನೆಂದರೆ, ಈ ಮಸೂದೆಯನ್ನು ಇಷ್ಟು ತಡವಾಗಿ ಅಂಗೀಕರಿಸುವುದರಿಂದ 18 ನೇ ಲೋಕಸಭೆಯ ವಿಷಯದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ. ಪ್ರಸ್ತುತ ಸಂವಿಧಾನದ (128 ನೇ ತಿದ್ದುಪಡಿ) ಮಸೂದೆಯು ಇದನ್ನು ಸಾಕಷ್ಟು ಸ್ಪಷ್ಟಪಡಿಸುತ್ತದೆ. ಜನಗಣತಿಯ ಅಗತ್ಯವಿಲ್ಲದೆ ಇದನ್ನು ಅಳವಡಿಸಲಾಗಿದೆ. ಮಹಿಳಾ ಮತದಾರರ ಸಂಖ್ಯೆಯ ಆಧಾರದ ಮೇಲೆ ಕ್ಷೇತ್ರಗಳನ್ನು ನಿರ್ಧರಿಸಲಾಗಿಲ್ಲವಾದರೂ, ಜನಗಣತಿಗೂ ಅದಕ್ಕೂ ಯಾವುದೇ ಸಂಬಂಧವಿಲ್ಲ. ಈ ವಿಧೇಯಕ ಜಾರಿಯಲ್ಲಿ ಮತ್ತಷ್ಟು ವಿಳಂಬವಾಗಲು ಇದು ಮತ್ತೊಂದು ಕಾರಣವಾಗಿದೆ.

**ಹೊಸ ಜನಸಂಖ್ಯೆ ಕೂಡ ಅಸಮಾನವಾಗಿರುತ್ತದೆ**

ಹಾಗಾದರೆ, ಭಾರತೀಯ ಮಹಿಳೆಯರು ಕೃತಜ್ಞರಾಗಿರಬೇಕೆ? ಈ ಪ್ರಶ್ನೆಗೆ ದೃಢವಾದ ಉತ್ತರ ಇಲ್ಲ. ತಮಗೆ ಮತ ಹಾಕಿದರೆ ಮಹಿಳೆಯರಿಗೆ ಕನಿಷ್ಠ ಮೂರನೇ ಒಂದರಷ್ಟು ಪ್ರಾತಿನಿಧ್ಯವನ್ನು ಖಾತ್ರಿಪಡಿಸುವುದಾಗಿ ಬಿಜೆಪಿ 2014ರಲ್ಲಿ ಚುನಾವಣಾ ಭರವಸೆ ನೀಡಿತ್ತು. ಬಿಜೆಪಿ ಅಧಿಕಾರದಲ್ಲಿದ್ದ 2014–2019ರ ತನ್ನ ಮೊದಲ ಅವಧಿಯಲ್ಲಿ ತಾನು ನೀಡಿದ ಭರವಸೆಗಳನ್ನು ಈಡೇರಿಸಲಿಲ್ಲ. ಈ ಕಾರಣದಿಂದಾಗಿ ಮಹಿಳೆಯರಿಗೆ ಯಾವುದೇ ಮೀಸಲಾತಿ ನೀಡಲಾಗದಿದ್ದರೂ, 17 ನೇ ಲೋಕಸಭೆಯಲ್ಲಿ ಕೇವಲ 14 ಪ್ರತಿಶತದಷ್ಟು ಮಹಿಳೆಯರಿದ್ದರು. ಬಿಜೆಪಿ 2019 ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆಯನ್ನು ಪುನರಾವರ್ತಿಸಿತು. ಆದರೆ ಅವರ ಎರಡನೇ ಆಡಳಿತದ ಕೊನೆಯ ನಾಲ್ಕು ವರ್ಷಗಳಲ್ಲಿ ಒಮ್ಮೆಯೂ ಈ ಮಹಿಳಾ ಮೀಸಲಾತಿ ವಿಷಯವನ್ನು ಪಟ್ಟಿಮಾಡಲಿಲ್ಲ. ಅಲ್ಲದೆ, ತಮ್ಮ ಅಧಿಕಾರಾವಧಿಯ ಕೊನೆಯಲ್ಲಿ ಈ ಮಸೂದೆಯನ್ನು ತರುವ ಮೂಲಕ, 18ನೇ ಲೋಕಸಭೆಯು ಮಹಿಳೆಯರಿಗೆ ಅಸಮಾನತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಖಚಿತಪಡಿಸಿದ್ದಾರೆ. ಇಂತಹ ಪರಿಸ್ಥಿತಿಗೆ ಮೋದಿ ಸರಕಾರವೇ ಹೊಣೆ. ಇಷ್ಟು ತಡವಾಗಿ ಈ ವಿಧೇಯಕ ಮಂಡನೆಗೂ ಮುಂಬರುವ ಚುನಾವಣೆಗೂ ನಿಕಟ ಸಂಬಂಧವಿದೆ. ತಾನು ನೀಡಿದ ಚುನಾವಣಾ ಭರವಸೆಯನ್ನು ಈಡೇರಿಸಿಲ್ಲ ಎಂಬ ಆರೋಪದಿಂದ ತಪ್ಪಿಸಿಕೊಳ್ಳುವ ಹಂಬಲವೂ ಇದರಲ್ಲಿದೆ.

**ಚುನಾವಣಾ ಪ್ರಣಾಳಿಕೆಯಂತೆ ಮುನ್ನುಡಿ**

ಆದರೆ, ಜನರಿಂದ ಆಕ್ಷೇಪಿಸಬೇಕಾದದ್ದು ಮತ್ತು ಪ್ರಶ್ನಿಸಬೇಕಾದದ್ದು, ಅತ್ಯಂತ ಏಕಪಕ್ಷೀಯವಾಗಿ ವ್ಯಕ್ತವಾಗುವ ಉದ್ದೇಶಗಳು ಮತ್ತು ಕಾರಣಗಳು, ಅಂತಹ ಹೇಳಿಕೆಯು ನಿಖರವಾಗಿರಬೇಕು–ಉದ್ದೇಶ, ಗುರಿ, ಕಾನೂನಿನ ಇತಿಹಾಸವನ್ನು ಉಲ್ಲೇಖಿಸುವುದು–ನಿಖರವಾಗಿ ಇರಬೇಕು. ಆದರೆ, ಅವರ ಹೇಳಿಕೆ ಬಿಜೆಪಿಯ ಚುನಾವಣಾ ಪ್ರಣಾಳಿಕೆಯಂತೆಯೇ ಇದೆ. ಅಡುಗೆ ಅನಿಲ ಸಿಲಿಂಡರ್‌ನಿಂದ ಹಿಡಿದು ಶೌಚಾಲಯದವರೆಗೆ ಮಹಿಳೆಯರ ಅಭಿವೃದ್ಧಿಗಾಗಿ ಸರ್ಕಾರ ಮಾಡಿದೆ ಎಂದು ಹೇಳಲಾದ ಎಲ್ಲವನ್ನೂ ಇದು ಪಟ್ಟಿ ಮಾಡುತ್ತದೆ. ಹೆಣ್ಣನ್ನು ಗೃಹಿಣಿಯಾಗಿ ಮಾತ್ರ ನೋಡುವ ವಿಚಾರಧಾರೆ, ಮಹಿಳೆಯರಿಗೆ ಮೀಸಲಾತಿ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಗಳಲ್ಲಿ ಅವರ ಭಾಗವಹಿಸುವಿಕೆಯ ಪ್ರಜಾಸತ್ತಾತ್ಮಕ ಧ್ವನಿಯನ್ನು ಬಲಪಡಿಸಲು ಮಹಿಳೆಯರ ಭಾಗವಹಿಸುವಿಕೆಯನ್ನು ಅಗತ್ಯವಾದ ಪ್ರಕ್ರಿಯೆಗಳೊಂದಿಗೆ ಅಳವಡಿಸಲು ಇನ್ನೂ ಹಿಂಜರಿಯುತ್ತಿದೆ. ಪ್ರಜಾಪ್ರಭುತ್ವವನ್ನು ಬಲಪಡಿಸಲು ಮಹಿಳಾ ಹೋರಾಟವನ್ನು ದಾಖಲಿಸಲು ಪುನಃ ಮುನ್ನುಡಿ ಬರೆಯಬೇಕಿದೆ. ಮಹಿಳಾ ಮೀಸಲಾತಿ ಕಾಯಿದೆ ಐತಿಹಾಸಿಕವಾಗಿದೆ. ಅವರು ವ್ಯಕ್ತಪಡಿಸಿದ ಉದ್ದೇಶಗಳು ಮತ್ತು ಚುನಾವಣೆಯನ್ನು ಪರಿಗಣಿಸುವ ಕಾರಣಗಳಿಗಾಗಿ ಈ ಕಾಯಿದೆಯು ಕಳಂಕಿತವಾಗಬಾರದು.

**ಸುದೀರ್ಘ ಇತಿಹಾಸ ಹೊಂದಿರುವ ಮಸೂದೆ**

ಈ ಮಸೂದೆಯ ಇತಿಹಾಸದ ಬಗ್ಗೆ ಮಾಧ್ಯಮಗಳಲ್ಲಿ ಮಾಧ್ಯಮಗಳಲ್ಲಿ ಸುದ್ದಿಗಳ ಮಹಾಪೂರವೇ ಹರಿದುಬರುತ್ತಿದೆ. ದೇಶಾದ್ಯಂತ ಮಹಿಳಾ ಸಂಘಟನೆಗಳು ಮತ್ತು ಚಳುವಳಿಗಳ ದೃಢತೆ, ನಿರಂತರ ಸಜ್ಜುಗೊಳಿಸುವಿಕೆ, ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಮೀಸಲಾತಿ, ಸ್ಥಳೀಯ ಸಂಸ್ಥೆಗಳಲ್ಲಿಯೂ ಜಾರಿಗೆ ಬಂದ ನಂತರ, ಇದೇ ಮೊದಲ ಬಾರಿಗೆ ಅನುಷ್ಠಾನಕ್ಕೆ ಬಂದ ಚುನಾಯಿತ ಮಹಿಳಾ ಪ್ರತಿನಿಧಿಗಳ ಗಮನಾರ್ಹ ಕೆಲಸದಿಂದ ಬಲಗೊಂಡಿತು. ಇವುಗಳಿಂದಾಗಿ, ಮಸೂದೆಗೆ ತನ್ನದೇ ಆದ ಇತಿಹಾಸವಿದೆ ಮತ್ತು 1996 ರಲ್ಲಿ ಪ್ರಾರಂಭವಾದಾಗಿನಿಂದ ಅದನ್ನು ಅಗೆದು ಹೂಳಲಾಗಿಲ್ಲ ಎಂಬುದು ನಿಜ. ಅವಹೇಳನ, ನಿರಾಕರಿಸುವ ವರ್ತನೆಗಳು, ನಿರ್ಧಾರ ತೆಗೆದುಕೊಳ್ಳುವ ರಚನೆಗಳಲ್ಲಿ ಬೇರೂರಿರುವ ನಿರಂಕುಶಾಧಿಕಾರದಿಂದ ಹೇರಲಾದ ಎಲ್ಲಾ ಅಡೆತಡೆಗಳನ್ನು ನಿವಾರಿಸುವುದು, ಇವುಗಳಲ್ಲಿ ತಾವೇನೂ ಕಡಿಮೆಯಲ್ಲ ಎಂಬುದನ್ನು ಪ್ರತಿ ರಾಜ್ಯದಲ್ಲೂ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾದ ಮಹಿಳೆಯರು ಸಾಬೀತುಪಡಿಸಿದರು. ಈ ಮಸೂದೆಯನ್ನು ಜೀವಂತವಾಗಿರಿಸಿಕೊಂಡ ಮಹಿಳಾ ಹೋರಾಟಗಾರರು, ಮಹಿಳಾ ಚಳುವಳಿಗಳನ್ನು ಈ ದೇಶ ನೆನಪಿಸಿಕೊಳ್ಳಬೇಕು ಮತ್ತು ಗೌರವಿಸಬೇಕು.



**ಈ ಹಿಂದೆ ಬಿಜೆಪಿಯಿಂದ ಅಡ್ಡಿಪಡಿಸುವ ಯತ್ನ ನಡೆದಿತ್ತು**

ಯುಪಿಎ ಆಡಳಿತಾವಧಿಯಲ್ಲಿ 2010ರ ಮಾರ್ಚ್‌ನಲ್ಲಿ ರಾಜ್ಯಸಭೆಯಲ್ಲಿ ಮಸೂದೆಯನ್ನು ಅಂಗೀಕಾರವಾದಾಗ, ಅಲ್ಲಿ ನಡೆದ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೆ. ಆ ಚರ್ಚೆಗಳಲ್ಲಿ ಭಾಗವಹಿಸಿದ ವಿವಿಧ ಜನರ ದುಷ್ಕೃತ್ಯಗಳಿಗೆ ನಾನೂ ಸಹ ಸಾಕ್ಷಿಯಾಗಿದ್ದೆ. ಸಭಾಪತಿ ಸಭಾಂಗಣದಲ್ಲಿ ನಡೆದ ಚರ್ಚೆಯಲ್ಲಿ ಹಲವು ವಿಷಯಗಳು ಪ್ರಸ್ತಾಪವಾದವು. ಈ ಮಸೂದೆ ಅಂಗೀಕಾರಕ್ಕೆ "ತಮ್ಮ ಆದೇಶ" ಷರತ್ತಾಗಿರಬೇಕು ಎಂದು ಬಿಜೆಪಿ ನಾಯಕರೊಬ್ಬರು ಪ್ರಸ್ತಾಪಿಸಿದ ವಿಷಯವೂ ಒಂದು. ಈ ಮಸೂದೆ ಅಂಗೀಕಾರವಾಗದಿರಲು, ಮಸೂದೆಯ ಅಂಗೀಕಾರದ ಶ್ರೇಯಸ್ಸು ಯುನೈಟೆಡ್ ಪ್ರೋಗ್ರೆಸ್ಸಿವ್ ಅಲೈಯನ್ಸ್ ಸರ್ಕಾರಕ್ಕೆ ಹೋಗಬಾರದು ಎಂದು ಖಚಿತಪಡಿಸಿಕೊಳ್ಳಲು, ರಾಜ್ಯಸಭೆಯ ಕಲಾಪಕ್ಕೆ ಅಡ್ಡಿಪಡಿಸಲು ಈಗಾಗಲೇ ಯೋಜಿಸಿದ್ದವರಿಗೆ ಇದು ಅನುಮತಿಯಂತೆ ನನಗೆ ತೋರಿತು.

**ಸೋನಿಯಾ ಗಾಂಧಿ, ಹಮೀದ್ ಅನ್ಸಾರಿ ಅವರ ದೃಢ ಬೆಂಬಲ**

ಯುನೈಟೆಡ್ ಪ್ರೊಗ್ರೆಸ್ಸಿವ್ ಅಲಯನ್ಸ್‌ನಲ್ಲಿ ಸ್ಥಾನ ಪಡೆದಿರುವವರೊಂದಿಗೆ ಮೀಸಲಾತಿಗೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಪಕ್ಷದ ಪ್ರಮುಖರು ಸೇರಿದಂತೆ, ಪಕ್ಷದಲ್ಲಿ ಈ ವಿಷಯದಲ್ಲಿ ಆಸಕ್ತಿ ಇಲ್ಲದವರಿದ್ದರು. ಆದಾಗ್ಯೂ, ಯುನೈಟೆಡ್ ಪ್ರೊಗ್ರೆಸ್ಸಿವ್ ಅಲಯನ್ಸ್‌ನ ಅಂದಿನ ನಾಯಕಿ ಸೋನಿಯಾ ಗಾಂಧಿಯವರು ಮಸೂದೆಯನ್ನು ಬೆಂಬಲಿಸಿದ್ದರಿಂದ, ಮಸೂದೆಯನ್ನು ಪುನರುಜ್ಜೀವನಗೊಳಿಸುವ ವಿವಿಧ ಯೋಜನೆಗಳನ್ನು ವಿಫಲಗೊಳಿಸಲಾಯಿತು. ರಾಜ್ಯಸಭಾ ಅಧ್ಯಕ್ಷ ಹಮೀದ್ ಅನ್ಸಾರಿ ಅವರು ತೆಗೆದುಕೊಂಡ ದೃಢ ನಿಲುವು ಮಸೂದೆ ಅಂಗೀಕಾರಕ್ಕೆ ಪ್ರಮುಖ ಅಂಶವಾಗಿತ್ತು. ನನ್ನ ಹಿಂದೆ ಕುಳಿತಿದ್ದ ಸಮಾಜವಾದಿ ಪಕ್ಷದ ಸದಸ್ಯರೊಬ್ಬರು ಗ್ಲಾಸ್ ಒಡೆದು, ಕೈ ಕೊಯ್ದುಕೊಂಡು, ಮೇಜಿನ ಮೇಲೆ ರಕ್ತ ಸುರಿಯುತ್ತಾ ಮಸೂದೆಗೆ ವಿರೋಧ ವ್ಯಕ್ತಪಡಿಸಿದರು. ಮಸೂದೆಯನ್ನು ವಿರೋಧಿಸಿದ ಹಲವರು ಜೋರಾಗಿ ಕೂಗುತ್ತಿದ್ದರು. ಇಂತಹ ಕಾರ್ಯಗಳಿಂದ ವಿಚಲಿತರಾಗದ ಸಭಾಪತಿಯವರು ಯಾವುದೇ ಮುಲಾಜಿಲ್ಲದೆ ಅವರನ್ನೆಲ್ಲ ಸದನದಿಂದ ಹೊರ ಹಾಕಿ ಸದನವನ್ನು ಸುವ್ಯವಸ್ಥೆಗೆ ತಂದರು. ನಂತರ ಮಸೂದೆ ಅಂಗೀಕಾರವಾಯಿತು. ಅದನ್ನು ಸಾಧಿಸಿದ ಕ್ಷಣವು ಐತಿಹಾಸಿಕವಾಗಿತ್ತು.

**ಸುಷ್ಮಾ ಸ್ವರಾಜ್ ಕಾಯುತ್ತಿದ್ದರು**

ತಂಪಾದ ರಾತ್ರಿಯ ಗಾಳಿಗೆ ನಾವು ಹೊರನಡೆಯುತ್ತಿದ್ದಂತೆ, ಲೋಕಸಭೆಯ ಆಗಿನ ವಿರೋಧ ಪಕ್ಷದ ನಾಯಕಿ ಸುಷ್ಮಾ ಸ್ವರಾಜ್ ನಮಗಾಗಿ ಕಾಯುತ್ತಿದ್ದರು. ಪಕ್ಷಾತೀತವಾಗಿ ಮಹಿಳಾ ಸಂಸದರು ಒಟ್ಟಾಗಿ ಈ ದಿನವನ್ನು ಆಚರಿಸಿದರು. ಒಂದು ದೊಡ್ಡ ಉದ್ದೇಶಕ್ಕಾಗಿ ಒಗ್ಗೂಡುವಿಕೆಗೆ ಇದು ಉತ್ತಮ ಉದಾಹರಣೆಯಾಗಿದೆ. ಅಂತಹ ಸಂಬಂಧ ಇಂದು ಆಡಳಿತ ಪಕ್ಷಕ್ಕೆ ಸೇರಿದ ಮಹಿಳಾ ಮುಖಂಡರು ಮತ್ತು ಸಚಿವರಲ್ಲಿ ಇಲ್ಲ. ಮಹಿಳೆಯರ ಪ್ರತಿಭಟನೆಯ ಬಲವು ಮಸೂದೆಯನ್ನು ಮರಳಿ ತರುವುದನ್ನು ಖಚಿತಪಡಿಸಿತು. ಅಲ್ಲದೆ, ಆ ಮೂಲಕ ಭಾರತೀಯ ಪ್ರಜಾಸತ್ತಾತ್ಮಕ ಧ್ವನಿಯನ್ನು ಬಲಪಡಿಸಲು ಸಹಾಯ ಮಾಡುತ್ತದೆ.

ಆಗ ಭುಗಿಲೆದ್ದಂತೆ ಈಗೇಕೆ ಹೋರಾಟಗಳು ಏಳಲಿಲ್ಲ ಎಂಬುದಕ್ಕೆ ಏನಾದರೂ ಕಾರಣ ಇರಲೇ ಬೇಕಿಲ್ಲ. ಹೌದು ಆಗ ಎದ್ದ ಕಾರಣಗಳ ಮಹಿಳೆಯ ಮೇಲಿನ ದೌರ್ಜನ್ಯಕ್ಕಿಂತ ಹೆಚ್ಚಾಗಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ತಂತ್ರಗಾರಿಕೆಯಿಂದ ಕೂಡಿದ್ದವು. ಹೀಗೆಂದು ನಿರ್ಭಯಾ ಪ್ರಕರಣವನ್ನು ನಗಣ್ಯಗೊಳಿಸಬೇಕು ಎಂದಲ್ಲ. ಎದ್ದ ಹೋರಾಟಗಳು ತಪ್ಪು ಎಂದೂ ಅಲ್ಲ. ಅಂಥ ಅನೇಕ ಘಟನೆಗಳು ಆನಂತರವೂ ನಡೆದಾಗ ಹೋರಾಟಗಳು ಅದೇ ರೇಂಜ್ ನಲ್ಲಿ ಏಕೆ ಏಳುತ್ತಿಲ್ಲ. ಮಾಧ್ಯಮಗಳೇಕೆ ಸುಮ್ಮನಾಗುತ್ತಿವೆ. ಅತ್ಯಾಚಾರಗಳಿಗೆ ಕಾಮುಕತೆ, ದೈಹಿಕ ವಾಂಛೆ ಮಾತ್ರ ಕಾರಣವಾಗಬೇಕಿಲ್ಲ. ಜ್ಯಾಕ್ ದರಿಪ್ಪರ್ ಎಂಬ ಅತ್ಯಾಚಾರಿ–ಕೊಲೆ ಪಾತಕಿ ಷಂಡನಾಗಿದ್ದ. ಅತ್ಯಾಚಾರ ಎಸಗಲು ಲೈಂಗಿಕ ಅಂಗವೇ ಬೇಕಿಲ್ಲ. ವಸ್ತುಗಳು ಸಾಕು.


ಮಣಿಪುರದಲ್ಲಿ ನಡೆದ ಬೆತ್ತಲೆ ಮೆರವಣಿಗೆಯು ಕಾಮುಕತೆಯ ಪರಿಣಾಮವಲ್ಲ. ಒಂದು ಸಮುದಾಯ ಇನ್ನೊಂದು ಸಮುದಾಯದ ಮೇಲೆ, ಅಥವಾ ಒಂದು ಕುಟುಂಬ ಮತ್ತೊಂದು ಕುಟುಂಬದ ಮೇಲೆ ದ್ವೇಷ ತೀರಿಸಿಕೊಳ್ಳುವ ಸಾಧನವಾಗಿ ಉದ್ದಕ್ಕೂ ಸ್ತ್ರೀದೇಹವನ್ನು ಬಳಸಿಕೊಳ್ಳಲಾಗಿದೆ. ದೌಪ್ರದಿಯನ್ನು ತುಂಬಿದ ಸಭೆಯಲ್ಲಿ ಎಳೆದು ಅಪಮಾನ ಮಾಡಿದ್ದು, ಶೂರ್ಪನಖಿಯ ಮೊಲೆ ಮೂಗು ಕತ್ತರಿಸಿದ್ದು ಇತ್ಯಾದಿಗಳೆಲ್ಲ ಪುರುಷ ಅಹಂನ ಕ್ರೌರ್ಯಗಳೇ ಅಲ್ಲವೆ? ಜಗಳ ಇದ್ದದ್ದು ಆಸ್ತಿಗಾಗಿ. ಆದರೆ ಅದರ ದುಷ್ಪರಿಣಾ ಆಗಿದ್ದು ಸ್ತ್ರೀಯರ ಮೇಲೆ. ಕಾರಣ ಹೆಣ್ಣು ಪುರುಷ ಉಪಯೋಗಿಸುವ ವಸ್ತು ಎಂಬ ಭಾವನೆ ಸಮಾಜದಲ್ಲಿ ಬಿತ್ತಿ ಬೆಳೆಯಲಾಗಿದೆ.

ಎಲ್ಲಿವರೆಗೆ ಸ್ತ್ರೀಯರನ್ನು ವಸ್ತುವಾಗಿ ಪರಿಗಣನೆ ಮಾಡುವುದು ನಿಲ್ಲುವುದಿಲ್ಲವೋ ಅಲ್ಲಿಯವರೆಗೆ ಅತ್ಯಾಚಾರಗಳು ನಿಲ್ಲವು. ದೊಡ್ಡ ಬಂಡವಾಳಶಾಹಿ ಲೋಕಕ್ಕೆ ಸ್ತ್ರೀಯರ ಶರೀರವು ಪ್ರಾಂಪ್ಟ್ ಬಂಡವಾಳ. ಅದನ್ನು ಪ್ರದರ್ಶಿಸಿ, ಮಾರಾಟ ಮಾಡಿ ಇಲ್ಲವೆ ಹಿಂಸಿಸಿ, ಅಪಮಾನಿಸಿ, ಹೊಸಕಿ ಏನೆಲ್ಲ ಮಾಡುವ ಮೂಲಕ ತನ್ನ ಆದಾಯ ಹೆಚ್ಚಿಸಿಕೊಳ್ಳಬಹುದು ಎಂಬುದನ್ನು ತೋರಿಸಿಕೊಡುತ್ತಿದ್ದಾರೆ. ಅಂದರೆ ದೇಶದಲ್ಲಿ ಹೆಚ್ಚುತ್ತಿರುವ ಖಾಸಗೀಕರಣ, ಉದಾರೀಕರಣ ನೀತಿಗೂ ಹೆಚ್ಚುತ್ತಿರುವ ದೌರ್ಜನ್ಯಗಳಿಗೂ ನೇರವಾದ ಸಂಬಂಧ ಇದೆ ಎಂಬುದನ್ನು ಮರೆಯದಿರೋಣ.

ಸರ್ಕಾರಿ ಉದ್ಯೋಗಿಗಳನ್ನು ವೃದ್ಧಾಪ್ಯದಲ್ಲಿ ಅಸಹಾಯಕರಾಗಿ ಬಿಡುವುದೂ ಒಂದು ಸಾಧನೆಯೇ?

# ಹಳೆಯ ಪಿಂಚಣಿ ಯೋಜನೆ(OPS) ಜಾಗದಲ್ಲಿ ಹೊಸ ಪಿಂಚಣಿ ಯೋಜನೆ(NPS)

ಸಿ. ಸಿದ್ದಯ್ಯ




**ಬಿಜೆಪಿಯವರು ಹೇಳುವಂತೆ ಮೋದಿ ಆಡಳಿತದಲ್ಲಿ ಜಾರಿಗೊಂಡ ಯೋಜನೆಗಳು ಅವರ ಸಾಧನೆಗಳೇ? ಅಥವಾ ನವ ಉದಾರವಾದಿ ನೀತಿಗಳ ಜಾರಿಯ ಭಾಗವಾಗಿ ಸರ್ಕಾರ ತನ್ನ ಸಾಮಾಜಿಕ ಜವಾಬ್ದಾರಿಗಳಿಂದ ಕಳಚಿಕೊಳ್ಳಲು ಮಾಡುವ ತಂತ್ರಗಳೇ? ಸರ್ಕಾರ ಇಂದು ಸಾರ್ವಜನಿಕರಿಗೆ ನೀಡುತ್ತಿರುವ ವೃದ್ದಾಪ್ಯ ವೇತನದಂತಹ ಕೊಡುಗೆ ರಹಿತ ಪಿಂಚಣಿ ಯೋಜನೆಗಳ ಹೊರೆಯಿಂದ ತಪ್ಪಿಸಿಕೊಳ್ಳುವ ದೂರ ದೃಷ್ಟಿಯಿಂದ, ಅಟಲ್ ಪಿಂಚಣಿ ಯೋಜನೆಯಂತಹ ಕೊಡುಗೆ ಪಿಂಚಣಿ ಯೋಜನೆಗಳನ್ನು ಜಾರಿಗೆ ತಂದಿರುವ ಕುರಿತು ಈ ಹಿಂದೆ ಇದೇ ಅಂಕಣದಲ್ಲಿ ಬರೆಯಲಾಗಿದೆ. ಈ ಲೇಖನದಲ್ಲಿ ಸರ್ಕಾರಿ ಉದ್ಯೋಗಿಗಳ ಹಳೆಯ ಪಿಂಚಣಿ ಯೋಜನೆ(ಒಪಿಎಸ್) ಜಾಗದಲ್ಲಿ ಹೊಸ ಪಿಂಚಣಿ ಯೋಜನೆ(ಎನ್.ಪಿ.ಎಸ್.) ಜಾರಿಗೆ ತಂದಿರುವ ಕುರಿತು ನೋಡೋಣ.**

**ಮೋದಿ 9 ವರ್ಷಗಳು–ಭಾಗ–17**




## ಖಾತರಿ ಪಿಂಚಣಿ ನೌಕರರ ಹಕ್ಕು ಆಡಳಿತಗಾರರ ಭಿಕ್ಷೆಯಲ್ಲ

ಪಿಂಚಣಿ ಎಂಬುದು ನೌಕರನ ಹಕ್ಕು, ಅದು ಉದ್ಯೋಗದಾತರು ನೀಡುವ ದಯಾ ಬಿಕ್ಷೆಯಲ್ಲ. ನೌಕರನು ತಾನು ಮಾಡಿದ ಸೇವೆಗೆ ಸಲ್ಲಬೇಕಾದ ಪ್ರತಿಫಲವೇ ಪಿಂಚಣಿ. ಯಾರನ್ನೂ ವೃದ್ಧಾಪ್ಯದಲ್ಲಿ ಅಸಹಾಯಕರಾಗಿ ಬಿಡುವುದಿಲ್ಲ ಎಂಬ ಭರವಸೆ ಅದು. ಪಿಂಚಣಿ ಒಂದು 'ಸಾಮಾಜಿಕ ಭದ್ರತಾ ಕ್ರಮ' ಎಂಬುದು 1982ರಲ್ಲಿ ಡಿಎಸ್ ನಕಾರ ವರ್ಸಸ್ ಯೂನಿಯನ್ ಆಫ್ ಇಂಡಿಯಾ (D.S Nakara v. Union of India) ಪ್ರಕರಣದಲ್ಲಿ ಆಗಿನ ಮುಖ್ಯ ನ್ಯಾಯಮೂರ್ತಿ ವೈ.ವಿ.ಚಂದ್ರಚೂಡ್ ಅವರು ಕೊಟ್ಟ ತೀರ್ಪು. ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ, ನಿವೃತ್ತಿಯ ನಂತರ ಈ ದೇಶದಲ್ಲಿ ಖಾಯಂ ಉದ್ಯೋಗದಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬರಿಗೂ ಪಿಂಚಣಿ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ವಿಷಯದಲ್ಲಿ ಯಾವುದೇ ವಿನಾಯಿತಿಗಳಿಲ್ಲ. ಹಣಕಾಸಿನ ಕಾರಣ ನೀಡಿ, ಹಣದ ಕೊರತೆಯ ನೆಪದಲ್ಲಿ ಪಿಂಚಣಿ ನಿರಾಕರಣೆ ಮಾಡುವುದು ಸುಪ್ರೀಂ ಕೋರ್ಟ್‌ನ ಆದೇಶಗಳಿಗೆ ವಿರುದ್ಧವಾಗಿದೆ. ದೇಹದಲ್ಲಿ ಶಕ್ತಿ ಇದ್ದಾಗ ದುಡಿದು ಮುದುಕರಾಗುತ್ತಾ ಹೋದರೆ ತಂದೆ–ತಾಯಂದಿರೇ ಹೊರೆ, ತನ್ನ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ ಎಂದು ಅವರನ್ನು ಮನೆಯಿಂದ ಹೊರ ಹಾಕುವುದು ನ್ಯಾಯವೇ? ಬ್ಯಾಂಕಿನಿಂದ ಸಾಲ ಪಡೆದವರು ಸರಿಯಾಗಿ ಪಾವತಿಸಲು ಸಾಧ್ಯವಾಗದೇ ಇದ್ದರೆ, ವಸೂಲಾಗದ ಸಾಲ ಎಂಬ ಹೆಸರಿನಲ್ಲಿ ಸರ್ಕಾರಗಳು ಪ್ರತಿ ವರ್ಷ ಹಲವಾರು ಲಕ್ಷ ಕೋಟಿಗಳ ರಿಯಾಯಿತಿಯನ್ನು ನೀಡುತ್ತಿವೆ. ಆದರೆ ಪಿಂಚಣಿ ನೀಡುವಾಗ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ನೆಪ ಹೇಳುವುದು ಸರಿಯಲ್ಲ. ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಪಿಂಚಣಿ ನೌಕರರ ಹಕ್ಕು. ಈ ಬಗ್ಗೆ ಚರ್ಚೆ ಬೇಡ ಎಂಬುದು ನೌಕರರ ದೃಢವಾದ ಅಭಿಪ್ರಾಯವಾಗಿದೆ.

**ಪಿಂಚಣಿ ಸುಧಾರಣೆಗಳು ಏಕೆ?**

ದೇಶದಲ್ಲಿ ಹೊಸ ಆರ್ಥಿಕ ನೀತಿಗಳು ಬಂದ ನಂತರ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ((IMF) "ವರ್ಕಿಂಗ್ ಪೇಪರ್ ಆನ್ ಪೆನ್ಶನ್ ರಿಫೋರ್ಟ್ಸ್ ಇನ್ ಇಂಡಿಯಾ" ಎಂಬ ದಾಖಲೆಯನ್ನು 2001 ರಲ್ಲಿ ಸಿದ್ಧಪಡಿಸಿತು. ಇದಕ್ಕನುಸಾರವಾಗಿ 2002ರಲ್ಲಿ ಅಂದಿನ ಕೇಂದ್ರ ಸರಕಾರ ಬಿ.ಕೆ.ಭಟ್ಟಾಚಾರ್ಯ ಸಮಿತಿಯನ್ನು ನೇಮಿಸಿತ್ತು. ಅಕ್ಟೋಬರ್ 2003 ರಲ್ಲಿ, ಹೊಸ ಪಿಂಚಣಿ ಯೋಜನೆಯನ್ನು ವರದಿ ಮಾಡಲಾಯಿತು. ಇದನ್ನು ಆಧರಿಸಿ ಕೇಂದ್ರ ಸರ್ಕಾರವು ಹಣಕಾಸು ಇಲಾಖೆಯ ಮೂಲಕ ತಾತ್ಕಾಲಿಕ ಪಿಎಫ್‌ಆರ್‌ಡಿಎ (Pension Fund Regulatory & Development Authority) ಯನ್ನು ಘೋಷಿಸಿತು. ಡಿಸೆಂಬರ್ 22, 2003 ರಂದು ಅಂದಿನ ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ನೀತಿ ನಿರೂಪಣೆಯನ್ನು ಮಾಡಿತು. 2004 ಜನವರಿ ಒಂದರಿಂದ ಹೊಸ ಪಿಂಚಣಿ ಯೋಜನೆ (ಕೊಡುಗೆ ಪಿಂಚಣಿ ಯೋಜನೆ–CPS) ಜಾರಿಗೆ ಬಂದಿತು.

ಇದು ನಮ್ಮ ರಾಜ್ಯದಲ್ಲಿ 2006 ರ ಏಪ್ರಿಲ್ ಒಂದರಿಂದ ಜಾರಿಗೆ ಬಂದಿತು. ಪಿಂಚಣಿ ನಿಧಿಯಲ್ಲಿ ಹಲವಾರು ಲಕ್ಷ ಕೋಟಿ ರೂಪಾಯಿಗಳ ಹೂಡಿಕೆ ಇರುವುದನ್ನು ವಿಶ್ವಬ್ಯಾಂಕ್ ಗಮನಿಸಿದೆ. ಸರಕಾರ ಪ್ರಜೆಗಳಿಗೆ, ನೌಕರರಿಗೆ ನೀಡುವ ಸೌಲಭ್ಯಗಳಿಗೆ ಕಡಿತ ಮಾಡಿ, ಜನರು ಎಲ್ಲವನ್ನೂ ಖರೀದಿಸಬೇಕು ಮತ್ತು ಏನನ್ನೂ ಉಚಿತವಾಗಿ ನೀಡಬಾರದು ಎಂಬ ತತ್ವದ ಅನುಷ್ಠಾನದ ಭಾಗವಾಗಿ ಈ ಪಿಂಚಣಿ ಸುಧಾರಣೆಗಳನ್ನು ಜಾರಿಗೊಳಿಸಲಾಗಿದೆ.

**ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಉದ್ಯೋಗಿಗಳ ಪಿಂಚಣಿ ವಿಚಾರದಲ್ಲಿ ಒಂದೇ ವಿಧಾನವನ್ನು ಅನುಸರಿಸುತ್ತಿವೆ. ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ, ನಿವೃತ್ತಿಯ ನಂತರ ಈ ದೇಶದಲ್ಲಿ ಖಾಯಂ ಉದ್ಯೋಗದಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬರಿಗೂ ಪಿಂಚಣಿ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ವಿಷಯದಲ್ಲಿ ಯಾವುದೇ ವಿನಾಯಿತಿಗಳಿಲ್ಲ. ಹಣಕಾಸಿನ ಕಾರಣ ನೀಡಿ, ಹಣದ ಕೊರತೆಯ ನೆಪದಲ್ಲಿ ಪಿಂಚಣಿ ನಿರಾಕರಣೆ ಮಾಡುವುದು ಸುಪ್ರೀಂ ಕೋರ್ಟ್‌ನ ಆದೇಶಗಳಿಗೆ ವಿರುದ್ಧವಾಗಿದೆ. ದೇಹದಲ್ಲಿ ಶಕ್ತಿ ಇದ್ದಾಗ ದುಡಿದು ಮುದುಕರಾಗುತ್ತಾ ಹೋದರೆ ತಂದೆ–ತಾಯಂದಿರೇ ಹೊರೆ, ತನ್ನ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ ಎಂದು ಅವರನ್ನು ಮನೆಯಿಂದ ಹೊರ ಹಾಕುವುದು ನ್ಯಾಯವೇ?**

ಕಲ್ಯಾಣ ರಾಜ್ಯವು ಮಾರಾಟದ ಸರಕು ವಿಧಾನಗಳನ್ನು ಪರಿಚಯಿಸಿದ ನಂತರ ಎಲ್ಲವೂ ಹೊರೆಯಾಗುತ್ತದೆ. ಜನಸಾಮಾನ್ಯರಿಗೆ ಮತ್ತು ನೌಕರರಿಗೆ ಪಿಂಚಣಿ ಕೊಡುವುದು ಸರ್ಕಾರಕ್ಕೆ ಹೊರೆಯಾಗುತ್ತದೆ ಎಂದು ಹೇಳುವ ಆಳುವವರು, ಕೈಗಾರಿಕೋದ್ಯಮಿಗಳಿಗೆ ರಿಯಾಯಿತಿ ನೀಡುವಾಗ ಆರ್ಥಿಕ ಸ್ಥಿತಿಗತಿಯನ್ನು ಗಮನದಲ್ಲಿಟ್ಟುಕೊಳ್ಳದಿರುವುದು ಅಚ್ಚರಿಯ ಸಂಗತಿ. ಆರ್ಥಿಕ ಸುಧಾರಣೆಗಳ ಭಾಗವಾಗಿ ಬಂದಿರುವ ಈ ಪಿಂಚಣಿ ಸುಧಾರಣೆಗಳನ್ನು ನಾವು ಹಿಮ್ಮೆಟ್ಟಿಸಲು ಬಯಸಿದರೆ, ನವ ಉದಾರವಾದಿ ನೀತಿಗಳ ಭಾಗವಾಗಿ ನಡೆಯುತ್ತಿರುವ ಆರ್ಥಿಕ ಸುಧಾರಣೆಗಳ ಬಗ್ಗೆಯೂ ನಾವು ಹೋರಾಡಬೇಕಾಗಿದೆ. ಸರ್ಕಾರದ ಈ ಆರ್ಥಿಕ ನೀತಿಗಳ ವಿರುದ್ಧ ಹೋರಾಡದೆ, ನಮ್ಮ ಇಂದಿನ ಪಿಂಚಣಿ ಸಮಸ್ಯೆ ಬಗೆಹರಿಯಲಾರದು.

**ಹಳೆಯ ಪಿಂಚಣಿ ಖಾತರಿ**

ಹಳೆಯ ಪಿಂಚಣಿ ಖಾತರಿ ಯೋಜನೆ ನೌಕರರಿಗೆ ಆಕಸ್ಮಿಕವಾಗಿ ನೀಡಿದ ಖಾತರಿಯಲ್ಲ. ಅದು ಕಾರ್ಮಿಕರ ಸಮರಧೀರ ಹೋರಾಟಗಳ ಮೂಲಕ ಪಡೆದದ್ದು. ಅದನ್ನು ಉಳಿಸಿಕೊಳ್ಳಲೂ ಹೋರಾಟಗಳು ನಡೆಯುತ್ತಲೇ ಇವೆ. ಹಳೆಯ ಪಿಂಚಣಿಯನ್ನು ಪುನಃಸ್ಥಾಪಿಸಲು ಮತ್ತು ಅಕಖ ರದ್ದುಗೊಳಿಸಲು, 2004 ರಿಂದ ದೇಶಾದ್ಯಂತ ಎಂಟು ಅಖಿಲ ಭಾರತ ಮುಷ್ಕರಗಳು ನಡೆದಿವೆ. ಇದರಲ್ಲಿ ಲಕ್ಷಾಂತರ ಕಾರ್ಮಿಕರು, ನೌಕರರು, ಶಿಕ್ಷಕರು ಭಾಗವಹಿಸಿದ್ದರು. ಕರ್ನಾಟದಲ್ಲಿಯೂ ಶಿಕ್ಷಕರು, ನೌಕರರು ಹಳೆ ಪಿಂಚಣಿಗೆ ಆಗ್ರಹಿಸಿ ನಾನಾ ರೀತಿಯ ಹೋರಾಟಗಳನ್ನು ನಡೆಸಿದ್ದಾರೆ.

**CPS - GPS - OPS ಯಾವುದು ಉತ್ತಮ?**

ಸಿಪಿಎಸ್ (ಕೊಡುಗೆ ಪಿಂಚಣಿ ಯೋಜನೆ)ನಲ್ಲಿ ಉದ್ಯೋಗಿಯಿಂದ ಶೇ. 10 ಕೊಡುಗೆ, ರಾಜ್ಯ ಸರ್ಕಾರ ಶೇ. 10 ಕೊಡುಗೆ ನೀಡುತ್ತದೆ. ಈ ಯೋಜನೆಯಲ್ಲಿ ನಿವೃತ್ತಿಯ ನಂತರ ಎಷ್ಟು ಪಿಂಚಣಿ ಬರುತ್ತದೆ ಎಂಬ ಖಾತರಿ ಇಲ್ಲ. ಪಿಂಚಣಿ ಷೇರು ಮಾರುಕಟ್ಟೆಗಳ ಏರಿಳಿತವನ್ನು ಅವಲಂಬಿಸಿರುತ್ತದೆ. ಉದ್ಯೋಗಿ ಸತ್ತರೆ ಮಾತ್ರ ಕುಟುಂಬಕ್ಕೆ ಪಿಂಚಣಿ ಸಿಗುತ್ತದೆ.

ಜಿಪಿಎಸ್ (ನ್ಯಾಯಾಂಗ ಪಿಂಚಣಿ ಯೋಜನೆ)ನಲ್ಲಿ ಶೇಕಡಾ 10 ರಷ್ಟು ನೌಕರರ ಕೊಡುಗೆ, ಸರ್ಕಾರ ಎಷ್ಟು ಕೊಡುಗೆ ನೀಡುತ್ತದೆ ಎಂಬುದು ಸ್ಪಷ್ಟವಾಗಿಲ್ಲ. ಡಿ.ಆರ್. ಪಾವತಿಸಲಾಗುತ್ತಿದೆ. ಕಮ್ಯುಟೇಶನ್, ಗ್ರಾಚ್ಯುಟಿ, ಹೆಲ್ತ್ ಕಾರ್ಡ್‌ಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ನೌಕರ ತನ್ನ 10 ರಷ್ಟು ಕೊಡುಗೆಯಿಂದ ಯಾವುದೇ ಹಣವನ್ನು ಹಿಂಪಡೆದರೆ, ಶೇಕಡಾ 50 ರಷ್ಟು ಪಿಂಚಣಿ ಸಿಗುತ್ತದೆ ಎಂದು ಹೇಳಲಾದರೂ ಇದರಲ್ಲಿ ಸ್ಪಷ್ಟತೆ ಇಲ್ಲ. (ಜೆಪಿಎಸ್ 2022 ಎಂದರೇನು? JPS 2022 ಒಂದು ವ್ಯಾಖ್ಯಾನಿಸಲಾದ ಲಾಭದ ಪಿಂಚಣಿ ಯೋಜನೆಯಾಗಿದೆ, ಅಂದರೆ ನಿಶ್ಚಿತ ಸೂತ್ರದ ಪ್ರಕಾರ ಪಾವತಿಸಬೇಕಾದ ನಿವೃತ್ತಿಯ ಸಮಯದಲ್ಲಿ ಉದ್ಯೋಗಿಯು ಖಾತರಿಯ ಮಟ್ಟದ ಪ್ರಯೋಜನವನ್ನು ಪಡೆಯುತ್ತಾರೆ. ಇದು ವೃತ್ತಿಜೀವನದ ಸರಾಸರಿ ಮರುಮೌಲ್ಯಮಾಪನದ (CARE) ಯೋಜನೆಯಾಗಿದೆ. ಯೋಜನೆಯ ನೌಕರರ ಸದಸ್ಯತ್ವದ ಉದ್ದಕ್ಕೂ ಅವರ ಪಿಂಚಣಿ ಗಳಿಕೆಯ ಸರಾಸರಿಯನ್ನು ನಿಮ್ಮ ಪಿಂಚಣಿ ಆಧರಿಸಿರುತ್ತದೆ.)




OPS (ಹಳೆಯ ಪಿಂಚಣಿ ಯೋಜನೆ)ನಲ್ಲಿ ಉದ್ಯೋಗಿ ಯಾವುದೇ ಕೊಡುಗೆಯನ್ನು ಪಾವತಿಸಬೇಕಾಗಿಲ್ಲ. ನಿವೃತ್ತಿಯ ಸಮಯದಲ್ಲಿ ಮೂಲ ವೇತನದ ಶೇ. 50 ರಷ್ಟು ಖಾತರಿ ಪಿಂಚಣಿ, ಕಮ್ಯುಟೇಶನ್, ಗ್ರಾಚ್ಯುಟಿ, ಪಿ.ಎಫ್., ಆರೋಗ್ಯ ಕಾರ್ಡ್‌ಗಳು, ಉದ್ಯೋಗಿಗೆ ಪಿಂಚಣಿ ಮತ್ತು ಮರಣ ಹೊಂದಿದಲ್ಲಿ ಕುಟುಂಬಕ್ಕೆ ಪಿಂಚಣಿ ನೀಡಲಾಗುತ್ತದೆ. 70 ವರ್ಷಗಳ ನಂತರ ಹೆಚ್ಚುವರಿ ಪಿಂಚಣಿ ನೀಡಲಾಗುತ್ತದೆ. ಪಿ.ಎಫ್.ನಲ್ಲಿ ಠೇವಣಿಯಾಗಿರುವ ಮೊತ್ತವು ರಾಜ್ಯದ ಖಜಾನೆಯಲ್ಲಿ ಇರುತ್ತದೆ.

ಸಿಪಿಎಸ್ ಮತ್ತು ಜಿಪಿಎಸ್ ಪಿಂಚಣಿ ಯೋಜನೆಗಳಲ್ಲಿ 10 ರಷ್ಟು ರಾಜ್ಯ ಸರ್ಕಾರ, ಶೇ. 10 ರಷ್ಟು ಉದ್ಯೋಗಿ ಪಾವತಿಸುವ ಮೊತ್ತ ನಮ್ಮ ರಾಜ್ಯದ ಖಜಾನೆಗೆ ಬರುವುದಿಲ್ಲ. ಷೇರು ಮಾರುಕಟ್ಟೆ ಎಂಬ ಮಾಯಾಲೋಕಕ್ಕೆ ಹೋಗುತ್ತದೆ. ಸಿಪಿಎಸ್ ಮತ್ತು ಜಿಪಿಎಸ್ ನೌಕರರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಪ್ರಯೋಜನಕಾರಿಯಲ್ಲ, ಹಳೆಯ ಪಿಂಚಣಿ ವ್ಯವಸ್ಥೆಯು ನೌಕರರಿಗೆ ಅನುಕೂಲಕರವಾಗಿದೆ ಎಂದು ಇದರಿಂದ ತಿಳಿಯುತ್ತದೆ.

**ಉತ್ತರ ಸಿಗದ ಹಲವು ಪ್ರಶ್ನೆಗಳು...**

4ನೇ ಸೆಪ್ಟೆಂಬರ್ 2013 ರಿಂದ ಜಾರಿಗೆ ಬಂದ PFRDA ಕಾಯಿದೆಯಲ್ಲಿ ➚

# ಕಲ್ಲಿದ್ದಲು ಬಿಕ್ಕಟ್ಟು ಎಂಬುದು ಒಂದು ಹಗರಣವಲ್ಲದೆ ಬೇರೇನೂ ಅಲ್ಲ –ವಿದ್ಯುತ್ ಮತ್ತು ಕಲ್ಲಿದ್ದಲು ಕಾರ್ಮಿಕರ ಸಂಘಟನೆಗಳ ಆರೋಪ

ಕೇಂದ್ರ ವಿದ್ಯುತ್ ಮತ್ತು ಕಲ್ಲಿದ್ದಲು ಇಲಾಖೆಗಳ ನಡೆಗಳಲ್ಲಿನ ವೈರುಧ್ಯ ಒಟ್ಟಾಗಿ ಸರಕಾರದ ಉದ್ದೇಶ ಮತ್ತು ನಡೆಗಳ ಬಗ್ಗೆ ಹಲವು ಸಂದೇಹಗಳನ್ನು ಎಬ್ಬಿಸಿವೆ ಈ ಇಡೀ ಕಲ್ಲಿದ್ದಲು ಬಿಕ್ಕಟ್ಟು ಎಂಬುದು ಒಂದು ಕಲ್ಲಿದ್ದಲು ಹಗರಣವಲ್ಲದೆ ಬೇರೇನೂ ಅಲ್ಲ ಎಂದು ಎಂದು ಅಖಿಲ ಭಾರತ ಕಲ್ಲಿದ್ದಲು ಕಾರ್ಮಿಕರ ಒಕ್ಕೂಟ (ಎಐಸಿಡಬ್ಲ್ಯುಎಫ್) ಮತ್ತು ಭಾರತದ ವಿದ್ಯುತ್ ನೌಕರರ ಒಕ್ಕೂಟ(ಇಇಎಫ್ಐ) ಆರೋಪಿಸಿವೆ, ಒಂದೆರಡು ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಿಕೊಡಲಿಕ್ಕಾಗಿ ಬಳಕೆದಾರರ ಮೇಲೆ ವಿದ್ಯುತ್ ದರ ಏರಿಕೆಯ ಹೊರೆ ಹಾಕುವ, ಕ್ರಮಗಳು ಎಂದು ಅವು ಹೇಳಿವೆ.



ಸೆಪ್ಟಂಬರ್ 1 ರಂದು ಭಾರತ ಸರಕಾರದ ವಿದ್ಯುತ್ ಮಂತ್ರಾಲಯ ಒಂದು ಸುತ್ತೋಲೆ ಹೊರಡಿಸಿತು. ಇದು ದೇಶೀ ಕಲ್ಲಿದ್ದಲು–ಆಧಾರಿತ ವಿದ್ಯುತ್ ಉತ್ಪಾದನಾ ಕಂಪನಿಗಳು ಮಾರ್ಚ್ 31, 2024ರ ವರೆಗೆ ಬಹಿರಂಗ ಹರಾಜು ಪ್ರಕ್ರಿಯೆಯ ಮೂಲಕ ಆಮದು ಮಾಡಿದ 4% ಕಲ್ಲಿದ್ದಲನ್ನು ಮಿಶ್ರಮಾಡಬೇಕು ಎಂದು ಆದೇಶ ನೀಡಿದ ಸುತ್ತೋಲೆ. ಈ ಮೊದಲು ಜನವರಿ 9, 2023ರಂದು ಇಂತಹ ಆದೇಶ ಹೊರಡಿಸಲಾಗಿತ್ತು. ಈ ನಿರ್ದೇಶನ ನೀಡಲು ಕಾರಣ ದೇಶದೊಳಗೆ ಸಾಕಷ್ಟು ಕಲ್ಲಿದ್ದಲು ಪೂರೈಕೆಯ ಅಭಾವ ಎನ್ನಲಾಯಿತು.

ಇದಾದ ನಾಲ್ಕೇ ದಿನಗಳಲ್ಲಿ, ಅಂದರೆ ಸೆಪ್ಟಂಬರ್ 5ರಂದು ಕಲ್ಲಿದ್ದಲು ಮಂತ್ರಾಲಯ ಹೆಚ್ಚುತ್ತಿರುವ ವಿದ್ಯುತ್ ಪೂರೈಕೆಗೆ ಬೇಕಾದಷ್ಟು ಕಲ್ಲಿದ್ದಲು ಲಭ್ಯವಿದೆ ಎಂದು ಒಂದು ಪತ್ರಿಕಾ ಹೇಳಿಕೆಯನ್ನು ನೀಡಿತು.

**ಏಕೆ ವಿರೋಧಾಭಾಸದ ನಡೆಗಳು?**

ಎಪ್ರಿಲ್ 2022ರಲ್ಲಿ ದೇಶ ತೀವ್ರ ವಿದ್ಯುತ್ ಕೊರತೆಯನ್ನು ಎದುರಿಸಿತು. ಆಗ ಸರಕಾರ 10% ಆಮದು ಕಲ್ಲಿದ್ದಲನ್ನು ನಮ್ಮ ದೇಶದಲ್ಲಿ ದೊರೆಯುವ ಕಲ್ಲಿದ್ದಲಿನೊಂದಿಗೆ ಮಿಶ್ರ ಮಾಡಬೇಕು, ಅದಕ್ಕೆ ಜುಲೈ 2022ರ ಮೊದಲು ಅದನ್ನು ಆಮದು ಮಾಡಿಕೊಳ್ಳಬೇಕು ಎಂದು ವಿದ್ಯುತ್ ಕಂಪನಿಗಳಿಗೆ ಆದೇಶ ನೀಡಿತ್ತು. ಸಾರ್ವಜನಿಕ ವಲಯದ ಕಲ್ಲಿದ್ದಲು ಗಣಿಗಾರಿಕೆಯ ಸಂಸ್ಥೆ ಕೋಲ್ ಇಂಡಿಯ ಯುನಿಟಿಗೆ 2ರೂ. ದರದಲ್ಲಿ ಕಲ್ಲಿದ್ದಲು ಪೂರೈಸುತ್ತಿದ್ದರೆ, ಆಮದು ಮಾಡಿದ ಕಲ್ಲಿದ್ದಲು ವೆಚ್ಚ ಯುನಿಟಿಗೆ 7–8ರೂ. ಇದರಿಂದಾಗಿ ಸೆಪ್ಟಂಬರ್ ತ್ರೈಮಾಸಿಕದ ಅಂತ್ಯದಲ್ಲಿಸಾರ್ವಜನಿಕ ವಲಯದ ತಾಪ ವಿದ್ಯುತ್ ಘಟಕವಾದ ಎನ್‌ಟಿಪಿಸಿ ಯ ನಿವ್ವಳ ಲಾಭದಲ್ಲಿ 7% ಇಳಿಕೆಯಾಯಿತು.

ಆದರೆ ಇದೇ ಅವಧಿಯಲ್ಲಿ ರಾಜ್ಯಸಭೆಯಲ್ಲಿ ಸರಕಾರ ನೀಡಿದ ಹೇಳಿಕೆಯ ಪ್ರಕಾರ ದೇಶದಲ್ಲಿ ಕಲ್ಲಿದ್ದಲು ಕೊರತೆ ಇಲ್ಲ! ಇದೆಂತಹ ವೈರುಧ್ಯ.?

ವಾಸ್ತವವಾಗಿ, ಸರಕಾರದ ಎರಡು ಇಲಾಖೆಗಳ ಕ್ರಮ/ಹೇಳಿಕೆಯಲ್ಲಿನ ಈ ವೈರುಧ್ಯ ದಾರಿತಪ್ಪಿಸುವಂತದ್ದು, ವಿದ್ಯುತ್ ಬಳಕೆದಾರರ ಮತ್ತು ಒಟ್ಟಾರೆಯಾಗಿ ದೇಶದ ಹಿತಾಸಕ್ತಿಗಳಿಗೆ ಮಾರಕವಾದ ಧೋರಣೆಗಳ ದುಷ್ಫಲ, ಒಂದೆರಡು ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಮಾಡಿದ ಪ್ರಯತ್ನಗಳು ಎಂಬುದನ್ನು ಈ ಹಿನ್ನೆಲೆಯಲ್ಲಿ ಈ ಎರಡು ಕಾರ್ಮಿಕ ಸಂಘಟನೆಗಳು ಸಾರ್ವಜನಿಕರ ಗಮನಕ್ಕೆ ತಂದಿವೆ. ಇಂತಹ ಕ್ರಮಗಳನ್ನು ಕೈಗೊಳ್ಳಲು ಪ್ರಭಾವ ಬೀರಿದ ಗುಂಪುಗಳು ಯಾವವು ಎಂದು ಬಹಿರಂಗ ಪಡಿಸಬೇಕು ಎಂದು ಕೇಂದ್ರ ಸರಕಾರವನ್ನು ಅವು ಆಗ್ರಹಿಸಿವೆ.

**ಅಸಮರ್ಥತೆ ಮತ್ತು ಸಂದೇಹಗಳು**

ಕೇಂದ್ರೀಯ ವಿದ್ಯುತ್ ಪ್ರಾಧಿಕಾರ (ಸಿಇಎ) ಮತ್ತು ಗ್ರಿಡ್ ಇಂಡಿಯ ಅಂದಾಜು ಮಾಡುವ ವಿದ್ಯುತ್ ಬೇಡಿಕೆಯ ಆಧಾರದಲ್ಲಿ ಕಲ್ಲಿದ್ದಲು ಉತ್ಪಾದನೆ ಮತ್ತು ಸಾಗಾಣಿಕೆಯನ್ನು ಯೋಜಿಸಲಾಗುತ್ತದೆ. ಅದಕ್ಕೆ ಅನುಗುಣವಾಗಿ ಕೋಲ್ ಇಂಡಿಯ, ರೈಲ್ವೆ ಮತ್ತು ಇತರ ಸಂಸ್ಥೆಗಳು ತಮ್ಮ ಗುರಿಗಳನ್ನು ನಿರ್ಧರಿಸುತ್ತವೆ. 2022–23ರಲ್ಲಿ ಕಲ್ಲಿದ್ದಲು ಉತ್ಪಾದನೆ ಮತ್ತು ಸಾಗಾಣಿಕೆಯಲ್ಲಿ ಗಮನಾರ್ಹ ಹೆಚ್ಚಳವಾಗಿತ್ತು, ದಾಸ್ತಾನಿನಲ್ಲೂ ಬಹಳಷ್ಟು ಹೆಚ್ಚಳವಾಗಿತ್ತು. ಆದರೂ ಕಲ್ಲಿದ್ದಲು ಪೂರೈಕೆಯಲ್ಲಿ ಕೊರತೆಯಾಗಿದ್ದರೆ, ಅದಕ್ಕೆ ಕಾರಣ ಸರಿಯಾದ ಗುರಿಗಳನ್ನು ನಿರ್ಧರಿಸುವಲ್ಲಿ, ಮತ್ತು ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಅಗತ್ಯ ಪ್ರಮಾಣದಲ್ಲಿ ಕಲ್ಲಿದ್ದಲು ಸಾಗಾಣಿಕೆಯಾಗುವಂತೆ ಖಚಿತ ಪಡಿಸುವಲ್ಲಿ ಕೇಂದ್ರ ಸರಕಾರದ ಅಸಮರ್ಥತೆಯೇ ಕಾರಣ ಎನ್ನಬೇಕಾಗುತ್ತದೆ ಎಂದು ಈ ಕಾರ್ಮಿಕ ಒಕ್ಕೂಟಗಳು ಹೇಳುತ್ತವೆ.

ಅಲ್ಲದೆ, ವಿದ್ಯುತ್ ಉತ್ಪಾದನೆಗೆ ಮಾರ್ಚ್ 2024 ರವರೆಗೆ 7 ಎಂ.ಟಿ. ಕೊರತೆ ಇದೆ ಎಂದು ಹೇಳಿದ್ದರೂ 20 ಎಂ.ಟಿ. ಆಮದಿಗೆ ನಿರ್ದೇಶನ ನೀಡಿದ್ದೇಕೆ ಎಂಬ ಪ್ರಶ್ನೆಯೂ ಎದ್ದಿತು. 2020ರ ವರೆಗೆ ಆಸ್ಟ್ರೇಲಿಯಾದಿಂದ ಉಗಿ ಉತ್ಪಾದಿಸುವ ಕಲ್ಲಿದ್ದಲು ಆಮದಿನ ಪ್ರಮಾಣ ಬಹಳ ಅಲ್ಪ ಪ್ರಮಾಣದಲ್ಲಿತ್ತು. ಆದರೆ ಹಣಕಾಸು ವರ್ಷ22ರಲ್ಲಿ ಒಮ್ಮೆಲೇ 13% ಏರಿಕೆಯಾಯಿತು. ಇದು ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡಿನಲ್ಲಿರುವ ಅದಾನಿಯ ಕಾರ್‌ಮೈಕಲ್ ಕಲ್ಲಿದ್ದಲು ಗಣಿಯಿಂದ ಕಲ್ಲಿದ್ದಲು ಉತ್ಪಾದನೆ ಆರಂಭವಾದ ಅವಧಿ. ಟಾಟಾ, ಅದಾನಿ, ಎಸ್ಸಾರ್ ಮತ್ತಿತರ ಖಾಸಗಿ ಕಾರ್ಪೊರೇಟ್‌ಗಳ ಬೇಡಿಕೆಗೆ ಸ್ಪಂದಿಸಿದ ಕೇಂದ್ರೀಯ ವಿದ್ಯುತ್ ನಿಯಂತ್ರಣ ಆಯೋಗ (ಸಿ.ಇ.ಆರ್.ಸಿ.) ಆಸ್ಟ್ರೇಲಿಯ ಮತ್ತು ದಕ್ಷಿಣ ಆಫ್ರಿಕಾದ ಕಲ್ಲಿದ್ದಲಿಗೆ ಬಹಳ ಮೇಲ್ಮಟ್ಟದ ಬೆಲೆ ಸೂಚ್ಯಂಕವನ್ನು ಸೂಚಿಸಿತು.

ಇವೆಲ್ಲವುಗಳು ಒಟ್ಟಾಗಿ ಸರಕಾರದ ಉದ್ದೇಶ ಮತ್ತು ನಡೆಗಳ ಬಗ್ಗೆ ಹಲವು ಸಂದೇಹಗಳನ್ನು ಎಬ್ಬಿಸಿವೆ ಎಂದಿರುವ ಕಾರ್ಮಿಕ ಸಂಘಟನೆಗಳು ಒಟ್ಟಿನಲ್ಲಿ, ಈ ಇಡೀ ಕಲ್ಲಿದ್ದಲು ಬಿಕ್ಕಟ್ಟು ಎಂಬುದು ಒಂದು ಕಲ್ಲಿದ್ದಲು ಹಗರಣವಲ್ಲದೆ ಬೇರೇನೂ ಅಲ್ಲ ಎಂದು ಹೇಳುತ್ತವೆ. ಏಕೆಂದರೆ ಇವು ಬಳಕೆದಾರರ ಮೇಲೆ ವಿದ್ಯುತ್ ದರ ಏರಿಕೆಯ ಹೊರೆ ಹಾಕುತ್ತವೆ, ಜತೆಗೆ ದೇಶದ ವಿದೇಶಿ ಕರೆನ್ಸಿ ಮೀಸಲು ಮತ್ತು ಚಾಲ್ತಿ ಖಾತೆ ಬಾಕಿಯ ಮೇಲೂ ನಕಾರಾತ್ಮಕ ಪ್ರಭಾವ ಬೀರುತ್ತವೆ.

ಆದ್ದರಿಂದ ಸರಕಾರ ಕೂಡಲೇ ಆಮದಾದ ಕಲ್ಲಿದ್ದಲು ಮಿಶ್ರ ಮಾಡುವ ಆದೇಶವನ್ನು ಹಿಂತೆಗೆದುಕೊಳ್ಳಬೇಕು ಮತ್ತು ಸಾಕಷ್ಟು ಪ್ರಮಾಣದ ಕಲ್ಲಿದ್ದಲು ಪೂರೈಕೆಗೆ ಅಗತ್ಯ ವ್ಯವಸ್ಥೆಗಳನ್ನು ಏರ್ಪಡಿಸಬೇಕು ಎಂದು ಆಗ್ರಹಿಸಿವೆ. ಸಾರ್ವಜನಿಕ ವಲಯದ ಉದ್ದಿಮೆಗಳು ತಮ್ಮ ಪೂರ್ಣ ಸಾಮರ್ಥ್ಯವನ್ನು ಬಳಸದಂತೆ ಅಡ್ಡಿಯುಂಟು ಮಾಢುವ ಮೋದಿ ಸರಕಾರ ಮತ್ತು ಅದರ ಬಂಟ ಕಾರ್ಪೊರೇಟ್ ಹಿತಗಳ ಅಪವಿತ್ರ ಮೈತ್ರಿಯನ್ನು ಬಯಲಿಗೆ ತರುವಲ್ಲಿ ಕಾರ್ಮಿಕರು ಮತ್ತು ಸಾರ್ವಜನಿಕರು ಕೈಜೋಡಿಸಬೇಕು ಎಂದು ಕರೆ ನೀಡಿವೆ.

---

ಬದಲಾವಣೆಗಳನ್ನು ಮಾಡದೆಯೇ **CPS, GPS** ಗೆ ಬರಬಹುದೇ? ಸರ್ಕಾರದ ಪ್ರಸ್ತುತ ಶಾಸನವು ಭವಿಷ್ಯದಲ್ಲಿ ಕಾನೂನುಬದ್ಧವಾಗಿದೆಯೇ? ಎನ್‌ಎಸ್‌ಡಿಎಲ್‌ನಲ್ಲಿ ಇನ್ನೂ ಹೂಡಿಕೆ ಮಾಡಿರುವ ರೂ. 7000 ಕೋಟಿ ಮೊತ್ತದ ಸ್ಥಿತಿ ಏನಾಗಿದೆ? 2004ಕ್ಕಿಂತ ಮೊದಲು ನೇಮಕಾತಿ ಪ್ರಕ್ರಿಯೆ ಮುಗಿಸಿ, 2004ರ ನಂತರ ಉದ್ಯೋಗ ಪಡೆದವರಿಗೆ ಹಳೆಯ ಪಿಂಚಣಿ ಜಾರಿಯಾಗುವುದೇ? 2019 ರಲ್ಲಿ ಸರ್ಕಾರದ 14 ಶೇಕಡಾ ಹೆಚ್ಚಳವನ್ನು ಜಾರಿಗೆ ತರಬೇಕೇ? ನೌಕರರಿಗೆ ಮತ್ತು ಸರ್ಕಾರಕ್ಕೆ ಅನುಕೂಲವಾಗುವ ಹಳೆಯ ಪಿಂಚಣಿ ಬಗ್ಗೆ ಏಕೆ ಚರ್ಚೆಯಾಗಿಲ್ಲ? ಸಾಮಾಜಿಕ ಹೊಣೆಗಾರಿಕೆಯ ಪಿಂಚಣಿ ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಬೇಕೇ? ಮುಂತಾದ ಹಲವು ಪ್ರಶ್ನೆಗಳಿಗೆ ಉತ್ತರಗಳಿಲ್ಲ.

**ಯಾರ ವ್ಯಾಪ್ತಿ? ಕೇಂದ್ರವೋ? ರಾಜ್ಯವೋ?**

CPS ಅನ್ನು ಯಾರು ರದ್ದುಗೊಳಿಸಬೇಕು? ರಾಜ್ಯ ಅಥವಾ ಕೇಂದ್ರವೇ? ಕೇಂದ್ರದ ವಿರುದ್ಧ ಒಂದು ಮಾತೂ ಹೇಳದೆ ರಾಜ್ಯದ ವಿರುದ್ಧ ಹೋರಾಟ ನಡೆಸಬೇಕು ಎನ್ನುವವರಿದ್ದಾರೆ. ರಾಜ್ಯದ ಕೈಯಲ್ಲಿ ಏನೂ ಇಲ್ಲ, ಇದನ್ನು ಕೇಂದ್ರವೇ ಮಾಡಬೇಕು, ಕೇಂದ್ರದ ಮೇಲೆ ಒತ್ತಡ ಹಾಕುವ ಹೋರಾಟ ಮಾಡಬೇಕು ಎನ್ನುವವರಿದ್ದಾರೆ. ಮೊದಲನೆಯದಾಗಿ, ಈ ಅಕಖ ನೀತಿಯನ್ನು PFRDA ಕಾಯಿದೆಗೆ ಅನುಗುಣವಾಗಿ ತರಲಾಗಿದೆ. ಎರಡನೆಯದಾಗಿ, ಎಡಪಕ್ಷಗಳನ್ನು ಹೊರತುಪಡಿಸಿ, ಎಲ್ಲಾ ರಾಜಕೀಯ ಪಕ್ಷಗಳು PFRDA ಕಾಯಿದೆಯನ್ನು ಮಾಡಲು ಸಹಕರಿಸಿದವು. ರಾಜಕೀಯಕ್ಕಾಗಿ ಒಂದು ಪಕ್ಷ ಮತ್ತೊಂದು ಪಕ್ಷದೊಂದಿಗೆ ಘರ್ಷಣೆ ಮಾಡುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದರೂ, ನೌಕರರ ಹಕ್ಕುಗಳನ್ನು ಕಸಿದುಕೊಳ್ಳುವ ಸಂದರ್ಭದಲ್ಲಿ ಈ ಎಲ್ಲ ಪಕ್ಷಗಳು ಒಂದಾಗಿ ವರ್ತಿಸುವುದು ಅರ್ಥವಾಗುತ್ತದೆ. ಮತ್ತೊಂದೆಡೆ ಎಡಪಕ್ಷಗಳು ಪಿಎಫ್‌ಆರ್‌ಡಿಎ ಕಾಯ್ದೆ ವಿರುದ್ಧ ಮತ ಚಲಾಯಿಸಿ ನೌಕರರ ಪರ ನಿಂತವು. ಆದ್ದರಿಂದ, PFRDA ಕಾಯಿದೆಯ ರದ್ದತಿ ಎಂದರೆ CPS ರದ್ದತಿ ಮಾತ್ರವಲ್ಲ. ಈಗ ಕೇಂದ್ರವೋ, ರಾಜ್ಯವೋ ಎಂದು ವಾದ ಮಾಡುತ್ತಾ ಸಿಪಿಎಸ್ ನಿರ್ಮೂಲನೆ ಹೋರಾಟವನ್ನು ದುರ್ಬಲಗೊಳಿಸುವುದರ ಬದಲು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉದ್ಯೋಗ ಮತ್ತು ಪಿಂಚಣಿ ಹಕ್ಕುಗಳ ವಿಷಯದಲ್ಲಿ ಒಂದೇ ವಿಧಾನವನ್ನು ಅನುಸರಿಸುತ್ತಿವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಯಾವುದೇ ರಾಜ್ಯವು ಸಿಪಿಎಸ್ ರದ್ದುಪಡಿಸಿ ಒಪಿಎಸ್‌ಗೆ ಹೋದರೆ, ಈಗಾಗಲೇ ಎನ್‌ಎಸ್‌ಡಿಎಲ್‌ನಲ್ಲಿ ಠೇವಣಿ ಹಣದ ಒಂದು ರೂಪಾಯಿ ಕೂಡಾ ರಾಜ್ಯ ಸರ್ಕಾರಕ್ಕೆ ಹಿಂತಿರುಗಲು ಸಾಧ್ಯವಿಲ್ಲ ಎಂದು ಸ್ವತಃ ಕೇಂದ್ರ ಹಣಕಾಸು ಸಚಿವೆ ಘೋಷಿಸಿದ ವಿಷಯವನ್ನು ನಾವು ಮರೆಯಬಾರದು. ನಮ್ಮ ಹೋರಾಟ ಪಿಎಫ್‌ಆರ್‌ಡಿಎ ಕಾಯ್ದೆ ಹಿಂಪಡೆಯಬೇಕು. ಹಳೆಯ ಪಿಂಚಣಿ ಪುನಶ್ಚೇತನದತ್ತ ನಮ್ಮ ಹೆಜ್ಜೆಯಿರಬೇಕು.

**ಹೋರಾಟದ ಫಲವಾಗಿ ಕೆಲ ರಾಜ್ಯಗಳಲ್ಲಿ ಹಳೆ ಪಿಂಚಣಿ**

ಹಳೆ ಪಿಂಚಣಿ ಯೋಜನೆ ಬೇಕು, ಹೊಸ ಪಿಂಚಣಿ ಯೋಜನೆ ರದ್ದು ಮಾಡಬೇಕು ಎಂದು ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲೂ ಹೋರಾಟಗಳು ವೇಗ ಪಡೆದುಕೊಂಡಿವೆ. ಈ ಹಿನ್ನೆಲೆಯಲ್ಲಿ ಪಂಜಾಬ್, ಜಾರ್ಖಂಡ್, ಹಿಮಾಚಲ ಪ್ರದೇಶ, ಅಸ್ಸಾಂ ಮತ್ತು ಒರಿಸ್ಸಾ ರಾಜ್ಯಗಳು ಸಿಪಿಎಸ್ ರದ್ದತಿಗೆ ಮುಂದಾಗಿವೆ. ಮತ್ತೆ ಕೆಲವು ರಾಜ್ಯಗಳು ಸಿಪಿಎಸ್ ಅನ್ನು ರದ್ದುಗೊಳಿಸುವುದಾಗಿ ಹೇಳುತ್ತವೆ. ಇದೆಲ್ಲದರ ಫಲವಾಗಿ ಇಂದು ಸಿಪಿಎಸ್ ರದ್ದುಪಡಿಸಿ, ಹಳೆ ಪಿಂಚಣಿಯನ್ನು ಮರುಸ್ಥಾಪಿಸಲು ಕೇಂದ್ರ ಮತ್ತು ರಾಜ್ಯ ಸರಕಾರದ ಮೇಲೆ ಒತ್ತಡ ಹೆಚ್ಚಾಗಿದೆ.

**ಹೋರಾಟವೇ ದಾರಿ**

ನೌಕರರ ಇತಿಹಾಸದಲ್ಲಿ ಮತ್ತು ಯಾವುದೇ ಕ್ಷೇತ್ರದ ಚಳವಳಿಯ ಇತಿಹಾಸದಲ್ಲಿ, ಹೋರಾಟದ ಮೂಲಕ ಗಳಿಸಿದ ಹಕ್ಕುಗಳು ಹೆಚ್ಚು ಕಾಲ ಉಳಿಯುತ್ತವೆ. ಹಳೆಯ ಪಿಂಚಣಿ ವ್ಯವಸ್ಥೆಯನ್ನು ಸಾಧಿಸುವುದು ಸಮಾಜದ ಅಂತಿಮ ಗುರಿಯಾಗಬೇಕು. ಆಡಳಿತಗಾರರ ನೀತಿಗಳ ವಿರುದ್ಧ ಹೋರಾಟ ನಡೆಯಬೇಕು. ಸಮುದಾಯಗಳು ಪರಸ್ಪರ ಶತ್ರುಗಳೆಂಬ ಧೋರಣೆ ಕೈಬಿಡಬೇಕು. ನಮ್ಮ ಸಮಸ್ಯೆಯನ್ನು ನಾವೇ ಬಗೆಹರಿಸಿಕೊಳ್ಳುತ್ತೇವೆ ಎಂದು ಹೇಳಿದರೆ ಪ್ರಯೋಜನವಿಲ್ಲ. ಇತಿಹಾಸದಲ್ಲಿ ಯಾರೂ ತಮ್ಮ ಸಮಸ್ಯೆಗಳನ್ನು ತಾವಾಗಿಯೇ ಪರಿಹರಿಸಿಲ್ಲ. ಎಲ್ಲರೂ ಒಗ್ಗೂಡಿದಾಗ ಮಾತ್ರ ಯಾವುದೇ ಸಮಸ್ಯೆಗೆ ಪರಿಹಾರ ಸಾಧ್ಯ ಎಂಬ ಪ್ರಜ್ಞೆ ಮೂಡಬೇಕು. ನೌಕರರು ಕೆಳಹಂತದಿಂದ ಹೋರಾಡಬೇಕು. ವೃದ್ಧಾಪ್ಯ ವೇತನ ಪಡೆಯಲು ಐಕ್ಯ ಚಳುವಳಿಗಳು ರೂಪುಗೊಳ್ಳಬೇಕು.

# ಭಗತ್ ಸಿಂಗ್ ಕಂಡ ಕನಸು ಮತ್ತು ಭಾರತದ ಕ್ರೂರ ವಾಸ್ತವ

## ಭಗತ್ ಸಿಂಗ್ ಮತ್ತು ಸಂಗಾತಿಗಳು ಕಂಡ ಕನಸು ಈಗ ಇನ್ನೂ ನನಸಾಗಿಲ್ಲ...

ಪುಟ 16 ರಿಂದ

ದೇಹಗಳನ್ನು ಮೆರವಣಿಗೆಯಲ್ಲಿ ರಾವಿ ನದಿಯ ದಡಕ್ಕೆ ತಂದು ಅಲ್ಲಿ ಗೌರವಯುತವಾದ ರೀತಿಯಲ್ಲಿ ಸಂಸ್ಕಾರವನ್ನು ಮಾಡುತ್ತಾರೆ.

**ದಾರಿ ತಪ್ಪಿದ ಯುವಜನರಾ?**

ಭಗತ್ ಸಿಂಗ್ ಮತ್ತು ಕ್ರಾಂತಿಕಾರಿಗಳ ಗುರಿಯು ಸರಿಯಾದದ್ದಾದರೂ ದಾರಿ ತಪ್ಪು ಎಂಬುದು ಮಹಾತ್ಮ ಗಾಂಧೀಜಿಯವರ ದೃಷ್ಟಿಕೋನವಾಗಿತ್ತು. ತನಗೆ ವಿಧಿಸಲಾದ ನೇಣು ಶಿಕ್ಷೆ ಇನ್ನೇನು ಜಾರಿಯಾಗುತ್ತದೆ ಎಂಬ ಹಂತದಲ್ಲಿ ಕೊನೇ ಭೇಟಿಯಲ್ಲಿ ಭಗತ್ ಸಿಂಗ್ ತನ್ನ ತಾಯಿಗೆ, ನನಗೆ ಕಣ್ಣೀರಿನೊಂದಿಗೆ ವಿದಾಯ ಹೇಳಬೇಡ, ದೇಶಕ್ಕಾಗಿ, ಒಂದು ಉದಾತ್ತ ತತ್ವಕ್ಕಾಗಿ ಭಗತ್ ಸಿಂಗ್ ಪ್ರಾಣ ಕೊಟ್ಟ ಹೆಮ್ಮೆಯೊಂದಿಗೆ ಬೀಳ್ಕೊಡಬೇಕು ಎಂದು ವಿನಂತಿಸುತ್ತಾನೆ. ಮಗ ಮತ್ತು ಆತನ ಸಂಗಾತಿಗಳ ಮೇಲಿನ ಪ್ರೀತಿಯಿಂದ ತಂದೆಯು, ತನಗೆ ಬ್ರಿಟಿಷರಲ್ಲಿ ವಿಷಾದ ವ್ಯಕ್ತಪಡಿಸಿ ಪತ್ರ ಬರೆಯಲು ಸೂಚಿಸಿದಾಗಲೂ, ಖಡಾಖಂಡಿತವಾಗಿ ನಿರಾಕರಿಸಿ, ತಂದೆಗೆ ಕ್ರಾಂತಿಕಾರಿ ಹೋರಾಟದಲ್ಲಿ ಈ ರೀತಿಯ ತ್ಯಾಗದ ಮಹತ್ವದ ಬಗೆಗೆ ವಿವರಿಸಿ ಪತ್ರ ಬರೆಯುತ್ತಾನೆ.

ತಮ್ಮ ಕಡೆಯ ಭೇಟಿಯಲ್ಲಿಯೂ ನೇಣಿಗೇರಿಸುವ ಸಂದರ್ಭದ ಎರಡು ಗಂಟೆ ಮುಂಚೆ, ಭಗತ್ ಸಿಂಗ್ ತನ್ನ ಪರ ವಕೀಲರಾದ ಪ್ರಾಣನಾಥ್ ಮೆಹತಾ ಅವರನ್ನು ಕೇಳಿದ್ದು, "'ಎ ರೆವಲ್ಯೂಷನರಿ ಲೆನಿನ್' ಪುಸ್ತಕವನ್ನು ತಂದಿರಾ?" ಎಂದು. ರಾಷ್ಟ್ರಕ್ಕೆ ನೀಡ ಬಯಸುವ ಕೊನೆಯ ಸಂದೇಶ ಏನು ಆ ವಕೀಲರು ಕೇಳಿದಾಗ, ಹೇಳಿದ್ದು, 'ಇನ್‌ಕ್ವಿಲಾಬ್ ಜಿಂದಾಬಾದ್','ಸಾಮ್ರಾಜ್ಯವಾದ ಮುರ್ದಾಬಾದ್', ಈ ಘೋಷಣೆಗಳನ್ನು ಜನರಿಗೆ ತಿಳಿಸಿ ಎಂದು. ತಮ್ಮ ಕಡೆಯ ಆಸೆ...ಏನೆಂದು ಕೇಳಿದಾಗ ಹೇಳಿದ್ದು, ಈ ದೇಶದಲ್ಲಿ ಮತ್ತೆ ಹುಟ್ಟಬೇಕು, ಹುಟ್ಟಿದರೆ ಮತ್ತೊಮ್ಮೆ ದೇಶಸೇವೆ ಮಾಡುವ ಅವಕಾಶ ಸಿಗುತ್ತದೆ." ಎಂದು. ಜೈಲಿನ ಅಧಿಕಾರಗಳನ್ನು ಕೊನೆ ಕ್ಷಣಗಳಲ್ಲಿ ಕೇಳಿದ್ದು, 'ಕ್ರಾಂತಿಕಾರಿ ಲೆನಿನ್' ಕುರಿತ ಆ ಪುಸ್ತಕದ ಒಂದು ಅಧ್ಯಾಯವನ್ನಾದರೂ ಓದಲು ಅವಕಾಶ ಕೊಡುವಿರಾ? ಎಂದು. ಅಧಿಕಾರಿಗಳು ಅವಕಾಶ ಕೊಡಲಿಲ್ಲ. ನೇಣುಗಂಬದ ಕಡೆ ನಡೆ ಎಂದು ಸೂಚಿಸಿದರು.

ಭಗತ್ ಸಿಂಗ್ ಮತ್ತು ಸಂಗಾತಿಗಳು ಕಟ್ಟಲು ಶ್ರಮಿಸಿದ 'ಎಚ್.ಎಸ್.ಆರ್.ಎ.' ಎಂಬ ಕ್ರಾಂತಿಕಾರಿ ಸಂಘಟನೆಯ ಶಿವವರ್ಮ, ಅಜಯ್ ಘೋಷ್‌ರಂತಹ ಹಲವಾರು ಮುಖಂಡರು, ಕಾರ್ಯಕರ್ತರು ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಸೇರುತ್ತಾರೆ. ಶಿವವರ್ಮ ಅವರು ಸಿ.ಪಿ.ಐ. ಹಾಗೂ ವಿಭಜನೆಯ ನಂತರ ಸಿ.ಪಿ.ಐ.(ಎಂ)ನ ಉತ್ತರ ಪ್ರದೇಶದ ನಾಯಕರಾಗಿದ್ದರು. ಅಜಯ್ ಘೋಷ್ ಅವರಂತಹ ನಾಯಕರು ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳೂ ಆಗಿ ಭಾರತೀಯ ಸಮಾಜದಲ್ಲಿ ಬದಲಾಣೆಗಾಗಿ ದುಡಿಯುತ್ತಾರೆ.

'ನೇಣುಹಗ್ಗಕ್ಕೆ ಮುತ್ತಿಟ್ಟ' ಕ್ರಾಂತಿಕಾರಿಗಳು. ನಗುನಗುತ್ತಾ ನೇಣುಗಂಬವನ್ನು ಏರಿದ ಅಮರ ವೀರರು. 'ಕ್ರಾಂತಿ ಎಂದರೆ ಬಾಂಬು ಬಂದೂಕುಗಳ ಆರಾಧನೆಯಲ್ಲ' ಎಂಬ ಬಗೆಗೆ ಭಗತ್ ಸಿಂಗ್ ಮತ್ತು ಸಂಗಾತಿಗಳಿಗೆ ಸ್ಪಷ್ಟತೆ ಇತ್ತು. 'ರಕ್ತ ಹರಿಸುವ ಮೂಲಕ ಈ ದೇಶ ಸ್ವಾತಂತ್ರ್ಯವನ್ನು ಗಳಿಸಬಾರದು.; ಎಂಬುದು ಮಹಾತ್ಮ ಗಾಂಧಿಯ ಧೋರಣೆಯಾಗಿತ್ತು. ಸರಕಾರದ ಪರವಾಗಿ ಕ್ರಾಂತಿಕಾರಿ ಯುವಕರ ಮನಸ್ಸನ್ನು ಗೆಲ್ಲುವಲ್ಲಿ ಸುವರ್ಣಾವಕಾಶವನ್ನೇ ಕಳೆದುಕೊಂಡೆ ಎಂಬ ಭಾವನೆಯೇ ನನ್ನಲ್ಲಿದೆ ಎಂದಿದ್ದಾರೆ ಮಹಾತ್ಮ ಗಾಂಧಿ. ಭಗತ್ ಸಿಂಗ್ ಮತ್ತು ಸಂಗಾತಿಗಳ ಮನ ಪರಿವರ್ತನೆಗೆ ಹಾಗೂ ಅವರು ತಮ್ಮ ಹಿಂಸಾ ಮಾರ್ಗದ ಬಗೆಗೆ ಪಶ್ಚಾತ್ತಾಪ ವ್ಯಕ್ತಪಡಿಸುವಂತೆ ಮಾಡಿ, ಶಿಕ್ಷೆಯನ್ನು ಕಡಿಮೆ ಮಾಡಿಸುವ ಉದ್ದೇಶ ಗಾಂಧೀಜಿಯವರಿಗೆ ಇತ್ತೆಂದು ಕಂಡು ಬರುತ್ತದೆ. ಬ್ರಿಟಿಷರು ಭಗತ್ ಸಿಂಗ್ ಮತ್ತು ಕ್ರಾಂತಿಕಾರಿಗಳನ್ನು ಅಷ್ಟು ಬೇಗನೇ ಗಲ್ಲಿಗೇರಿಸಲಾರರು ಎಂದು ಭಾವಿಸಿದ್ದಂತೆ ಕಾಣುತ್ತದೆ. ಆದರೆ ಭಗತ್ ಸಿಂಗ್ ಮತ್ತು ಕ್ರಾಂತಿಕಾರಿಗಳಿಗೆ ಪಶ್ಚಾತ್ತಾಪದ ಭಾವನೆ ಇರಲಿಲ್ಲ. ಸ್ವಾತಂತ್ರ್ಯ ಎಂದರೆ ಏನು ಹಾಗೂ ಕ್ರಾಂತಿ ಎಂದರೆ ಏನೆಂಬ ಬಗೆಗೆ ಅವರಿಗೆ ಸ್ಪಷ್ಟತೆ ಇತ್ತು.

**ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆಯೇ?**

**ತಾಯಿಗೆ ಬರೆದ ಪತ್ರದಲ್ಲಿ ಭಗತ್**

"ಮಾ, ನನ್ನ ದೇಶ ಒಂದು ದಿನ ಸ್ವಾತಂತ್ರ್ಯ ಪಡೆದೇ, ಪಡೆಯುತ್ತದೆ ಎಂಬ ಬಗೆಗೆ ನನಗೆ ಅನುಮಾನವಿಲ್ಲ. ಆದರೆ ನನಗೆ ಭಯ ಇರುವುದು, ಬಿಳಿ ಸಾಹೇಬರು ಖಾಲಿ ಮಾಡುವ ಕುರ್ಚಿಗಳಲ್ಲಿ ಕಂದು ಸಾಹೇಬರು ಕುಳಿತುಕೊಳುತ್ತಾರೆಂಬುದು."

"ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆ ಎಂದಾದರೆ ಜನರ ಸ್ಥಿತಿ ಹೀಗೆಯೇ ಉಳಿಯುತ್ತದೆ. ಪುರಾತನ ವ್ಯವಸ್ಥೆಯನ್ನು ನಾಶ ಮಾಡದೇ ಹೊಸ ಬದಲಾವಣೆ ತರುವುದು ಸಾಧ್ಯವಿಲ್ಲ.".

ರೈತನ ದೃಷ್ಟಿ. ಕವನದಲ್ಲಿ ಕುವೆಂಪು ಕೇಳುತ್ತಾರೆ

ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
ಕರಿಯರದೊ ಬಿಳಿಯರದೊ ಯಾರದಾದರೆ ಏನು
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ
ವಿಜಯನಗರವೊ ಮೊಗಲರಾಳ್ವಿಕೆಯೊ ಇಂಗ್ಲಿಷರೊ
ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ
ಕತ್ತಿ ಪರದೇಶಿಯಾದರೆ ಮಾತ್ರ ನೋವೆ ?
ನಮ್ಮವರೆ ಹದಹಾಕಿ ತಿವಿದರದು ಹೂವೆ ?
ಸಂತೃಪ್ತಿ ಲಭಿಸಿತ್ತು.

ಈ ಸಂಧರ್ಭದಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ' ಪ್ರಕಾಶನದ ಸಾವರ್ಕರ್ ಅವರ ಜೀವನ ಚರಿತ್ರೆಯಲ್ಲಿ ದಾಖಲಾಗಿರುವ ಈ ಮಾತುಗಳನ್ನು ನಾವು ಗಮನಿಸಬಹುದು. "ಹಿಂದೂಗಳಿಗೆ ಹಿಂದೂಗಳು ಎಂದು ಹೆಸರನ್ನು ನೀಡಿದ ಸಿಂಧು ನದಿ, ಹಿಂದೂಗಳಿಗೆ ವೇದಗಳನಿತ್ತ ಆರ್ಯಾವರ್ತ ಪ್ರದೇಶ ಭಾರತದ ಹೊರಗೆ ಉಳಿದು ಪಾಕಿಸ್ತಾನ ಎಂಬ ಬೇರೆಯೇ ರಾಷ್ಟ್ರ ನಿರ್ಮಾಣವಾದದ್ದು, ಅವರಿಗೆ ಸಹ್ಯವಾಗಿರಲಿಲ್ಲ. ಈ ಕೊರಗಿನ ಹೊರತು ಅವರಿಗೆ ಜೀವನದಲ್ಲಿ ಉಳಿದೆಲ್ಲ ವಿಷಯಗಳಲ್ಲಿ ಸಂತೃಪ್ತಿ ಲಭಿಸಿತ್ತು. ತಮ್ಮ ಜೀವನದ ಕೊನೆಗಾಲದಲ್ಲಿ ವಿನಾಯಕ ಸಾರ್ವಕರ್ ಅನ್ನವನ್ನು ವರ್ಜಿಸಿದರು. 1966 ರ ಫೆಬ್ರುವರಿ 26, 1966 ರ ಂದು ಅಸು ನೀಗಿದರು." ಎನ್ನುತ್ತದೆ 'ರಾಷ್ಟ್ರೋತ್ಥಾನ ಸಾಹಿತ್ಯ'ದ ಸಾವರ್ಕರ್ ಕುರಿತ ಜೀವನ ಚರಿತ್ರೆ.

ಇದೇ ಸಂದರ್ಭದಲ್ಲಿ ಸಾವರ್ಕರ್ ಅವರು ಕ್ಷಮೆ ಕೋರಿ ಬರೆದ ಪತ್ರಗಳನ್ನು ನೆನಪಿಸಿಕೊಳ್ಳಬಹುದು.

**ಬ್ರಿಟೀಷರಿಗೆ ಶರಣಾಗತಿ ಸಾವರ್ಕರ್ ಪತ್ರ**

{" ನಾನು 1911 ರಲ್ಲಿ ಸಲ್ಲಿಸಿದ್ದ ಕ್ಷಮಾದಾನ ಅರ್ಜಿಯನ್ನು ಸಂಪೂರ್ಣವಾಗಿ ಓದುವ ಕರುಣೆ ತೋರವಂತೆ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ..ಭಾರತದ ರಾಜಕಾರಣದ ಇತ್ತೀಚಿನ ಬೆಳವಣಿಗೆಗಳು ಮತ್ತು ಸರಕಾರದ ಸಹಕಾರಿ ಧೋರಣೆಯ ಪರಿಣಾಮ ಮತ್ತೊಮ್ಮೆ ಸಾಂವಿಧಾನಿಕ ಮಾರ್ಗವನ್ನು ಸುಗಮಗೊಳಿಸಿದೆ. ಹಾಗಾಗಿ 1906–07 ಸಂದರ್ಭದಲ್ಲಿದ್ದ ಉನ್ಮಾದದ ಪ್ರಕ್ಷುಬ್ದ ಸನ್ನಿವೇಶದಲ್ಲಿ ಶಾಂತಿ ಮತ್ತು ಅಭಿವೃದ್ಧಿಯಿಂದ ವಿಮುಖರಾಗಿ ನಾವುಗಳು ಅನುಸರಿಸಿದ ಕಠಿಣ ಮಾರ್ಗಗಳನ್ನು ಇಂದು ಭಾರತದ ಏಳಿಕೆಯನ್ನು ಬಯಸುವ, ಮಾನವೀಯ ಹೃದಯ ಹೊಂದಿರುವ ಯಾವುದೇ ವ್ಯಕ್ತಿಯೂ ಅನುಸರಿಸುವುದಿಲ್ಲ. ಆದ್ದರಿಂದ ಸರಕಾರ ಈ ಔದಾರ್ಯದ ನೆಲೆಯಲ್ಲಿ ಕರುಣೆ ತೋರಿ ನನಗೆ ಬಿಡುಗಡೆಯ ಭಾಗ್ಯವನ್ನು ದಯಪಾಲಿಸಿದಲ್ಲಿ ನಾವು ಸಾಂವಿಧಾನಿಕ ಮುನ್ನಡೆಯ ಪ್ರಖಂಡ ಸಮರ್ಥಕನಾಗಿ ಮುಂದುವರಿಯುತ್ತೇನೆ. ಈ ಮುನ್ನಡೆಯ ಮುಂಚೂಣಿಯಲ್ಲಿರುವ ಬ್ರಿಟೀಷ್ ಸರಕಾರಕ್ಕೆ ನಿಷ್ಠೆಯಿಂದ ಬದ್ಧನಾಗಿರುತ್ತೇನೆ.

(ಸಾವರ್ಕರ್:ಮೂಲ ಆರ್.ಸಿ. ಮಜುಂದಾರ್, ಅಂಡಮಾನ್ ದಂಡನೀಯ ನೆಲೆಗಳು, ಪ್ರಕಟಣಾ ವಿಭಾಗ, 1975.}ಉಲ್ಲೇಖ – ಪುಸ್ತಕ : 'ಭಗತ್ ಸಿಂಗ್, ವೀರ್ ಸಾವರ್ಕರ್' – ಲಡಾಯಿ ಪ್ರಕಾಶನ..}

'ರಕ್ತಪಾತ ಮಾಡಬೇಕಾಗಿ ಬಂದದ್ದಕ್ಕಾಗಿ ನಮಗೆ ವಿಷಾದವಿದೆ. ಆದರೆ..' ಬ್ರಿಟಿಷ್ ಪೋಲಿಸ್ ಅಧಿಕಾರಿ ಸಾಂಡರ್ಸ್‌ನನ್ನು ಕೊಂದ ನಂತರ ಅಂಟಿಸಿದ ಕರಪತ್ರದಲ್ಲಿ ಭಗತ್ ಸಿಂಗ್ ಸ್ಪಷ್ಟವಾಗಿ ವಿವರಿಸಿದ್ದಾರೆ. "ಮನುಷ್ಯನ ರಕ್ತಪಾತ ಮಾಡಬೇಕಾಗಿ ಬಂದದ್ದಕ್ಕಾಗಿ ನಮಗೆ ವಿಷಾದವಿದೆ. ಆದರೆ ಎಲ್ಲರಿಗೂ ಸ್ವಾತಂತ್ರ್ಯವನ್ನು ತರಬಲ್ಲ, ಮನುಷ್ಯನಿಂದ ಮನುಷ್ಯನ ಶೋಷಣೆ ಅಸಾಧ್ಯ ಎಂದು ತೋರಿಸಬಲ್ಲ ದೊಡ್ಡ ಕ್ರಾಂತಿಯ ಬಲಿಪೀಠದಲ್ಲಿ ವ್ಯಕ್ತಿಗಳ ತ್ಯಾಗವು ಅನಿವಾರ್ಯ." 'ಕ್ರಾಂತಿ' ಎಂದರೆ ರಕ್ತಪಾತ ಅಲ್ಲ, ಪುಸ್ತಕದ ಮುನ್ನುಡಿಯೊಂದರಲ್ಲಿ ಭಗತ್ ಸ್ಪಷ್ಟವಾಗಿ ಹೇಳಿದ್ದಾರೆ.

1. ಕ್ರಾಂತಿ ಎಂದರೆ ಕೇವಲ ಪ್ರಸ್ತುತ ಆಡಳಿತ ವ್ಯವಸ್ಥೆಯನ್ನು ಪಲ್ಲಟಗೊಳಿಸುವುದು ಎಂದಾಗಲೀ, ರಕ್ತಪಾತದ ಸಂಘರ್ಷ ಎಂದಾಗಲಿ ಅರ್ಥವಲ್ಲ. ಕ್ರಾಂತಿ ಎಂದರೆ ಸಮಾಜವನ್ನು ನೂತನ ನೆಲೆಯಲ್ಲಿ, ಹೆಚ್ಚು ಸಮರ್ಥವಾದ ನೆಲೆಯಲ್ಲಿ ಪ್ರಸಕ್ತ ಆಡಳಿತ ವ್ಯವಸ್ಥೆಯನ್ನು ಮತ್ತು ಪ್ರಭುತ್ವವನ್ನು ಕೊನೆಗಾಣಿಸಿ ವ್ಯವಸ್ಥಿತವಾಗಿ ನವ ಸಮಾಜವನ್ನು ನಿರ್ಮಿಸುವುದೇ ಆಗಿದೆ.
2. "ಭವಿಷ್ಯದ ಸಮಾಜದಲ್ಲಿ ಅಂದರೆ ನಾವು ನಿರ್ಮಿಸಲು ಬಯಸುವ ಕಮ್ಯೂನಿಸ್ಟ್ ಸಮಾಜದಲ್ಲಿ, ನಾವು ಔದಾರ್ಯ ದಾನಶೀಲ ಸಂಸ್ಥೆಗಳನ್ನು ನಿರ್ಮಿಸಲು ಬಯಸುವುದಲ್ಲ. ಆದರೆ ಆ ಸಮಾಜದಲ್ಲಿ ಬಡಜನತೆಯಾಗಲಿ, ಅವಶ್ಯಕತೆಗೆ ಹಲುಬುವವರಾಗಲಿ, ಇರುವುದಿಲ್ಲ. ಭೀಕ್ಷೆ ಬೇಡುವದಾಗಲಿ, ಭಿಕ್ಷೆ ನೀಡುವುದಾಗಲೀ, ಇರುವುದಿಲ್ಲ."

**ಯುವ ರಾಜಕೀಯ ಕಾರ್ಯಕರ್ತರಿಗೆ ಭಗತ್ ಸಿಂಗ್ ಪತ್ರ**

"ನಾನು ಭಯೋತ್ಪಾದಕನಲ್ಲ. ನಾನು ಭಯೋತ್ಪಾದಕನೂ ಆಗಿರಲಿಲ್ಲ. ಹಿಂದುಸ್ಥಾನ ಸೋಷಿಯಲಿಸ್ಟ್ ರಿಪಬ್ಲಿಕ್ ಸಂಘಟನೆಯ ಇತಿಹಾಸವನ್ನು ನೋಡಿದರೆ ಇದು ತಿಳಿಯುತ್ತದೆ. ನಮ್ಮ ಎಲ್ಲ ಕಾರ್ಯಚಟುವಟಿಕೆಗಳ ಧ್ಯೇಯ ಒಂದೇ ಆಗಿತ್ತು. ಅದು ಬೃಹತ್ ಆಂದೋಲನದಲ್ಲಿ ಅದರ ಸೇನಾ ವಿಭಾಗವಾಗಿ ಕಾರ್ಯ ನಿರ್ವಹಿಸುವುದಾಗಿತ್ತು. ಯಾರಾದರೂ ಅಪಾರ್ಥ ಮಾಡಿಕೊಂಡಿದ್ದರೆ ಅವರು ತಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಳ್ಳಲಿ.

ಬಾಂಬುಗಳು, ಪಿಸ್ತೂಲುಗಳು ನಿಷ್ಪ್ರಯೋಜಕ ಎಂದು ನಾನು ಹೇಳುವುದಿಲ್ಲ. ಅದು ಅಗತ್ಯ ಎಂದೇ ಹೇಳುತ್ತೇನೆ. ಆದರೆ ಕೆವಲ ಬಾಂಬ್ ಎಸೆಯುವ ಚಟುವಟಿಕೆ ನಿಷ್ಪ್ರಯೋಜಕವಷ್ಟೇ ಅಲ್ಲ, ಅಪಾಯಕಾರಿಯೂ ಹೌದು. ಯಾವುದೇ ತುರ್ತು ಪರಿಸ್ಥಿತಿ ಎದುರಿಸಲು ಪಕ್ಷದ ಸೇನಾ ವಿಭಾಗ ಸಜ್ಜಾಗಿರುಬೇಕು. ಅದು ಪಕ್ಷ ರಾಜಕೀಯ ಚಟುವಟಿಕೆಗಳನ್ನು ಬೆಂಬಲಿಸಬೇಕು. ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು.

ನಮ್ಮ ಕಾರ್ಯ ಯೋಜನೆ ಪರಿಪೂರ್ಣವಾಗಲು ಕನಿಷ್ಟ ಇಪ್ಪತ್ತು ವರ್ಷಗಳಾದರೂ ಬೇಕು. ಒಂದು ವರ್ಷದ ಒಳಗಾಗಿ ಸ್ವರಾಜ್ ಸಾಕಾರಗೊಳಿಸುವ ಗಾಂಧೀಜಿಯವರ ಕನಸು ನನಸಾದರೂ ನಂತರ ಹತ್ತು ವರ್ಷಗಳಲ್ಲಿ ಕ್ರಾಂತಿಯ ಕನಸು ನನಸಾಗುತ್ತದೆ ಎಂದು ಯುವ ಪೀಳಿಗೆಯ ಭ್ರಮೆಯಿಂದ ಹೊರಬನ್ನಿ. ಇದಕ್ಕೆ ಭಾವನಾತ್ಮಕತೆ ಅಥವಾ ಸಾವು ಅವಶ್ಯಕತೆ ಇಲ್ಲ. ಆದರೆ ನಿರಂತರ ಸಂಘರ್ಷ ಮತ್ತು ತ್ಯಾಗ ಬಲಿದಾನ ಅತ್ಯಗತ್ಯ. ಕ್ರಾಂತಿಗೆ ದಿನ ನಿಗದಿಪಡಿಸಲಾಗದು.

"ಕ್ರಾಂತಿಯನ್ನು ಯಾವುದೇ ಒಂದು ನಿಗದಿತ ದಿನದಂದು ಸಾಕಾರಗೊಳಿಸಲಾಗುವುದಿಲ್ಲ. ಕ್ರಾಂತಿ ವಿಶೇಷ ಪರಿಸರದಲ್ಲಿ ವಿಶೇಷ ಆರ್ಥಿಕ ಮತ್ತು ಸಾಮಾಜಿಕ ಪರಿಸರದಲ್ಲಿ ಸಾಧ್ಯವಾಗುತ್ತದೆ. ಒಂದು ಸಂಘಟಿತ ಪಕ್ಷದ ಮೂಲ ಕರ್ತವ್ಯ ಎಂದರೆ ಇಂತಹ ಅವಕಾಶಗಳನ್ನು ಬಳಸಿಕೊಳ್ಳುವುದು. ಮತ್ತು ಜನ ಸಮೂಹಗಳನ್ನು ಸಿದ್ಧಪಡಿಸಿ, ಕಾರ್ಯಪಡೆಗಳನ್ನು ಸಂಘಟಿಸುವುದು. ಏಕೆಂದರೆ ಕ್ರಾಂತಿ ಒಂದು ಕಷ್ಟಕರ ಕೆಲಸ. ಕ್ರಾಂತಿ ಕ್ರಾಂತಿಕಾರಿ ಯುವಜನರ ತ್ಯಾಗ– ಬಲಿದಾನಗಳನ್ನು ಕ್ರಾಂತಿ ಬಯಸುತ್ತದೆ.

*ಮುಂದುವರಿಯುತ್ತದೆ...*

# ಜಿ–20 ದಿಲ್ಲಿ ಘೋಷಣೆ: ಆಳಗೊಳ್ಳುತ್ತಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ದಿವ್ಯಮೌನ




**ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸನ್ನಿವೇಶದಲ್ಲಿ ನಡೆದ ಜಿ–20 ಶೃಂಗಸಭೆಯು ಅದನ್ನು ನಿವಾರಿಸುವ ವಿಷಯದಲ್ಲಿ ಏನಾದರೂ ಉಪಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬ ನಿರೀಕ್ಷೆಯಿತ್ತು. ಈ ಹಿಂದೆ ಯುಎಸ್ ವಸತಿ ಗುಳ್ಳೆ ಒಡೆದ ನಂತರ ನಡೆದ ಜಿ –20 ಸಭೆ ಇದನ್ನು ಮಾಡಿತ್ತು. ಅಲ್ಲದೆ ಭಾರತವು ತನ್ನ ಜಿ–20 ನಾಯಕತ್ವವು ಭೌಗೋಳಿಕ ದಕ್ಷಿಣದ ದೇಶಗಳಿಗೆ ಅನುಕೂಲಕರ ಬೆಳವಣಿಗೆ ಎಂದು ಬಿಂಬಿಸುತ್ತಿದ್ದುದರಿಂದಲೂ ಈ ನಿರೀಕ್ಷೆ ಉಂಟಾಗಿತ್ತು. ಆದರೆ ಅಂಥದ್ದೇನೂ ಆಗಲಿಲ್ಲ. ಈ ಶೃಂಗಸಭೆಯಿಂದ ಮೂಡಿ ಬಂದ ದಿಲ್ಲಿ ಘೋಷಣೆಯು ಪ್ರಸಕ್ತ ಜ್ವಲಂತ ಆರ್ಥಿಕ ಸಮಸ್ಯೆಗಳ ಬಗ್ಗೆ ಏನೇನೂ ಹೇಳಿಲ್ಲ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಶೃಂಗಸಭೆಯಲ್ಲಿ ಅತಿಥೇಯ ಸರ್ಕಾರದ ಅತ್ಯಾಸಕ್ತಿಯ ವಿಷಯವೆಂದರೆ, ಅದರಿಂದ ಗರಿಷ್ಠ ಪ್ರಚಾರವನ್ನು ಪಡೆಯುವುದಾಗಿತ್ತು, ಅದರಲ್ಲಿ ಯಶಸ್ವಿಯಾಗಿದೆ. ಅವರಿಗೆ ಅಷ್ಟು ಸಾಕು!**
**ಆದಾಗ್ಯೂ ಒಂದು ಪ್ರಶ್ನೆ ಏಳುತ್ತದೆ: ಮುಂದುವರಿದ ಬಂಡವಾಳಶಾಹಿ ದೇಶದ ಸರ್ಕಾರಗಳು ಪ್ರಸ್ತುತ ಆರ್ಥಿಕ ಬಿಕ್ಕಟ್ಟನ್ನು ಇಷ್ಟು ನಿರಾಳವಾಗಿ ಏಕೆ ತೆಗೆದುಕೊಳ್ಳುತ್ತವೆ? ಇದು ಈಗಿನ ಅಪಾಯಕಾರಿ ಸನ್ನಿವೇಶದತ್ತವೂ ಗಮನ ಸೆಳೆಯುತ್ತದೆ.**

**ಪ್ರೊ. ಪ್ರಭಾತ್ ಪಟ್ನಾಯಕ್**

ವಿಶ್ವ ಅರ್ಥವ್ಯವಸ್ಥೆಯ ತೀವ್ರ ಆರ್ಥಿಕ ಬಿಕ್ಕಟ್ಟಿನ ಮಧ್ಯೆ ದೆಹಲಿಯಲ್ಲಿ ಜಿ–20 ಸಭೆ ನಡೆದಿದೆ. ಮುಂದುವರಿದ ಬಂಡವಾಳಶಾಹಿ ಅರ್ಥವ್ಯವಸ್ಥೆಗಳು 2022 ರಲ್ಲಿ ಶೇಕಡಾ 2.7 ರಿಂದ 2023 ರಲ್ಲಿ ಶೇಕಡಾ 1.3 ಕ್ಕೆ ಬೆಳವಣಿಗೆಯ ಕುಸಿತವನ್ನು ಕಾಣಲಿವೆ ಎಂದು ಐಎಂಫ್ ನಿರೀಕ್ಷಿಸುತ್ತದೆ; ಐಎಂಎಫ್ ನ ಪರ್ಯಾಯ ಅಂದಾಜಿನ ಪ್ರಕಾರ 2023 ರಲ್ಲಿ ಅವರ ಬೆಳವಣಿಗೆಯು ಶೇಕಡಾ 1 ಕ್ಕಿಂತ ಕಡಿಮೆಯಾಗಬಹುದು. ಅವರ ಶ್ರಮ ಉತ್ಪಾದಕತೆಯ ಬೆಳವಣಿಗೆಯ ದರವು ಈ ಅಂಕಿಅಂಶವನ್ನು ಮೀರುವ ಸಾಧ್ಯತೆಯಿರುವುದರಿಂದ, ಮುಂದುವರೆದ ಬಂಡವಾಳಶಾಹಿ ದೇಶಗಳ ನಿರುದ್ಯೋಗದಲ್ಲಿ ಗಣನೀಯ ಹೆಚ್ಚಳವಾಗಲಿದೆ ಎಂದು ಇದರ ಅರ್ಥ. ಇದು ಯುರೋಪಿಯನ್ ಒಕ್ಕೂಟದಲ್ಲಿ ವಿಶೇಷವಾಗಿ ಕೆಲವು ಸಮಯದಿಂದ ಸಂಭವಿಸುತ್ತಿರುವ ಪೂರ್ವ ಯುರೋಪ್‌ನಿಂದ ಅಪಾರ ಪ್ರಮಾಣದ ವಲಸೆ ಮತ್ತು ರಷ್ಯಾದ ವಿರುದ್ಧ ಉಕೇನಿನ ನಾಟೋ ಪ್ರೇರಿತ ಪರೋಕ್ಷ ಯುದ್ಧದಿಂದಾಗಿ ಉಕ್ರೇನ್‌ನಿಂದ ನಿರಾಶ್ರಿತರ ವಲಸೆಯಿಂದ ಇನ್ನಷ್ಟು ಉಲ್ಬಣಗೊಳ್ಳಬಹುದು.

ಯೂರೋಪ್‌ನಲ್ಲಿ ಫ್ಯಾಸಿಸಂ ಕಡೆಗೆ ಪ್ರವೃತ್ತಿಯು ಗಣನೀಯವಾಗಿ ವೇಗವನ್ನು ಪಡೆದುಕೊಂಡಿದೆ, ಇದು ನಿರುದ್ಯೋಗದಲ್ಲಿನ ಈ ಬೆಳವಣಿಗೆಯಿಂದ ಮತ್ತಷ್ಟು ಬೃಹತ್ ಉತ್ತೇಜನವನ್ನು ಪಡೆಯುತ್ತದೆ, ಇದು ವಲಸಿಗರ ಕಡೆಗೆ ವೈರತ್ವವನ್ನು ಮತ್ತಷ್ಟು ಉತ್ತೇಜಿಸುತ್ತದೆ. ಜರ್ಮನಿಯಲ್ಲಿ ನವ–ನಾಜಿ ಎಎಫ್‌ಡಿ ಈಗಾಗಲೇ 20 ಪ್ರತಿಶತದಷ್ಟು ಮತಗಳನ್ನು ಪಡೆಯುತ್ತಿದೆ ಮತ್ತು ಇದುವರೆಗೆ ಅದನ್ನು ದೂರವಿಟ್ಟಿರುವ ಪಕ್ಷಗಳೊಂದಿಗೆ ಕನಿಷ್ಠ ಪ್ರಾಂತೀಯ ಸರ್ಕಾರಗಳಲ್ಲಿ ಅಧಿಕಾರಕ್ಕೆ ಬರಲು ವ್ಯವಹಾರಗಳನ್ನು ನಡೆಸಲು ಸನ್ನದ್ಧವಾಗಿದೆ. ಫ್ರಾನ್ಸ್‌ನಲ್ಲಿನ ಫ್ಯಾಸಿಸಂನ ಧ್ವಜಧಾರಕರಾದ ಮರೀನೆ ಲೆ ಪೆನ್ ಅವರು ಎಮ್ಯಾನುಯೆಲ್ ಮ್ಯಾಕ್ರನ್‌ಗಿಂತ ಹೆಚ್ಚಿನ ಅನುಮೋದನೆಯನ್ನು ಹೊಂದಿದ್ದಾರೆಂದು ವರದಿಯಾಗಿದೆ. ಇಟಲಿ ಈಗಾಗಲೇ ಒಂದು ಫ್ಯಾಸಿಸ್ಟ್ ಸರ್ಕಾರವನ್ನು ಚುನಾಯಿಸಿದೆ ಮತ್ತು ಸಾಮಾನ್ಯವಾಗಿ ಹಾಗೆ ಮಾಡಬಹುದೆಂದು ನಿರೀಕ್ಷಿಸಲಾಗಿದ್ದ ಸ್ಪೇನ್ ತನ್ನ ಇತ್ತೀಚಿನ ಚುನಾವಣೆಗಳಲ್ಲಿ ತ್ರಿಶಂಕು ಫಲಿತಾಂಶವನ್ನು ಪಟಿಯುವ ಮೂಲಕ ತಾತ್ಕಾಲಿಕ ವಿರಾಮವನ್ನು ಪಡೆದುಕೊಂಡಿದೆ. ಈ ಎಲ್ಲಾ ಅಂಶಗಳು ಮತ್ತಷ್ಟು ಉತ್ತೇಜನವನ್ನು ಪಡೆಯುತ್ತವೆ.

ಮುಂದುವರಿದ ದೇಶಗಳ ಅರ್ಥವ್ಯವಸ್ಥೆಗಳು ಅಭೂತಪೂರ್ವ ಬಿಕ್ಕಟ್ಟನ್ನು ಎದುರಿಸುತ್ತಿರುವುದರಿಂದ, ಇದರಿಂದಾಗಿ ಭಾರತದಂತಹ ಭೌಗೋಳಿಕ ದಕ್ಷಿಣದ ದೇಶಗಳೂ ಜಿಡಿಪಿ ಬೆಳವಣಿಗೆಯಲ್ಲಿನ ನಿಧಾನಗತಿಯಲ್ಲಿಯೂ, ಮತ್ತು ನಿರುದ್ಯೋಗದ ಹೆಚ್ಚಳ, ಸಾಲದ ಬಿಕ್ಕಟ್ಟಿನ ಉಲ್ಬಣ ಮತ್ತು ಫ್ಯಾಸಿಸಂನತ್ತ ಪ್ರವೃತ್ತಿ ಬಲಗೊಳ್ಳುವಲ್ಲಿಯೂ ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಫ್ಯಾಸಿಸಂ ಎಲ್ಲಾ ಕಲ್ಯಾಣ ವೆಚ್ಚಗಳನ್ನು ತೊಡೆದುಹಾಕಲು ಬದ್ಧವಾಗಿರುವ ಅಧ್ಯಕ್ಷರನ್ನು ಆಯ್ಕೆ ಮಾಡಲು ಅರ್ಜೆಂಟೀನಾ ಸಿದ್ಧವಾಗುತ್ತಿದೆ; ಮತ್ತು ಈ ಆತಂಕಕಾರಿ ಪ್ರವೃತ್ತಿಯು ಈಗಾಗಲೇ ಹಾಗೆ ಮಾಡದ ದೇಶಗಳಿಗೂ ಹರಡಬಹುದು.

ಇಂತಹ ಸನ್ನಿವೇಶದಲ್ಲಿ ನಡೆದ ಜಿ–20 ಶೃಂಗಸಭೆಯು ಆರ್ಥಿಕ ಬಿಕ್ಕಟ್ಟನ್ನು ನಿವಾರಿಸುವ ವಿಷಯದಲ್ಲಿ ಸ್ವಲ್ಪ ಉಪಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ನಿರೀಕ್ಷಿಸಬಹುದಿತ್ತು. ಯುಎಸ್ ವಸತಿ ಗುಳ್ಳೆ ಒಡೆದ ನಂತರ ನಡೆದ ಜಿ –20 ಸಭೆ ಇದನ್ನು ಮಾಡಿತ್ತು. ನಿರ್ದಿಷ್ಟವಾಗಿ ಹೇಳುವುದಾದರೆ, ಭಾರತವು ತನ್ನ ಜಿ–20 ನಾಯಕತ್ವವು ಭೌಗೋಳಿಕ ದಕ್ಷಿಣದ ದೇಶಗಳಿಗೆ ಅನುಕೂಲಕರ ಬೆಳವಣಿಗೆ ಎಂದು ಬಿಂಬಿಸುತ್ತಿದ್ದುದರಿಂದ ಮತ್ತು ಕೆಲವು ಭಾರತೀಯ ಅಧಿಕೃತ ವಕ್ತಾರರು ತೃತೀಯ ಜಗತ್ತಿನ ಸಾಲದ ಪ್ರಶ್ನೆ ಒಂದು ಚರ್ಚೆಯಲ್ಲಿರುವ ವಿಷಯ ಎಂಬ ಸಂಕೇತಗಳನ್ನು ಕೊಡುತ್ತಿದ್ದುದರಿಂದ ಇಂತಹ ನಿರೀಕ್ಷೆ ಸಹಜವಾಗಿತ್ತು.

ಆದರೆ ಅಂಥದ್ದೇನೂ ಆಗಲಿಲ್ಲ. ಜಿ–20 ಭದ್ರತೆಯ ವಿಷಯಗಳಿಗಿಂತ ಆರ್ಥಿಕ ವಿಷಯಗಳ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು ಎಂದು ಚೀನಾ ಮತ್ತು ರಷ್ಯಾದ ಪ್ರತಿನಿಧಿಗಳು ಯಾವಾಗಲೂ ಒತ್ತಿಹೇಳುತ್ತಿದ್ದರೂ ಈ ಶೃಂಗಸಭೆಯಿಂದ ಮೂಡಿ ಬಂದ ದಿಲ್ಲಿ ಘೋಷಣೆಯು ಪ್ರಸಕ್ತ ಜ್ವಲಂತ ಆರ್ಥಿಕ ಸಮಸ್ಯೆಗಳ ಬಗ್ಗೆ ಏನೇನೂ ಹೇಳಿಲ್ಲ. ನಿಜ, ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿದಂತೆ ಇಂಡೋನೇಷ್ಯಾದ ಬಾಲಿಯಲ್ಲಿ ನಡೆದ ಹಿಂದಿನ ಶೃಂಗಸಭೆಯ ಘೋಷಣೆಗೆ ಹೋಲಿಸಿದರೆ ಈ ಘೋಷಣೆಯಲ್ಲಿ ನಿಲುವಿನ ಬದಲಾವಣೆ ನಿಸ್ಸಂದೇಹವಾಗಿಯೂ ಉಂಟಾಗಿದೆ. ರಷ್ಯಾ ಅಲ್ಲಿ ಸ್ಪಷ್ಟ ಟೀಕೆಗೆ ಗುರಿಯಾಗಿದ್ದರೆ, ದಿಲ್ಲಿಯಲ್ಲಿ ಯಾವುದೇ ರೀತಿಯಲ್ಲಿ ರಷ್ಯಾವನ್ನು ದೂರುವುದನ್ನು ಪ್ರಜ್ಞಾಪೂರ್ವಕವಾಗಿ ತಪ್ಪಿಸಲಾಯಿತು. ಆದರೆ ಶಾಂತಿಗಾಗಿ ಅದರ ಕರೆ, ಶ್ಲಾಘನೀಯವಾಗಿದ್ದರೂ, ಅದರ ಪರಿಣಾಮ ಅತ್ಯಲ್ಪ.

**ಶಾಂತಿಯ ಕರೆಯೂ ನಾಟೋವನ್ನು ಬಾಧಿಸದು**

ಶಾಂತಿಗಾಗಿ ಎಲ್ಲಾ ಉಪಕ್ರಮಗಳನ್ನು ನಾಟೋ ದೇಶಗಳು ವಿಫಲಗೊಳಿಸಿವೆ, ಅವರು ರಷ್ಯಾದ ವಿರುದ್ಧದ ಜಗಳದಲ್ಲಿ ಉಕ್ರೇನಿಯನ್ ಜನರನ್ನು ತೋಪಿನ ಗುಂಡುಗಳಾಗಿ ಬಳಸಲು ನಿರ್ಧರಿಸಿದ್ದಾರೆ: ಮಿನ್ಸ್ಕ್ ಒಪ್ಪಂದವನ್ನು ಹಾಳುಗೆಡವಿದ್ದು ಯುಎಸ್ ಮತ್ತು ಬ್ರಿಟನ್; ರಷ್ಯಾದ ಸೇನಾ ಕಾರ್ಯಾಚರಣೆಗಳು ಪ್ರಾರಂಭವಾದ ಕೂಡಲೇ ಶಾಂತಿ ಮಾತುಕತೆಗಳನ್ನು ವಿಫಲಗೊಳಿಸಿದ್ದೂ ಅವೇ ದೇಶಗಳು; ಅವು ಈಗಲೂ ಯುದ್ಧವನ್ನು ಮುಂದುವರೆಸುವಂತೆ ಉಕ್ರೇನ್‌ನನ್ನು ಮುಂದಕ್ಕೆ ತಳ್ಳುವಲ್ಲಿ ನಿರತವಾಗಿವೆ. ಆದ್ದರಿಂದ ಯುದ್ಧವು ನಾಟೋ ಅದನ್ನು ಕೊನೆಗೊಳಿಸಲ ಇಚ್ಛಿಸಿದಾಗ ಮಾತ್ರ ಕೊನೆಗೊಳ್ಳುತ್ತದೆ. ಜಿ–20 ದೆಹಲಿ ಘೋಷಣೆಯಲ್ಲಿ ಅವರಿಗೆ ಅನುಕೂಲಕರವಾಗಿರದ ವಾಕ್ಯಗಳನ್ನು ಸೇರಿಸಲು ಒಪ್ಪಿಕೊಂಡಿದ್ದರೂ ಕೂಡ, ಆ ಘೋಷಣೆ ನಾಟೋದ ಇಚ್ಛೆಯ ಮೇಲೆ ಎಳ್ಳಷ್ಟೂ ಪ್ರಭಾವ ಬೀರುವುದಿಲ್ಲ, ಘೋಷಣೆಯಲ್ಲಿ ಧಾರ್ಮಿಕ ಸಹಿಷ್ಣುತೆ ಮತ್ತು ವೈವಿಧ್ಯತೆಗೆ ಗೌರವವನ್ನು ಶ್ಲಾಘಿಸುವ ಪರಿಚ್ಛೇಧಗಳೇನೋ ಇವೆ. ಇವುಗಳು ಖಂಡಿತವಾಗಿಯೂ ಶ್ಲಾಘನೀಯವಾಗಿದ್ದರೂ, ಅವುಗಳ ಪರಿಣಾಮ ಏನೇನೂ ಇಲ್ಲ. ಈ ಹೇಳಿಕೆಗೆ ಟರ್ಕಿಯ ಎರ್ಡೋಗನ್ ಮತ್ತು ಭಾರತದ ಮೋದಿ ಸಹಿ ಹಾಕಿದ್ದರೂ ಅವರ ದೇಶಗಳು ತಮ್ಮ ಸರ್ಕಾರಗಳ ಸಹಕಾರದೊಂದಿಗೆ ತದ್ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿರುವಾಗಲೂ, ಅವನ್ನು ಟೊಳ್ಳು ನುಡಿಗಟ್ಟುಗಳೆಂದು ಕಾಣಬಹುದಷ್ಟೇ.

ಘೋಷಣೆಯಲ್ಲಿ ಆರ್ಥಿಕ ಪ್ರಶ್ನೆಗಳು ಇಲ್ಲವೆಂದಲ್ಲ; ಆದರೆ ಅವನ್ನು ತುಂಬಾ ಲೋಕಾಭಿರಾಮವಾಗಿ ಉಲ್ಲೇಖಿಸಲಾಗಿದೆ. ಮೂರನೇ ಜಗತ್ತಿನ ಬಡ ದೇಶಗಳಿಗೆ ಸಾಲ




ಪರಿಹಾರದ ಬಗ್ಗೆ ಚರ್ಚಿಸಲು ಅಂತಾರಾಷ್ಟ್ರೀಯ ಸಭೆ ನಡೆಸಬೇಕೆಂಬ ನಿರ್ದಿಷ್ಟ ಪ್ರಸ್ತಾವನೆ ಇಲ್ಲವಷ್ಟೇ ಅಲ್ಲ, ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವ ವಿಷಯದಲ್ಲೂ, ಹಾಗೆ ಮಾಡುವ ವಿಧಾನಗಳ ಬಗ್ಗೆ ಒಂದೇ ಒಂದು ವಿಚಾರವೂ ಕಂಡುಬರುವುದಿಲ್ಲ. ಮೂರ್ತ ಪ್ರಸ್ತಾಪಗಳಿಗೆ ಘೋಷಣೆಯು ಸೂಕ್ತವಲ್ಲ ಎಂದು ವಾದಿಸಬಹುದು; ಆದರೆ ಈ ಪ್ರಸಕ್ತ ಜ್ವಲಂತ ಪ್ರಸ್ತುತ ಸಮಸ್ಯೆಗಳ ಕುರಿತು ಶೃಂಗಸಭೆಯಲ್ಲಿ ಯಾವುದೇ ಚರ್ಚೆ ನಡೆದಿರುವ ಬಗ್ಗೆ ಪುರಾವೆಗಳೇನೂ ಇಲ್ಲ.

ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಶೃಂಗಸಭೆಯಲ್ಲಿ ಅತಿಥೇಯ ಸರ್ಕಾರದ ಅತ್ಯಾಸಕ್ತಿಯ ವಿಷಯವೆಂದರೆ, ಅದರಿಂದ ಗರಿಷ್ಠ ಪ್ರಚಾರವನ್ನು ಪಡೆಯುವುದಾಗಿತ್ತು, ಅದನ್ನು ಪಡೆಯವುದರಲ್ಲಿ ಯಶಸ್ವಿಯಾಗಿದೆ. ನಡೆಯುತ್ತಿರುವ ಬಿಕ್ಕಟ್ಟಿನ ಪ್ರಮುಖ ಬಲಿಪಶುಗಳಾಗಿರುವ ಬಡ ದೇಶಗಳ, ಐಎಂಎಫ್ ಹೇರಿದ "ಮಿತವ್ಯಯ"ದ ಕ್ರಮಗಳಿಂದ ಹತ್ತಿಕ್ಕಲ್ಪಟ್ಟವರ ಪ್ರಾತಿನಿಧ್ಯವೇ ಈ ಶೃಂಗಸಭೆಯಲ್ಲಿ ಇರಲಿಲ್ಲ. ಮತ್ತು ಮುಂದುವರಿದ ದೇಶಗಳು ಆರ್ಥಿಕ ಬಿಕ್ಕಟ್ಟೆಂಬುದು ಇದೆಯೆಂಬುದನ್ನೇ ಒಪ್ಪಿಕೊಳ್ಳುವುದಿಲ್ಲವಾದ್ದರಿಮದ ಅದನ್ನು ನಿವಾರಿಸುವ ಪ್ರಸ್ತಾಪಗಳನ್ನು ಚರ್ಚಿಸುವ ಪ್ರಶ್ನೆಯೇ ಇಲ್ಲವಲ್ಲ. ನಿಜ, ಆ ದೇಶದ ಕೆಲವು "ಆಸ್ಥಾನ ಅರ್ಥಶಾಸ್ತ್ರಜ್ಞರು" ವೈಯಕ್ತಿಕವಾಗಿ ಬಿಕ್ಕಟ್ಟು ಇದೆ ಎಂಬುದನ್ನು ದೃಢೀಕರಿಸುತ್ತಾರೆ. ಸಂಕ್ಷಿಪ್ತವಾಗಿ, ಜಿ–20 ಸಭೆಯು ವಿಭಿನ್ನ ದೇಶಗಳು ತಮ್ಮದೇ ಆದ ನಿರ್ದಿಷ್ಟ ಕಾರಣಗಳಿಗಾಗಿ ಭಾಗವಹಿಸಿದ ಪ್ರದರ್ಶನವಾಗಿತ್ತು, ಜಗತ್ತು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಕಾಳಜಿ ಅವುಗಳಿಗೆ ಬಹಳೇನೂ ಇದ್ದಂತಿರಲಿಲ್ಲ.

**ಬಿಕ್ಕಟ್ಟಿನ ಬಗ್ಗೆ ಏಕೆ ಈ ನಿರಾಳತೆ?**

ಆದಾಗ್ಯೂ ಒಂದು ಪ್ರಶ್ನೆ ಏಳುತ್ತದೆ: ಮುಂದುವರಿದ ದೇಶದ ಸರ್ಕಾರಗಳು ಪ್ರಸ್ತುತ ಆರ್ಥಿಕ ಬಿಕ್ಕಟ್ಟನ್ನು ಇಷ್ಟು ನಿರಾಳವಾಗಿ ಏಕೆ ತೆಗೆದುಕೊಳ್ಳುತ್ತವೆ? ಹಿಂದೊಮ್ಮೆ ನಿರುದ್ಯೋಗವು ಬಂಡವಾಳಶಾಹಿ ಸರ್ಕಾರಗಳಿಗೆ ಬಹಳ ಕಾಳಜಿಯ ವಿಷಯವಾಗಿತ್ತು, ಜಾನ್ ಮೇನಾರ್ಡ್ ಕೇನ್ಸ್, ಬಂಡವಾಳಶಾಹಿಯ ರಕ್ಷಣೆಗೆ ಕಂಕಣಬದ್ಧರಾಗಿದ್ದವರು ಕೂಡ, "ಇಂದಿನ ಬಂಡವಾಳಶಾಹಿ ವೈಯಕ್ತಿಕತೆಯೊಂದಿಗೆ ಸಂಬಂಧಿಸಿದ ನಿರುದ್ಯೋಗವನ್ನು ಜಗತ್ತು ಇನ್ನು ಮುಂದೆ ಸಹಿಸುವುದಿಲ್ಲ" ಎಂದು ಹೇಳಿದ್ದರು. ನಿಜ, ಆ ಹಿಂದಿನ ಯುಗದಲ್ಲಿ, ನಿರುದ್ಯೋಗವು ಆರ್ಥಿಕ ಹಿಂಜರಿತದ ಲಕ್ಷಣವಾಗಿತ್ತು, ಜತೆಗೆ ಲಾಭವೆಂಬುದನ್ನೂ ಕಳೆದುಕೊಳ್ಳಬೇಕಾಗಿತ್ತು ನಿರುದ್ಯೋಗ ಕಾರ್ಮಿಕರು ಮತ್ತು ಬಂಡವಾಳಶಾಹಿಗಳು ಇಬ್ಬರನ್ನೂ ಬಾಧಿಸುವ ಬಿಕ್ಕಟ್ಟಿನ ಲಕ್ಷಣವಾಗಿತ್ತು.

ಆದರೆ ಸಮಕಾಲೀನ ಬಂಡವಾಳಶಾಹಿಯಲ್ಲಿ ಹಾಗಿಲ್ಲ. 'ಉತ್ಪಾದನೆಯು' ಲಾಭದ ಏಕೈಕ ಮೂಲವಲ್ಲ, ಅಥವಾ ಮುಖ್ಯ ಮೂಲವೂ ಅಲ್ಲ; ಬಂಡವಾಳಿಗರು ಗಳಿಸುವ ಲಾಭದ್ಲ ಗಣನೀಯ ಭಾಗ ಹಣಕಾಸಿನ ಕಾರ್ಯಾಚರಣೆಗಳಿಂದ ಬರುತ್ತಿದೆ. ಆದ್ದರಿಂದ ಆರ್ಥಿಕ ಹಿಂಜರಿತದಲ್ಲಿಯೂ ಸಹ, ಬಂಡವಾಳಗಾರರ ಲಾಭಕ್ಕೇನೂ ಚ್ಯುತಿಯಿಲ್ಲ. ನಿಜ,

**ಪುಟ 15 ಕ್ಕೆ**

# ಚಿಲಿ ಮಿಲಿಟರಿ ಕ್ಷಿಪ್ರದಂಗೆಗೆ 50 ವರ್ಷ

**50 ವರ್ಷಗಳ ಹಿಂದೆ, ಸೆಪ್ಟೆಂಬರ್ 11, 1973 ರಂದು, ಚಿಲಿಯಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸಾಲ್ವಡಾರ್ ಅಲೆಂಡೆ ಸರ್ಕಾರವನ್ನು ಜನರಲ್ ಪಿನೋಶೆ ನಾಯಕತ್ವದ ಮಿಲಿಟರಿ ಕ್ಷಿಪ್ರದಂಗೆಯ ಮೂಲಕ ಯುಎಸ್ ಉರುಳಿಸಿತ್ತು. ಅಧ್ಯಕ್ಷ ಅಲೆಂದೆ ಅವರ ಹತ್ಯೆ ಮಾಡಲಾಯಿತು. ಪಿನೋಶೆ ಸರ್ವಾಧಿಕಾರಿ ಸರಕಾರವು, ಅಧ್ಯಉಕ್ಷ ಅಲೆಂಡೆ ಅವರನ್ನು ಸಕ್ರಿಯವಾಗಿ ಬೆಂಬಲಿಸಿದ ಸಾವಿರಾರು ಕಮ್ಯುನಿಸ್ಟರ, ಸಮಾಜವಾದಿಗಳ, ಕಾರ್ಮಿಕರ, ಕಲಾವಿದರ ಕಗ್ಗೊಲೆ ಮಾಡಿಸಿತು. ಅಲೆಂಡೆ ಅವರ ನೇತೃತ್ವದ ಎಡಪಂಥೀಯ ಸರಕಾರ 1970 ರಲ್ಲಿ ಚುನಾಯಿತವಾಗಿದ್ದು, 1973ರ ಹೊತ್ತಿಗೆ ಚಿಲಿಯಲ್ಲೂ ಇಡೀ ಜಗತ್ತಿನಲ್ಲೂ ಹಲವು ಜನಪರ ಪ್ರಗತಿಪರ ಕಾರ್ಯಕ್ರಮಗಳ ಜಾರಿ ಮೂಲಕ ಜನಪ್ರಿಯವಾಗಿತ್ತು. ಮೂರನೇಯ ಜಗತ್ತಿನ ಪ್ರಗತಿಪರ, ಎಡಪಂಥೀಯ ಶಕ್ತಿಗಳಿಗೆ ಮಾದರಿಯಾಗುವತ್ತ ಸಾಗಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಬಂದ ಚಿಲಿಯ ಮಿಲಿಟರಿ ಕ್ಷಿಪ್ರದಂಗೆಯು, ಆ ದೇಶದ ಮಾತ್ರವಲ್ಲ ಆಫ್ರಿಕಾ, ಏಶ್ಯಾ, ಲ್ಯಾಟಿನ್ ಅಮೆರಿಕಾದ ಮೂರನೇಯ ಜಗತ್ತಿನ ದೇಶಗಳ ಸ್ವತಂತ್ರ ಸಾರ್ವಭೌಮ ಸಮೃದ್ಧ ಬದುಕಿನ ಆಶೋತ್ತರಗಳಿಗೆ ನಡೆದ ಸಂಘರ್ಷದ ಇತಿಹಾಸದಲ್ಲಿ ಒಂದು ಭಾರೀ ಆಘಾತದ ಕ್ಷಣವಾಗಿತ್ತು, ನಕಾರಾತ್ಮಕ ತಿರುವಿನ ಬಿಂದು ಆಗಿತ್ತು.**

ವಸಂತರಾಜ ಎನ್.ಕೆ

ಚಿಲಿಯ ಮಿಲಿಟರಿ ಕ್ಷಿಪ್ರದಂಗೆ ಎರಡು ರೀತಿಯಲ್ಲಿ ಸಾಮ್ರಾಜ್ಯಶಾಹಿಗೆ ಪ್ರಯೋಜನವನ್ನು ನೀಡಿತು–ಅಡೆತಡೆಯಿಲ್ಲದ ಶೋಷಣೆಗಾಗಿ ಚಿಲಿಯ ಆರ್ಥಿಕತೆಯನ್ನು ತೆರೆಯುವ ಮೂಲಕ ಉಳಿದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜಾರಿಗೆ ಅತ್ಯಂತ ಪ್ರತಿಗಾಮಿ ನವ–ಉದಾರವಾದಿ ಮಾದರಿಯನ್ನು ಹಾಕಿಕೊಟ್ಟಿತು; ಮತ್ತು ಈ ಮಾದರಿಗೆ ಬರುವ ಎಲ್ಲಾ ಪ್ರಗತಿಪರ ಮತ್ತು ಎಡಪಂಥೀಯ ಶಕ್ತಿಗಳ ವಿರೋಧವನ್ನು ಭೀಕರ ದಮನದ ಮೂಲಕ ಹತ್ತಿಕ್ಕಲಾಗುವುದು ಎಂಬ ಸಂದೇಶ ರವಾನಿಸಲಾಯಿತು. ಆದರೆ ಸರ್ವಾಧಿಕಾರ ಮತ್ತು ನವ–ಉದಾರವಾದಿ ನೀತಿಗಳ ವಿರುದ್ಧ ದಶಕಗಳ ದೃಢ ಹೋರಾಟಗಳ ನಂತರ, ಇತ್ತೀಚೆಗೆ ಮತ್ತೆ ಪ್ರಗತಿಪರ ಸರ್ಕಾರವು ಚಿಲಿಯಲ್ಲಿ ಅಧಿಕಾರ ವಹಿಸಿಕೊಂಡಿದೆ. ಈ ಸರ್ಕಾರವು ನಿಸ್ಸಂದೇಹವಾಗಿ ಅಲೆಂಡೆ ನಿಗದಿ ಪಡಿಸಿದ ಅಡಿಪಾಯದ ಮೇಲೆ ನಿಂತಿದೆ.

ಅಲೆಂಡೆ ಜನಪ್ರಿಯ ಕಮ್ಯುನಿಸ್ಟ್ ನಾಯಕರಾಗಿದ್ದು, ಅವರು 1950 ರ ದಶಕದಿಂದ ಚಿಲಿಯಲ್ಲಿ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದರು. ಆಡಳಿತ ವರ್ಗದ ಪ್ರತಿನಿಧಿಗಳ ಕೈಯಲ್ಲಿ ಅವರ ಸೋಲುಗಳ ಹೊರತಾಗಿಯೂ, ಅವರು ಕಾರ್ಮಿಕ ವರ್ಗ ಮತ್ತು ಚಿಲಿಯ ಇತರ ಬಡ ಜನರಿಂದ ಸಾಕಷ್ಟು ಬೆಂಬಲವನ್ನು ಗಳಿಸುತ್ತಲೇ ಇದ್ದರು. ಅಲೆಂಡೆಗೆ ಅಧ್ಯವಕ್ಷೀಯ ಸ್ಪರ್ಧೆಗಳಲ್ಲಿ ಹೆಚ್ಚುತ್ತಾ ಹೋದ ಚುನಾವಣಾ ಬೆಂಬಲಕ್ಕೆ ಚಿಲಿಯ ಕಾರ್ಮಿಕ ವರ್ಗದ ಚಳವಳಿ ಕಾರಣವಾಗಿತ್ತು.

**ಶ್ರಮಿಕರ ನಾಯಕ ಅಲೆಂದೆ ಅಧ್ಯಕ್ಷ**

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಿಂದ, ಚಿಲಿಯು ಅತ್ಯಂತ ಬಲವಾದ ಕಾರ್ಮಿಕ ಆಂದೋಲನವನ್ನು ಹೊಂದಿತ್ತು. ಇದು ಉತ್ತರದ ಗಣಿಗಾರಿಕೆ ಉದ್ಯಮದಲ್ಲಿ ಮತ್ತು ದಕ್ಷಿಣದಲ್ಲಿ ಜವಳಿ ಮತ್ತು ಕಲ್ಲಿದ್ದಲು ಗಣಿಗಾರಿಕೆಯನ್ನು ಆಧರಿಸಿತ್ತು. ಚಿಲಿಯ ಕಮ್ಯುನಿಸ್ಟ್ ಪಕ್ಷ ಮತ್ತು ಸಮಾಜವಾದಿ ಪಕ್ಷ ಎರಡೂ ಕಾರ್ಮಿಕ ವರ್ಗದ ಹೋರಾಟಗಳ ಭಾಗವಾಗಿ ಬೆಳೆದಿತ್ತು. ಅಂತಹ ಹೋರಾಟಗಳಿಂದಾಗಿ ಕಾರ್ಮಿಕ ವರ್ಗವು 1930 ರ ದಶಕದಲ್ಲಿ ಗಣನೀಯ ರಾಜಕೀಯ ಹಕ್ಕುಗಳನ್ನು ಗಳಿಸಿತು. ಈ ಮೂಲಕ ಕಾರ್ಮಿಕ ವರ್ಗವು ತಮ್ಮ ಪ್ರಭಾವ ಮತ್ತು ಸಂಘಟನೆಯನ್ನು ವಿಸ್ತರಿಸಲು ಪ್ರಾರಂಭಿಸಿತು. ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಮುನ್ನಡೆಸಲು, ಅಲೆಂಡೆ ಅವರನ್ನು 1950 ರ ದಶಕದಲ್ಲಿ ಅಧ್ಯಕ್ಷೀಯ ಅಭ್ಯರ್ಥಿಯಾಗಿಸಲಾಯಿತು. ಅವರು ಸೋತರೂ, 1960 ರ ದಶಕದಲ್ಲಿ ಅಲೆಂಡೆ ಅವರಿಗೆ ಜನಪ್ರಿಯ ಬೆಂಬಲದಲ್ಲಿ ಭಾರಿ ಹೆಚ್ಚಳ ಕಂಡು ಬಂದಿತ್ತು. ಕಾರ್ಮಿಕ ವರ್ಗದ ಜೊತೆಯಲ್ಲಿ, ಸಮಾಜದ ಇತರ ಅನೇಕ ವಿಭಾಗಗಳು ಹೋರಾಟಗಳಿಗೆ ಸೇರಿಕೊಂಡವು, ವಿಶೇಷವಾಗಿ ರೈತರು. ವಿಶ್ವವಿದ್ಯಾನಿಲಯಗಳಲ್ಲಿ ಸುಧಾರಣೆಗೆ ಒತ್ತಾಯಿಸುವ ವಿದ್ಯಾರ್ಥಿ ಚಳುವಳಿ ಮತ್ತು ಕೊಳಚೆ ಪ್ರದೇಶಗಳ ಜನರ ಚಳುವಳಿ ಈ ಅವಧಿಯಲ್ಲಿ ಸಂಭವಿಸಿದೆ. ಈ ಎಲ್ಲಾ ವರ್ಗ ಮತ್ತು ಸಾಮಾಜಿಕ ಹೋರಾಟಗಳ ಕ್ರೋಢೀಕರಣ 1970 ರಲ್ಲಿ ಅಲೆಂಡೆ ವಿಜಯಕ್ಕೆ ಕಾರಣವಾಯಿತು.

ಸೆಪ್ಟೆಂಬರ್ 4, 1970 ರಂದು ಪಾಪ್ಯುಲರ್ ಯೂನಿಟಿ ಫ್ರಂಟ್ (ಹಲವು ಎಡ ಪ್ರಗತಿಪರ ಪಕ್ಷಗಳ ಕೂಟ) ಅಭ್ಯರ್ಥಿಯಾಗಿ ಅಧ್ಯಕ್ಷೀಯ ಚುನಾವಣೆಯಲ್ಲಿ ಅಲೆಂಡೆ ಸ್ಪರ್ಧಿಸಿ, 36.4 ಶೇಕಡಾ ಮತ ಪಡೆದು ಆಯ್ಕೆಯಾದರು. ಅವರ ಕ್ರಿಶ್ಚಿಯನ್ ಡೆಮೊಕ್ರಾಟ್ ಎದುರಾಳಿ 34.9 ಶೇಕಡಾ ಮತಗಳನ್ನು ಪಡೆದರು. ಅಷ್ಟೇನೂ ನಿರ್ಣಾಯಕವಲ್ಲದಿದ್ದರೂ ಈ ಜನಾದೇಶದೊಂದಿಗೆ ಅಲೆಂಡೆ ಬೂರ್ಜ್ವಾ ಪ್ರಜಾಪ್ರಭುತ್ವದ ನಿರ್ಬಂಧದೊಳಗೆ ಸರಕಾರದ ಧೋರಣೆಗಳನ್ನು ದಿಟ್ಟವಾಗಿ ಜನಪರವಾಗುವತ್ತ ಬದಲಾಯಿಸಲು ಪ್ರಾರಂಭಿಸಿದರು.

**ಅಲೆಂಡೆ ಸರಕಾರದ ಸಾಧನೆಗಳು**

ಅಲೆಂಡೆ ಸಂಪತ್ತನ್ನು ಪುನರ್ವಿತರಣೆ ಮಾಡುವ, ಆರ್ಥಿಕತೆಯ ಮೇಲೆ ವಿದೇಶಿ ಮತ್ತು ಏಕಸ್ವಾಮ್ಯ ನಿಯಂತ್ರಣವನ್ನು ಕೊನೆಗೊಳಿಸುವ, ಕಾರ್ಖಾನೆಗಳಲ್ಲಿ ಕಾರ್ಮಿಕರ ಭಾಗವಹಿಸುವಿಕೆಯನ್ನು ಸಾಧ್ಯಗೊಳಿಸುವ ಮೂಲಕ ಪ್ರಜಾಪ್ರಭುತ್ವವನ್ನು ಆಳಗೊಳಿಸುವ ಭರವಸೆಯ ಮೇಲೆ ಆಯ್ಕೆಯಾಗಿದ್ದರು. ಬ್ಯಾಂಕುಗಳ ರಾಷ್ಟ್ರೀಕರಣದೊಂದಿಗೆ ಈ ಭರವಸೆಗಳ ಜಾರಿ ಪ್ರಾರಂಭವಾಯಿತು. ಸರ್ಕಾರವು ಅಧಿಕಾರದಲ್ಲಿದ್ದ ಸಾವಿರ ದಿನಗಳಲ್ಲಿ, ಸಂಸತ್ತು ಸರ್ವಾನುಮತದಿಂದ ಅಂಗೀಕರಿಸಿದ ತಾಮ್ರದ ಗಣಿಗಳ ರಾಷ್ಟ್ರೀಕರಣ, ಸಾಮಾಜಿಕ ಬಳಕೆಗಾಗಿ ಖಾಸಗಿ ಆಸ್ತಿಗಳನ್ನು ಸ್ವಾಧೀನ ಪಡಿಸಿ 'ಸಾಮಾಜಿಕ ಆಸ್ತಿ ಪ್ರದೇಶಗಳ' ರಚನೆ, ಪುರಸಭೆಯ ಮಟ್ಟದಲ್ಲಿ ನಿರ್ಣಯಗಳಲ್ಲಿ ಜನ ಭಾಗವಹಿಸಲು 'ಸಮುದಾಯ ಕಮಾಂಡ್' ಗಳ ರಚನೆ, ರಾಷ್ಟ್ರೀಯಗೊಳಿಸಿದ ಕೈಗಾರಿಕೆಗಳ ನಿರ್ವಹಣೆಯಲ್ಲಿ ಭಾಗವಹಿಸುವ 'ಕಾರ್ಮಿಕರ ಶಕ್ತಿ ಕೇಂದ್ರ'ಗಳ ರಚನೆ – ಇವೆಲ್ಲವನ್ನು ಸಾಧಿಸಲಾಯಿತು.

ಕೃಷಿ ಭೂಒಡೆತನದಲ್ಲಿ ದೊಡ್ಡ ಸಾಂದ್ರತೆ ನಿವಾರಿಸಲು ಭೂ ಸುಧಾರಣೆಗಳನ್ನು ಕೈಗೊಂಡು, ಒಂದು ವರ್ಷದೊಳಗೆ 5 ಲಕ್ಷ ಹೆಕ್ಟೇರ್ ಭೂಮಿಯನ್ನು ಭೂಹೀನರಿಗೆ ವಿತರಿಸಲಾಯಿತು. ಅಂತೆಯೇ, ವಸತಿ ಪ್ರಶ್ನೆಯನ್ನು ಬಗೆಹರಿಸಲು ವಸತಿ ನಿರ್ಮಾಣದ ಮಿಷನ್ ಆರಂಭಿಸಲಾಯಿತು.



ಸಾಂಸ್ಕೃತಿಕ ಮಟ್ಟದಲ್ಲಿ, ಸಾವಿರಾರು ಪುಸ್ತಕಗಳನ್ನು ಪ್ರಕಟಿಸುವ, ಪ್ರಕಟಿತ ಪುಸ್ತಕಗಳನ್ನು ಪ್ರಸಾರ ಮಾಡುವ ವ್ಯಾಪಕ ಕಾರ್ಯಕ್ರಮ, ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಅವಕಾಶಗಳನ್ನು ನೀಡಲು, ಕಡಿಮೆ–ಆದಾಯದ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಖಾತರಿಪಡಿಸಲು ರಾಷ್ಟ್ರೀಯ ಏಕೀಕೃತ ಶಾಲೆಯನ್ನು (ಇಎನ್ ಯು) ಪ್ರಾರಂಭಿಸಲಾಯಿತು.

ಅಲೆಂಡೆ ಆಡಳಿತದ 1000 ದಿನಗಳಲ್ಲಿ, ರಾಷ್ಟ್ರೀಯ ಆದಾಯದಲ್ಲಿ ಶೇಕಡಾ 50 ರಷ್ಟು ಬಡಜನರ ಪಾಲು ಶೇ. 16.1 ರಿಂದ 17.6 ಕ್ಕೆ, ಮಧ್ಯಮ ವರ್ಗಗಳ ಪಾಲು ಶೇ. 53.9 ರಿಂದ ಶೇ 57.7ಕ್ಕೆ ಏರಿಕೆಯಾಯಿತು. ಮತ್ತೊಂದೆಡೆ, ಶೇ. 5 ಶ್ರೀಮಂತ ಪಾಲು ಶೇ. 30 ರಿಂದ 24.7 ಕ್ಕೆ ಇಳಿಯಿತು.

**ಸರಕಾರದ ಕತ್ತು ಹಿಸುಕುವ ಪ್ರಯತ್ನ**

ಸ್ವಾಭಾವಿಕವಾಗಿ, ಈ ಎಲ್ಲಾ ಕ್ರಮಗಳು ಆಳುವ ವರ್ಗಗಳಿಗೆ ಕೋಪ ಬರಿಸಿದವು, ಈ ಕ್ರಮಗಳು ಪ್ರಭುತ್ವದ ಮೇಲಿನ ತಮ್ಮ ನಿಯಂತ್ರಣದ ಮೇಲೆ ಆಕ್ರಮಣವೆಂದು ಅವು ಪರಿಗಣಿಸಿದವು. 1972 ರಿಂದ, ಅವರು ಆರ್ಥಿಕತೆಯನ್ನು ಸ್ಥಗಿತಗೊಳಿಸುವ ಹಾಳುಗೆಡಹುವ, ಅಗತ್ಯ ಸರಕುಗಳ ಕೃತಕ ಕೊರತೆಯನ್ನು ಸೃಷ್ಟಿಸುವ ಆಂದೋಲನವನ್ನು ಪ್ರಾರಂಭಿಸಿದರು. ಇದನ್ನು 'ಧಣಿಗಳ ಲಾಕ್ ಔಟ್" ಎಂದು ಕರೆಯಲಾಯಿತು. ಯುಎಸ್ ಒತ್ತಡದಿಂದ ವಿಶ್ವಬ್ಯಾಂಕ್ ಚಿಲಿಗೆ ಎಲ್ಲಾ ಸಾಲಗಳನ್ನು ನಿರಾಕರಿಸಿತು. ಈ ರೀತಿಯಾಗಿ ಯುಎಸ್ ಮತ್ತು ಚಿಲಿಯ ಆಳುವ ವರ್ಗಗಳು ಅಲೆಂಡೆ ಆಡಳಿತವನ್ನು ಕತ್ತು ಹಿಸುಕಲು ಪ್ರಯತ್ನಿಸಿದವು.

ಈ ಎಲ್ಲಾ ಪ್ರಯತ್ನಗಳ ಹೊರತಾಗಿಯೂ, ಅಲೆಂಡೆ ಅವರ ಜನಪ್ರಿಯತೆ, ಬೆಂಬಲ ಹೆಚ್ಚುತ್ತಾ ಹೋಯಿತು. ಈ ಅವಧಿಯಲ್ಲಿ ಪ್ರಸಾರವಾದ ಕ್ಲಾಸಿಕ್ ಚಿತ್ರಗಳಲ್ಲಿ ಒಂದು ಸೂಪರ್ ಮಾರ್ಕೆಟ್ ಮುಂದೆ ಉದ್ದ ಸಾಲಿನಲ್ಲಿ ನಿಂತಿದ್ದ ಒಬ್ಬ ಹಿಡಿದ ಪೋಸ್ಟರ್ ನಲ್ಲಿ ಹೀಗೆ ಬರೆದಿತ್ತು "ಈ ಸರ್ಕಾರದ ಅಡಿಯಲ್ಲಿ, ನಾನು ಒಂದು ಉದ್ದದ ಸಾಲಿನಲ್ಲಿ ಕಾಯಬೇಕಾಗಿದೆ, ಆದರೆ ನಾನು ಈ ಸರ್ಕಾರವನ್ನು ಬೆಂಬಲಿಸುತ್ತೇನೆ ಏಕೆಂದರೆ ಅದು ನನ್ನದು". ಆಡಳಿತ ವರ್ಗಗಳು ಮತ್ತು ಸಾಮ್ರಾಜ್ಯಶಾಹಿ ವಿಧ್ವಂಸಕತೆಯ ಬಗ್ಗೆ ಜನರಿಗೆ ಅರಿವು ಮೂಡಿಸಿದ್ದರಿಂದ ಇದು ಸಾಧ್ಯವಾಯಿತು.

ಮಾರ್ಚ್ 1973 ರಲ್ಲಿ ನಡೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ, ಅಲೆಂಡೆ ಅವರ ಪಕ್ಷವು ಶೇ. 43.4 ಮತಗಳನ್ನು ಗಳಿಸಿತು. ಅಧ್ಯಕ್ಷೀಯ ಚುನಾವಣೆಯಲ್ಲಿ ಪಡೆದಕ್ಕಿಂತ ಶೇ. 7 ಹೆಚ್ಚು. ಕಾರ್ಮಿಕರು, ರೈತರು ಮತ್ತು ವಿದ್ಯಾರ್ಥಿಗಳು ಬೃಹತ್ ಪ್ರದರ್ಶನಗಳಲ್ಲಿ ಅಲೆಂಡೆ ಯನ್ನು ಬೆಂಬಲಿಸಿದರು. ಸೂಪರ್ ಮಾರ್ಕೆಟ್ ಮುಚ್ಚಿದ್ದಾಗ ಸಮುದಾಯ ಕೇಂದ್ರಗಳನ್ನು ಆರಂಭಿಸಿ ಲಭ್ಯ ಆಹಾರವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಲಾಯಿತು.

ಅಕ್ಟೋಬರ್ 1972 ರಲ್ಲಿ ಟ್ರಕ್ ಉದ್ಮಮ ಮುಷ್ಕರದಿಂದ ಆರ್ಥಿಕತೆಯನ್ನು ಅಡ್ಡಿಪಡಿಸುವ ಪ್ರಯತ್ನಗಳನ್ನು ಕಾರ್ಮಿಕರು ಯಶಸ್ವಿಯಾಗಿ ತಡೆದರು. ಚಿಲಿಯಲ್ಲಿ ತೀವ್ರ ವರ್ಗ ಹೋರಾಟವೇ ನಡೆಯಿತು. ಆ ಅವಧಿಯಲ್ಲಿ ಚಿಲಿ ರಾಜಧಾನಿ ಸ್ಯಾಂಟಿಯಾಗೊದ ಗೋಡೆಗಳ ಮೇಲೆ ಅರೆಸೈನಿಕ ಪಡೆಗಳು ಬರೆದ ಈ ಘೋಷಣೆಗಳು ಕಾಣಿಸಿಕೊಂಡವು: 'ಜಕಾರ್ತಾ ಬರುತ್ತಿದೆ'. ಇದು 1965–66 ರಲ್ಲಿ ಜಕಾರ್ತಾ ರಾಜಧಾನಿಯಾಗಿರುವ ಇಂಡೋನೇಷ್ಯಾದಲ್ಲಿ ಸಿಐಎ ಪ್ರಾಯೋಜಿತ ಜನರಲ್ ಸುಹಾರ್ತೊ ಮಿಲಟರಿ ಕ್ಷಿಪ್ರಕ್ರಾಂತಿ ನಂತರ ನಡೆಸಿದ 10 ಲಕ್ಷ ಕಮ್ಯುನಿಸ್ಟರು ಮತ್ತು ಸಮಾಜವಾದಿಗಳ ನರಮೇಧ ನೆನಪಿಸುತ್ತಾ, ಮುಂಬರುವ ಮಿಲಿಟರಿ ಕ್ಷಿಪ್ರದಂಗೆಯ ಎಚ್ಚರಿಕೆಯಾಗಿತ್ತು.

ಸಿಐಎ ಭಾರೀ ರಹಸ್ಯ ಬೆಂಬಲದ ನಂತರವೂ ಪಾರ್ಲಿಮೆಂಟರಿ ಚುನಾವಣೆಯ ನಂತರ ಪ್ರಮುಖ ವಿರೋಧ ಪಕ್ಷ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷ ಕೈಚೆಲ್ಲಿ ಹತಾಶವಾಗಿ ಕುಳಿತಿತ್ತು. ಅಲೆಂದೆ ಸರಕಾರಕ್ಕೆ ಭಾರೀ ಅಡೆತಡೆಗಳ ಕಷ್ಟನಷ್ಟಗಳ ನಡುವೆಯೂ ಜನಬೆಂಬಲ ಹೆಚ್ಚುತ್ತಿತ್ತು. ಇದು ಯು.ಎಸ್ ಮತ್ತು ಚಿಲಿಯ ಆಳುವ ವರ್ಗಳನ್ನು ಆತಂಕ್ಕೀಡು ಮಾಡಿತು.

**ಮಿಲಿಟರಿ ಕ್ಷಿಪ್ರದಂಗೆ**

ಸೆಪ್ಟೆಂಬರ್ 11 ರಂದು, ಅಲೆಂಡೆ ಮತ್ತು ಅವರ ಆಡಳಿತವು ತಮ್ಮ ಜನರ ಪರ ನೀತಿಗಳನ್ನು ಕೈಗೊಳ್ಳಲು ಸರಕಾರದ ಕೈಗಳನ್ನು ಬಲಪಡಿಸಲು ಸಾಂವಿಧಾನಿಕ ಜನಾಭಿಪ್ರಾಯ ಸಂಗ್ರಹವನ್ನು ಘೋಷಿಸಬೇಕಾಗಿತ್ತು. ಈ ಕ್ರಮವನ್ನು ನಿರೀಕ್ಷಿಸುತ್ತಾ, ಆಡಳಿತ ವರ್ಗಗಳು ಮಿಲಿಟರಿಯಲ್ಲಿ ತಮ್ಮ ಏಜೆಂಟರ ಮೂಲಕ ಮತ್ತು ಯುಎಸ್ ಬೆಂಬಲದೊಂದಿಗೆ ಮಿಲಿಟರಿ ಕ್ಷಿಪ್ರದಂಗೆಯನ್ನು ನಡೆಸಿದವು. ಅವರು ಅಧ್ಯಕ್ಷೀಯ ಅರಮನೆಗೆ ನುಗ್ಗಿ ಭಯೋತ್ಪಾದಕ ದಾಳಿಯನ್ನು ಹರಿಯಬಿಟ್ಟರು. ಇಡೀ ರಾತ್ರಿ ನಗರ ಮಿಲಿಟರಿ ಭಯೋತ್ಪಾದಕ ದಾಳಿಗೆ ಗುರಿಯಾಯಿತು. ಇದನ್ನು ಪತ್ರಿಕೆಗಳು 'ಭೀಕರ ಭಯೋತ್ಪಾದನೆಯ ರಾತ್ರಿ' ಎಂದು ಕರೆದವು. ವಿದ್ಯುತ್ ಕಡಿತ ಮಾಡಿದ್ದರಿಂದ ಸ್ಯಾಂಟಿಯಾಗೊದ ಹೊರಗಿನ ಕಾರ್ಮಿಕ ವರ್ಗದ ನೆರೆಹೊರೆಗಳಲ್ಲಿ ಸುಮಾರು 2 ಲಕ್ಷ ಜನರು ಬ್ಲ್ಯಾಕೌಟ್ ಅನುಭವಿಸಿದರು. ಈ ಕಾರ್ಮಿಕ ವರ್ಗದ ನೆರೆಹೊರೆಗಳಲ್ಲಿ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಭೀಕರ ಕಾಳಗಗಳು ನಡೆದವು.

ಸಾವಿರಾರು ಕಮ್ಯುನಿಸ್ಟರು, ಸಮಾಜವಾದಿಗಳು ಮತ್ತು ಅವರ ಬೆಂಬಲಿಗರನ್ನು ಸುತ್ತುವರೆದು ರಾಜಧಾನಿಯ ರಾಷ್ಟ್ರೀಯ ಕ್ರೀಡಾಂಗಣಕ್ಕೆ ತಂದು ಕಗ್ಗೊಲೆ ಮಾಡಲಾಯಿತು. ಶ್ರೇಷ್ಠ ಗೀತರಚನೆಕಾರ ವಿಕ್ಟರ್ ಜಾರಾ ಅವರನ್ನು ಚಿಲಿಯ ರಾಷ್ಟ್ರೀಯ ಕ್ರೀಡಾಂಗಣದೊಳಗೆ ಬಂಧಿಸಿ, ಹಿಂಸಿಸಿ, ವಿರೂಪಗೊಳಿಸಿ ಕೊಲ್ಲಲಾಯಿತು. ನೊಬೆಲ್ ➚




ಪ್ರಶಸ್ತಿ ವಿಜೇತ ಪಾಬ್ಲೋ ನೆರುದಾ ರನ್ನೂ ಆಸ್ಪತ್ರೆಗೆ ಒಯ್ಯಲಾಯಿತು. ಕೆಲವೇ ದಿನಗಳಲ್ಲಿ ಅವರೂ ನಿಧನ ಹೊಂದಿದರು. ಅವರಿಗೆ ವಿಷಭರಿತ ಇಂಜೆಕ್ಷನ್ ಕೊಡಲಾಯಿತು ಎಂದು ಶಂಕಿಸಲಾಗಿದೆ. ನಂತರದ ದಿನಗಳಲ್ಲೂ ಈ ಕ್ರೂರ ದಬ್ಬಾಳಿಕೆ ಮುಂದುವರೆಯಿತು. ಪಿನೋಶೆ ಸರ್ವಾಧಿಕಾರ ಮುಗಿದ ನಂತರ ರಚಿಸಲಾದ ಆಯೋಗ 3,200 ಚಿಲಿಯ ನಾಗರಿಕರನ್ನು ಪಿನೋಶೆ ಸರಕಾರ ಕೊಲೆ ಮಾಡಿದೆ; 38,000 ರಾಜಕೀಯ ಕಾರ್ಯಕರ್ತರು ದೀರ್ಘ ಬಂಧನ ಮತ್ತು ಚಿತ್ರಹಿಂಸೆಗಳ ನಂತರವೂ ಬದುಕುಳಿದಿದ್ದರು; 1 ಲಕ್ಷಕ್ಕೂ ಹೆಚ್ಚು ಜನರು ಕಡಿಮೆ ಅವಧಿಯ ಬಂಧನ ಗಳು, ತಮ್ಮ ಕಾಲೋನಿಗಳ ಮೇಲೆ ಆಗಾಗ ಸಾಮೂಹಿಕ ದಾಳಿಗಳನ್ನು ಅನುಭವಿಸಿದರು, ಎಂದಿದೆ.

ಆ ಅವಧಿಯ ಕೆಲವು ರಹಸ್ಯ ಫೈಲ್ ಗಳು ಈಗ ಬಹಿರಂಗವಾಗಿದ್ದು, ಮಿಲಿಟರಿ ಕ್ಷಿಪ್ರ ದಂಗೆ ಮತ್ತು ಹತ್ಯಾಕಾಂಡದಲ್ಲಿ ಸಿಐಎ ಯ ಪ್ರಧಾನ ಪಾತ್ರ ಈಗ ಖಚಿತವಾಗಿದೆ. ಸೆಪ್ಟೆಂಬರ್ 1973 ರಲ್ಲಿ ಚಿಲಿಯಲ್ಲಿ ನಡೆದ ಮಿಲಿಟರಿ ಕ್ಷಿಪ್ರದಂಗೆ 'ಆಪರೇಷನ್ ಕಾಂಡೋರ್' ನ ಭಾಗವಾಗಿದ್ದು, ಲ್ಯಾಟಿನ್ ಅಮೆರಿಕದ ಹಲವು ಮಿಲಿಟರಿ ಸರ್ವಾಧಿಕಾರಗಳ ಜತೆ ರಹಸ್ಯ ಒಡನಾಟವನ್ನು ಒಳಗೊಂಡಿತ್ತು ಮತ್ತು ಅಲೆಂದೆ ಸರಕಾರದ ವಿರುದ್ಧ ಸಮನ್ವಯ ಕಾರ್ಯಾಚರಣೆಯನ್ನು ಒಳಗೊಂಡಿತ್ತು. ಕಾಂಡೋರ್ ತಂಡವು ಚಿಲಿ, ಪರಾಗ್ವೆ, ಬ್ರೆಜಿಲ್, ಉರುಗ್ವೆ ಮತ್ತು ಅರ್ಜೆಂಟೀನಾದ ರಹಸ್ಯ ಪೊಲೀಸ್ ಪಡೆಗಳ ಪ್ರತಿನಿಧಿಗಳನ್ನು ಹೊಂದಿತ್ತು. ನಾಲ್ಕು ಯುಎಸ್ ಯುದ್ಧ ಹಡಗುಗಳು ಸೆಪ್ಟೆಂಬರ್ 11 ರಂದು ಚಿಲಿಯ ಕರಾವಳಿಯಲ್ಲಿ ಲಂಗರು ಹಾಕಿದ್ದವು ಮತ್ತು ದಂಗೆಯ ನಾಯಕರೊಂದಿಗೆ ಶಾಶ್ವತ ಸಂಪರ್ಕವನ್ನು ಹೊಂದಿದ್ದವು.. ಜುಲೈ ಮತ್ತು ಆಗಸ್ಟ್ ನಲ್ಲಿ ದಂಗೆಗೆ ಮುಂಚಿತವಾಗಿ, ಯುಎಸ್ ಗುಪ್ತಚರ ಸಂಸ್ಥೆಗಳಿಂದ ತರಬೇತಿ ಪಡೆದ ಬಲಪಂಥೀಯ ಭಯೋತ್ಪಾದಕರು 250 ಕ್ಕೂ ಹೆಚ್ಚು ವಿಧ್ವಂಸಕ ಕ್ರಮಗಳನ್ನು ಕೈಗೊಂಡರು, ವಿದ್ಯುತ್ ಮಾರ್ಗಗಳನ್ನು ಸ್ಫೋಟಿಸಿಸುವುದು, ಉದ್ಯಮಗಳನ್ನು ನಾಶಮಾಡುವುದು ಮತ್ತು ಪ್ರಮುಖ ನಾಗರಿಕರನ್ನು ಹತ್ಯೆ ಮಾಡುವುದು ಅವರ ಕಾರ್ಯಾಚರಣೆಗಳಲ್ಲಿ ಸೇರಿತ್ತು.

**ಬದಲಿ ವ್ಯವಸ್ಥೆಯ ಚಾಂಪಿಯನ್ ಆಗಿ ಅಲೆಂದೆ**

ಅಲೆಂದೆ ಸರಕಾರವನ್ನು ಯು.ಎಸ್ ಸಾಮ್ರಾಜ್ಯಶಾಹಿ ಮಿಲಿಟರಿ ಕ್ಷಿಪ್ರದಂಗೆ ನಡೆಸಿ ಉರುಳಿಸಿದ್ದು, ಅದು ಚಿಲಿಯ ತಾಮ್ರದ ಗಣಿಗಳನ್ನು ರಾಷ್ಟ್ರೀಕರಿಸಿ, ಚಿಲಿಯ ಸ್ವತಂತ್ರ, ಸಾರ್ವಭೌಮ ನೀತಿಗಳನ್ನು ಎತ್ತಿ ಹಿಡಿದು, ಸಮಾಜವಾದಿ ನೀತಿಗಳ ಜಾರಿಗೆ ಪ್ರಯತ್ನಿಸಿದ್ದಕ್ಕೆ ಮಾತ್ರವಲ್ಲ. ನವ–ವಸಾಹತುಶಾಹಿ ಗೆ ಬದಲಿ ಅಂತರರಾಷ್ಟ್ರೀಯ ಆರ್ಥಿಕ–ವ್ಯಾಪಾರ ವ್ಯವಸ್ಥೆ ಒತ್ತಾಯಿಸುವ ಮೂರನೇಯ ಜಗತ್ತಿನ ದೇಶಗಳ ಚಳುವಳಿಯಲ್ಲೂ, ಅಲೆಂದೆ ನೇತೃತ್ವದಲ್ಲಿ ಚಿಲಿ ಮುಂಚೂಣಿಯಲ್ಲಿ ಇದ್ದಿದ್ದು ಯು. ಎಸ್ ನಾಯಕತ್ವದ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ನುಂಗಲಾರದ ತುತ್ತಾಗಿತ್ತು.

ಅಲಿಪ್ತ ಚಳುವಳಿ (NAM) ಮತ್ತು ವ್ಯಾಪಾರ ಹಾಗೂ ಅಭಿವೃದ್ಧಿಗೆ ವಿಶ್ವಸಂಸ್ಥೆಯ ಸಮ್ಮೆಳನ (UNCTAD) ಮೂಲಕ ಮೂರನೆಯ ಜಗತ್ತಿನ ದೇಶಗಳು 1960ರ ದಶಕದಿಂದಲೇ ಬದಲಿ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಗೆ ಒತ್ತಾಯಿಸುತ್ತಿದ್ದವು. ಅಲಿಪ್ತ ಚಳುವಳಿ 1961 ರಲ್ಲಿ ಆರಂಭವಾಗಿದ್ದರೂ, ಲ್ಯಾಟಿನ್ ಅಮೆರಿಕಾದಿಂದ (ಆ ಅವಧಿಯಲ್ಲಿ ಹಲವು ದೇಶಗಳು ಯು. ಎಸ್ ಬಾಲಂಘೋಚಿಯಾಗಿದ್ದ ಮಿಲಿಟರಿ ಸರ್ವಾಧಿಕಾರದ ಅಡಿಯಲ್ಲಿದ್ದವು) ಕ್ಯೂಬಾ ಮಾತ್ರ ಅದರ ಸದಸ್ಯವಾಗಿತ್ತು. 1971ರಲ್ಲಿ ಚಿಲಿ NAM ಸದಸ್ಯ ದೇಶವಾಯಿತು. UNCTAD ನಲ್ಲೂ ಸಕ್ರಿಯವಾಯಿತು. ಅಲೆಂದೆ ಒತ್ತಾಯದ ಮೇರೆಗೆ ಚಿಲಿಯಲ್ಲಿ 1972ರಲ್ಲಿ ನಡೆದ ಮೂರನೆಯ UNCTAD ಸಮಾವೇಶ ಚಾರಿತ್ರಿಕವಾಗಿತ್ತು. ಅಲ್ಲಿ ಅವರು ಹೊಸ ಅಂತರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ (New International Economic Order - NIEO) ಸ್ಪಷ್ಟ ಪರಿಕಲ್ಪನೆಯನ್ನು ಮಂಡಿಸಿದರು. ಈ ಸಮ್ಮೇಳನದಲ್ಲಿ ಈ ಹೊಸ ವ್ಯವಸ್ಥೆಯ ಪ್ರಮುಖ ಅಂಶಗಳನ್ನು ಮಂಡಿಸಿ ಅದರ ಸುತ್ತ ಮೂರನೇ ಜಗತ್ತಿನ ದೇಶಗಳು ಒಂದುಗೂಡಿ 'ಹಳೆಯ ಅನ್ಯಾಯುತ ವ್ಯವಸ್ಥೆಯನ್ನು ಕೊನೆಗಾಣಿಸಿ, ಮಾನವ ಘನತೆ, ಸಮಾನತೆಗೆ ಒತ್ತು ಕೊಡುವ ಹೊಸ ನ್ಯಾಯಯುತ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂದು ಕರೆ ಕೊಟ್ಟರು.

ಅವರು ಪ್ರತಿಪಾದಿಸಿದ ಹೊಸ ವ್ಯವಸ್ಥೆಯ ಪ್ರಮುಖ ಅಂಶಗಳೆಂದರೆ: 1) ಯಾವುದೇ ಮೂರನೇ ಜಗತ್ತಿನ ಪ್ರಾತಿನಿಧ್ಯ ವಿಲ್ಲದೆ 1944 ಬ್ರೆಟ್ಟನ್ ವುಡ್ಸ್ ಸಮ್ಮೇಳನದಲ್ಲಿ ರೂಪಿಸಿದ ವಿಶ್ವಬ್ಯಾಂಕ್, ಐಎಂಎಫ್ ಮತ್ತು 1947 ರ GATT ಒಪ್ಪಂದಗಳು ಅಂತರರಾಷ್ಟ್ರೀಯ ಹಣಕಾಸು ಮತ್ತು ವ್ಯಾಪಾರ ವ್ಯವಸ್ಥೆಗಳನ್ನು ನಿರ್ದೇಶಿಸುತ್ತಿದ್ದು ಅವುಗಳಲ್ಲಿ ತೀವ್ರ ಸುಧಾರಣೆಗಳು ಅಗತ್ಯ 2) ನವ–ವಸಾಹತುಶಾಹಿ ವ್ಯವಸ್ಥೆಯ ಪರಿಣಾಮದಿಂದ ಮೂರನೇ ಜಗತ್ತಿನ ದೇಶಗಳ ಮೇಲೆ ಇರುವ 70 ಶತಕೋಟಿ ಡಾಲರ್ ಸಾಲದ ಹೊರೆಯನ್ನು ರದ್ದು ಪಡಿಸಬೇಕು 3) ಪ್ರತಿಯೊಂದು ದೇಶಕ್ಕೆ ಅದರ ಪ್ರಾಕೃತಿಕ ಸಂಪತ್ತಿನ ಮೇಲೆ ಪೂರ್ಣ ಸಾರ್ವಭೌಮ ಹಕ್ಕನ್ನು ಮನ್ನಿಸಬೇಕು 4) ಪ್ರತಿಯೊಂದು ದೇಶಕ್ಕೆ ತಮ್ಮದೇ ವಿಜ್ಞಾನ ತಂತ್ರಜ್ಞಾನ ಅಭಿವೃದ್ಧಿ ಪಡಿಸುವ ಹಕ್ಕು ಇರಬೇಕು 5) ಜಗತ್ತಿನ ಜನಸಂಖ್ಯೆಯ ಅರ್ಧ ಇರುವ ಬಡಜನರ ಆದಾಯಕ್ಕೆ ಸಮನಾಗಿ ಶಸ್ತ್ರಾಸ್ತ್ರಗಳ ಮೇಲೆ ಖರ್ಚನ್ನು ಮಾಡುತ್ತಿರುವ ಜಾಗತಿಕ 'ಯುದ್ಧ ಆರ್ಥಿಕ'ದ ಬದಲು 'ಶಾಂತಿ ಆರ್ಥಿಕ' ಸ್ಥಾಪಿಸಬೇಕು.

ಈ ಅಂಶಗಳು ಮೂರನೇ ಜಗತ್ತಿನ ದೇಶಗಳಲ್ಲಿ ಭಾರೀ ಸಂಚಲನ ಮೂಡಿಸಿದವು. ಇದರಿಂದ ಆತಂಕಿತರಾದ ಯು.ಎಸ್, ಯುರೋ, ಜಪಾನ್ ತ್ರಿವಳಿಗಳು ಜಿ–7 ಗುಂಪು ರಚಿಸಿದವು. "ಜಗತ್ತಿನ ಆರ್ಥಿಕ ವ್ಯವಸ್ಥೆ ಹೇಗಿರಬೇಕು ಎಂಬುದನ್ನು ನಿರ್ಧರಿಸುವ ಜವಾಬ್ದಾರಿಯನ್ನು ಪಾಶ್ಚಿಮಾತ್ಯ ದೇಶಗಳು ಏಶ್ಯಾದ, ಆಫ್ರಿಕಾದ ದೇಶಗಳಿಗೆ ಬಿಟ್ಟು ಕೊಡಲು ಸಾಧ್ಯನವಿಲ್ಲ' ಎಂದು ಆಗಿನ ಪ.ಜರ್ಮನಿ ನಾಯಕ ಹೇಳಿದ್ದರು. ಹಾಗಾಗಿ ಇದಕ್ಕೆ ಮುಳುವಾಗಿದ್ದ ಅಲೆಂದೆ ಹತ್ಯೆ, ಮಿಲಿಟರಿ ಕ್ಷಿಪ್ರಕ್ರಾಂತಿಗೆ ಇವರೆಲ್ಲರ ಸಮ್ಮತಿ ಇದ್ದೇ ಇತ್ತು.

**ಅಲೆಂಡೆ ಕೊನೆಯ ಮಾತುಗಳು**

ಅಧ್ಯಕ್ಷೀಯ ಭವನದ ಮೇಲೆ ಮಿಲಿಟರಿ ದಾಳಿ ನಡೆಯುತ್ತಿದ್ದಂತೆ ಪಲಾಯನ ಮಾಡದಿರಲು, ಅಥವಾ ರಾಜೀನಾಮೆ ನೀಡದಿರಲು ಅಲೆಂಡೆ ಧೈರ್ಯದಿಂದ ನಿರ್ಧರಿಸಿದರು. ಅವರು ತಮ್ಮ ಕೊನೆಯ ತನಕ ಅಧ್ಯಕ್ಷೀಯ ಅರಮನೆಯಲ್ಲಿ ಉಳಿಯಲು ನಿರ್ಧರಿಸಿದರು. ಅಧ್ಯಕ್ಷೀಯ ಅರಮನೆಯಿಂದ ಅವರು ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿದರು, ಅದು ಅವರ ಕೊನೆಯ ಮಾತುಗಳಾಗಿ ಉಳಿದಿದೆ. ಅವರು ಹೀಗೆ ಹೇಳಿದರು:



"ಈ ನಿರ್ಣಾಯಕವಾದ ಕ್ಷಣದಲ್ಲಿ, ನಾನು ನಿಮ್ಮನ್ನು ಉದ್ದೇಶಿಸಬಹುದಾದ ಕೊನೆಯ ಕ್ಷಣದಲ್ಲಿ, ನೀವು ಈ ಪಾಠವನ್ನು ಮನದಟ್ಟು ಮಾಡಿಕೊಳ್ಳಬೇಕೆಂದು ನಾನು ಬಯಸುತ್ತೇನೆ: ವಿದೇಶಿ ಬಂಡವಾಳ, ಸಾಮ್ರಾಜ್ಯಶಾಹಿ, (ನಮ್ಮ ದೇಶದ) ಪ್ರತಿಗಾಮಿಗಳೊಂದಿಗೆ, ಸಶಸ್ತ್ರ ಪಡೆಗಳು ತಮ್ಮ ಸಂಪ್ರದಾಯವನ್ನು ಮುರಿದ ವಾತಾವರಣವನ್ನು ಸೃಷ್ಟಿಸಿದವು.. ... ನನ್ನ ಧ್ವನಿಯ ಇನ್ನು ಮುಂದೆ ನಿಮ್ಮನ್ನು ತಲುಪುವುದಿಲ್ಲ.. ಆದರೆ ನೀವು ಅದನ್ನು ಕೇಳುತ್ತಲೇ ಇರುತ್ತೀರಿ. ನಾನು ಯಾವಾಗಲೂ ನಿಮ್ಮ ಪಕ್ಕದಲ್ಲಿರುತ್ತೇನೆ. ಕನಿಷ್ಠ ನನ್ನ ಸ್ಮರಣೆಯು ಕಾರ್ಮಿಕರಿಗೆ ನಿಷ್ಠರಾಗಿರುವ ಘನತೆಯ ವ್ಯಕ್ತಿಯದ್ದಾಗಿರುತ್ತದೆ"

"ನನ್ನ ದೇಶದ ಶ್ರಮಿಕರೇ, ನನಗೆ ಚಿಲಿ ಮತ್ತು ಅದರ ಭವಿಷ್ಯದಲ್ಲಿ ನಂಬಿಕೆ ಇದೆ. ದೇಶದ್ರೋಹವು ಮೇಲುಗೈ ಸಾಧಿಸಲು ಪ್ರಯತ್ನಿಸಿದಾಗ ಇತರ ಜನರು ಈ ಕರಾಳ ಮತ್ತು ಕಹಿ ಕ್ಷಣವನ್ನು ನಿವಾರಿಸುತ್ತಾರೆ. ಉತ್ತಮ ಸಮಾಜವನ್ನು ನಿರ್ಮಿಸಲು ಸ್ವತಂತ್ರ ಜನರು ನಡೆಯುವಲ್ಲಿ ಮಹಾನ್ ದಾರಿಗಳು ಮತ್ತೆ ತೆರೆದುಕೊಳ್ಳುತ್ತವೆ ಎಂದು ತಿಳಿದು ಮುಂದುವರಿಯಿರಿ.

ಚಿಲಿ ಚಿರಾಯುವಾಗಲಿ! ಜನತೆ ಚಿರಾಯುವಾಗಲಿ! ಕಾರ್ಮಿಕರು ಚಿರಾಯುವಾಗಲಿ!"

ಇವು ನನ್ನ ಕೊನೆಯ ಮಾತುಗಳು, ಮತ್ತು ನನ್ನ ತ್ಯಾಗ ವ್ಯರ್ಥವಾಗುವುದಿಲ್ಲ ಎಂದು ನನಗೆ ಖಾತ್ರಿಯಿದೆ...."

ಚಿಲಿಯ ಕಮ್ಯುನಿಸ್ಟರು ಮತ್ತು ಸಮಾಜವಾದಿಗಳು ಬಲಗೊಂಡು ಮತ್ತು ಈಗ ಮತ್ತೆ ಅಧಿಕಾರದಲ್ಲಿದ್ದ ಕಾರಣ, ಅಲೆಂಡೆ ಅವರ ಕನಸುಗಳನ್ನು ನನಸಾಗಿಸಲು ಪ್ರಯತ್ನಿಸುತ್ತಿರುವುದರಿಂದ ಅವರ ತ್ಯಾಗ ವ್ಯರ್ಥವಾಗಿಲ್ಲ. ಸಹಜವಾಗಿ, ಅವರು ಮತ್ತೊಮ್ಮೆ ಆಳುವ ವರ್ಗಗಳ ವಿರುದ್ಧ ಹೋರಾಡುತ್ತಿದ್ದಾರೆ, ಅವರು ಸರ್ವಾಧಿಕಾರದ ಅವಧಿಯಲ್ಲಿ ಮಾಡಿದ ಯಾವುದೇ ಮುನ್ನಡೆಗಳನ್ನು ಕಳೆದುಕೊಳ್ಳದಂತೆ ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ಚಿಲಿಯಲ್ಲಿ ಹೋರಾಟ ಮುಂದುವರೆದಿದೆ.

## ಜಿ–20 ದಿಲ್ಲಿ ಘೋಷಣೆ: ಆಳಗೊಳ್ಳುತ್ತಿರುವ ಜಾಗತಿಕ ಆರ್ಥಿಕ..... ಪುಟ 13 ರಿಂದ

ಹಣಕಾಸಿನ ಕಾರ್ಯಾಚರಣೆಗಳಲ್ಲಿ ಯಾವುದೇ ಹೆಚ್ಚುವರಿ ಮೌಲ್ಯವು ಉತ್ಪತ್ತಿಯಾಗುವುದಿಲ್ಲ, ಆದರೆ ಅವು ಸಂಪನ್ಮೂಲಗಳ ಮೇಲೆ ದಾವೆಗಳನ್ನು ಸೃಷ್ಟಿಸುತ್ತವೆ, ಇದರಿಂದಾಗಿ ಉತ್ಪಾದನೆಯು ಸ್ಥಗಿತಗೊಂಡಿದ್ದರೂ ಸಹ, ಸಾರ್ವಜನಿಕ ಸ್ವತ್ತುಗಳು, ಸಣ್ಣ ಬಂಡವಾಳಗಾರರ ಆಸ್ತಿಗಳು ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಈ ದಾವೆಗಳು ಬೆಳೆಯುತ್ತಲೇ ಇರುತ್ತವೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಉತ್ಪಾದನೆಯಿಂದ ಸ್ವಾಧೀನಪಡಿಸಿಕೊಂಡ ಹೆಚ್ಚುವರಿ ಮೌಲ್ಯಕ್ಕೆ ಪೂರಕವಾಗಿ, ಸಮಕಾಲೀನ ಬಂಡವಾಳಶಾಹಿಯಲ್ಲಿ ದೊಡ್ಡ ಕಾರ್ಪೊರೇಟ್‌ಗಳು ಇತರ ಬಂಡವಾಳಶಾಹಿಗಳಿಂದ, ಪ್ರಭುತ್ವದಿಂದ ಮತ್ತು ಇದುವರೆಗೆ ಸರಕುಗಳಾಗಿಲ್ಲದ ವಲಯಗಳಿಂದ (ಕೇಂದ್ರೀಕರಣದ ಅಥವಾ ಬಂಡವಾಳದ ಆದಿಮ ಸಂಚಯದಿಂದ ಬರುವಂತವುಗಳು) ಗಳಿಸುವ ನೇರ ಆಸ್ತಿಗಳೂ ಇರುತ್ತವೆ. ಆದ್ದರಿಂದ ಸಮಕಾಲೀನ ಬಂಡವಾಳಶಾಹಿಯ ಅಡಿಯಲ್ಲಿ ಪ್ರಬಲವಾದ ಕಾರ್ಪೊರೇಟ್ ಹಿತಾಸಕ್ತಿಗಳಿಗೆ ಆರ್ಥಿಕ ಹಿಂಜರಿತವು ಅಷ್ಟೇನೂ ಪ್ರಾಮುಖ್ಯತೆಯನ್ನು ಹೊಂದಿಲ್ಲ.

**ಭ್ರಮೆಯಲ್ಲಿ ಬದುಕಿದ್ದಾರೆ**

ಆದರೆ, ಅದು ಸೃಷ್ಟಿಸಿದ ಸಾಮೂಹಿಕ ನಿರುದ್ಯೋಗ ಮತ್ತು ದಾರಿದ್ರ್ಯದಿಂದಾಗಿ ಉಂಟಾಗುವ ಸಾಮಾಜಿಕ ಅಸ್ಥಿರತೆಯ ಕತೆ ಏನು? ಬಿಕ್ಕಟ್ಟಿನ ಸಂದರ್ಭದಲ್ಲಿ ಮುಂದುವರೆದ ದೇಶಗಳ ಮಹಾನಗರೀಯ ಪ್ರಭುತ್ವಗಳು ನಿರಾಳವಾಗಿ ಇರುವುದನ್ನು ಅರ್ಥಮಾಡಿಕೊಳ್ಳಲು ನಾವು ಕೀನ್ಸ್ ಬರೆಯುತ್ತಿದ್ದ ಸಂದರ್ಭವನ್ನು ಮತ್ತು ಅದಕ್ಕೂ, ಈಗಿನ ಸಂದರ್ಭಕ್ಕೂ ಇರುವ ವ್ಯತ್ಯಾಸವನ್ನು ನೋಡಬೇಕು. ಕೀನ್ಸ್ ಬೋಲ್ಶೆವಿಕ್ ಕ್ರಾಂತಿಯ ಹಿನ್ನೆಲೆಯಲ್ಲಿ ಬರೆಯುತ್ತಿದ್ದರು; ಆಗ ಸಮಾಜವಾದವು ಕೇವಲ ಒಂದು ಸಾಧ್ಯತೆಯಾಗಿಯಲ್ಲ, ಸನ್ನಿಹಿತವಾದ ವಾಸ್ತವವಾಗಿ ಕಾಣುತ್ತಿತ್ತು. ನಿರುದ್ಯೋಗದ ಬಗ್ಗೆ ತಕ್ಷಣವೇ ಏನಾದರೂ ಮಾಡದಿದ್ದಲ್ಲಿ, ಕಾರ್ಮಿಕರ ಅಸಮಾಧಾನವು ಬಂಡವಾಳಶಾಹಿಯನ್ನು ಮೀರಿ ಹೋಗುವ ಅಜೆಂಡಾ ಮುನ್ನೆಲೆಗೆ ಬರುತ್ತಿತ್ತು. ಆದರೇನು ಮಾಡುವುದು, ಈಗ ಅಂತಹ ಸನ್ನಿವೇಶವಿಲ್ಲ. ನಿಜವಾಗಿ ಅಸ್ತಿತ್ವದಲ್ಲಿರುವ ಸಮಾಜವಾದಕ್ಕೆ ಹಿನ್ನಡೆಯಾಗಿದೆ, ಮುಂದುವರೆದ ಬಂಡವಾಳಶಾಹಿ ದೇಶಗಳ ಸರ್ಕಾರಗಳು ಸಾಮಾಜಿಕ ಅಸ್ಥಿರತೆ ಸಂಭವಿಸುತ್ತವೆ ಎಂಬ ಬಗ್ಗೆ ಚಿಂತಿಸುವುದಿಲ್ಲ. ನಿಜ, ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳು ತಮ್ಮ ಪ್ರಾಬಲ್ಯಕ್ಕೆ ಸವಾಲನ್ನು ಎದುರಿಸುತ್ತಿವೆ, ಆದರೆ ಈ ಸವಾಲಿಗೆ ಈ ಹಿಂದೆ ಇದ್ದಂತಹ ತೀಕ್ಷ್ಣವಾದ ಸೈದ್ಧಾಂತಿಕ ಮೊನಚು ಇಲ್ಲ; ಮತ್ತು ಕಾರ್ಮಿಕ ವರ್ಗದಿಂದ ಬರುವ ಯಾವುದೇ ಬೆದರಿಕೆಯನ್ನು ಫ್ಯಾಸಿಸ್ಟ್ ಮಂದಿಯನ್ನು ಬಳಸಿ ಮೊಂಡಾಗಿಸಬಹುದು.

ಆದರೂ ಅವರು ಭ್ರಮೆಯಲ್ಲಿ ಬದುಕಿದ್ದಾರೆ. ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕಾರ್ಮಿಕರಿಂದ ಈಗ ಬೃಹತ್ ಮುಷ್ಕರ–ಹೋರಾಟಗಳು ನಡೆಯುತ್ತಿವೆ; ಮತ್ತು ತನ್ನ ಸಮಯದಲ್ಲಿ ಬೋಲ್ಶೆವಿಕ್ ಕ್ರಾಂತಿಯು "ಇದ್ದಕ್ಕಿದ್ದಂತೆ ಪ್ರತ್ಯಕ್ಷ" ಗೊಂಡಿತ್ತು ಎಂಬುದನ್ನು ನಾವು ಮರೆಯಬಾರದು.

*ಅನು: ಕೆ.ವಿ.*

NEW No. MAG(3)/NPP/205/2021-2022
JANASHAKTHI KANNADA VARA PATRIKE September 25-October 1, 2023 Price: Rs. 10/- Date of Publication: 22 September 2023 RNI No. KARKAN /2006/17926 Posted on 23-09-2023
Posted at BG PSO, BG - 560026 **Posted at Periodical Rate -** Rs. 2

# ಭಗತ್ ಸಿಂಗ್ ಕಂಡ ಕನಸು ಮತ್ತು ಭಾರತದ ಕ್ರೂರ ವಾಸ್ತವ

## ಭಗತ್ ಸಿಂಗ್ ಮತ್ತು ಸಂಗಾತಿಗಳು ಕಂಡ ಕನಸು ಈಗ ಇನ್ನೂ ನನಸಾಗಿಲ್ಲ...

ಆರ್. ರಾಮಕೃಷ್ಣ

**ಸೆಪ್ಟೆಂಬರ್ 28, ಧೀಮಂತ ಸ್ವಾತಂತ್ರ್ಯ ಯೋಧ, ಕ್ರಾಂತಿಕಾರಿ ಹುತಾತ್ಮ ಭಗತ್ ಸಿಂಗ್ ಅವರ ಜನ್ಮ ದಿನ. ಈ ಸಂದರ್ಭದಲ್ಲಿ ದೇಶಕ್ಕಾಗಿ, ದೇಶದ ಜನತೆಗಾಗಿ ನಗು ನಗುತ್ತಾ ನೇಣುಗಂಭವನ್ನೇರಿದ ಭಗತ್ ಸಿಂಗ್ ಮತ್ತು ಸಂಗಾತಿಗಳ ಬದುಕು ಹೋರಾಟ ವಿಚಾರಗಳ ಕುರಿತು ಒಂದು ಲೇಖನ.**

ಚಂದ್ರಯಾನದ ಯಶಸ್ಸು ಮತ್ತು ಒಳಚರಂಡಿಗಳಲ್ಲಿ ಸಾಯುತ್ತಿರುವ ಪೌರ ಕಾರ್ಮಿಕರ ಬದುಕು. 'ಚಂದ್ರಯಾನ' ಮತ್ತು 'ಸೂರ್ಯಯಾನ'ಗಳನ್ನು ಯಶಸ್ವಿ ಮಾಡಲಾಗುತ್ತಿರುವ ಭಾರತದಲ್ಲಿ ಒಟ್ಟಾರೆ ಅಧಿಕೃತ ಲೆಕ್ಕಗಳ ಪ್ರಕಾರವೇ 17 ರಾಜ್ಯಗಳಲ್ಲಿನ ಸರ್ವೆ ಪ್ರಕಾರ 58,098 ಮಲ ಬಳಿಯುವ ಕೆಲಸದಲ್ಲಿ ನಿರತರಾಗಿದ್ದಾರೆ. ಕೇವಲ ಉತ್ತರ ಪ್ರದೇಶ ಒಂದರಲ್ಲೇ 20,884 ಜನರು ಮಲ ಬಳಿಯುವ ಕೆಲಸಗಳಲ್ಲಿದ್ದಾರೆ. (ಜುಲೈ, 06, 2023ರ ಮಾಹಿತಿ) ಶೌಚ ಗುಂಡಿಗಳಲ್ಲಿ ಇಳಿದು ಉಸಿರುಗಟ್ಟಿ ಪೌರ ಕಾರ್ಮಿಕರು ಸಾಯುತ್ತಲೇ 1993 ರಿಂದ 2020 ರ ಅವಧಿಯಲ್ಲಿ 920 ಜನರು ಸತ್ತಿದ್ದಾರೆ. ರೋಗ ರುಜಿನಗಳಿಂದ ಅಕಾಲಿಕವಾಗಿ ಸತ್ತವರದ್ದೂ, ಬದುಕಿದ್ದು ಸತ್ತಂತೆ ಬಾಡಿಹೋದ ಬದುಕಿನವರದ್ದು ಲೆಕ್ಕ ಬೇರೆಯೇ ಇದೆ.



**ಪ್ರಸ್ತುತ ಭಾರತದಲ್ಲಿ ಜನರ ಬದುಕಿನ ಪರಿಸ್ಥಿತಿ**

- ಅಪೌಷ್ಟಿಕತೆಯಿಂದ ನರಳುವ ಜನರಲ್ಲಿ ಅತಿಹೆಚ್ಚು ಜನರು ಇರುವುದು ಭಾರತದಲ್ಲಿ.
- 57% ಭಾರತೀಯ ಮಹಿಳೆಯರು ರಕ್ತಹೀನತೆ ಬಳಲುತ್ತಿದ್ದಾರೆ.
- ಭಾರತದಲ್ಲಿ ಶೇ. ಮಕ್ಕಳು 32 ರಷ್ಟು ಅಗತ್ಯಕ್ಕಿಂತ ಕಡಿಮೆ ತೂಕ ಹೊಂದಿದ್ದಾರೆ.
- 5 ವರ್ಷಕ್ಕಿಂತ ಕಡಿಮೆ ವಯಸ್ಸಿನ 67% ಮಕ್ಕಳ ಮೇಲೆ ಅಪೌಷ್ಟಿಕತೆ ಪರಿಣಾಮ ಬೀರಿದೆ.
- ಜಗತ್ತಿನಲ್ಲೇ ಅತಿಹೆಚ್ಚು ಅನಕ್ಷರಸ್ಥರು(28.7 ಕೋಟಿ.) ಇನ್ನು ಭಾರತದಲ್ಲಿದ್ದಾರೆ. (ಜಗತ್ತಿನ ಅನಕ್ಷರಸ್ಥರ ಶೇ.37ರಷ್ಟು.
- ಜಗತ್ತಿನಲ್ಲೇ ಅತಿ ಹೆಚ್ಚು ಸ್ಲಂ ನಿವಾಸಿಗಳು ಭಾರತದಲ್ಲಿದ್ದಾರೆ. (6.5 ಕೋಟಿ. 2011 ರ ಜನಗಣತಿ)
- ಶಿಶು ಮರಣ ತಲಾ 1000 ಮಗುವಿಗೆ ಭಾರತದಲ್ಲಿ ಸರಾಸರಿ 32 ಇದೆ. (ಶ್ರೀಲಂಕ 6.8 ಮಾತ್ರ ಇದೆ.)
- 2021 ರಲ್ಲಿ ಭಾರತ ಹಸಿವು ನಿವಾರಿಸುವ ವಿಷಯದಲ್ಲಿ 116 ದೇಶಗಳ ಪೈಕಿ 101 ನೇ ಸ್ಥಾನದಲ್ಲಿದೆ.
- ಅಸ್ಪೃಶ್ಯತೆಯ ಆಚರಣೆ, ದಲಿತರ ಮೇಲೆ ಮತ್ತು ಮಹಿಳೆಯರ ಮೇಲೆ ದೌರ್ಜನ್ಯಗಳು ದಿನ ನಿತ್ಯದ ವರದಿಗಳಾಗಿವೆ.

### ಭಗತ್ ಸಿಂಗ್ ಮತ್ತು ಸಂಗಾತಿಗಳು ಕಂಡ ಭಾರತ

**ಧೀಮಂತ ಬದುಕು**

ಭಗತ್ ಸಿಂಗ್ ಜನನ – ಸೆಪ್ಟೆಂಬರ್–28, 1907 ಅವಿಭಜಿತ ಭಾರತದ, ಪಂಜಾಬಿನ ಜರನವಾಲಾ ತಾಲೂಕಿನ ಬಂಗಾ ಎಂಬ ಹಳ್ಳಿಯಲ್ಲಿ. ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿದರು. ರೈತ ಕುಟುಂಬ. ತಾಯಿ: ವಿದ್ಯಾವತಿ, ತಂದೆ: ಕಿಶನ್ ಸಿಂಗ್, ಚಿಕ್ಕಪ್ಪ– ಅಜಿತ್ ಸಿಂಗ್. ಲಾಹೋರ್ ಪಿತೂರಿ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ ಕರ್ತಾರ್ ಸಿಂಗ್ ಸರಭ್‌ರವರನ್ನು 1915 ರಲ್ಲಿ ಅವರ 20 ನೇ ವಯಸ್ಸಿನಲ್ಲೇ ನೇಣಿಗೇರಿಸಲಾದ ಪ್ರಕರಣ ಮತ್ತು ಏಪ್ರಿಲ್ 13, 1919 ರಂದು 'ರೌಲತ್ ಕಾಯ್ದೆ' ವಿರುದ್ಧ ಅಮೃತಸರದಲ್ಲಿ, ಕೇವಲ ಸಂಶಯಗಳ ಆಧಾರದಲ್ಲಿ, ಸಾಕ್ಷ್ಯಾಧಾರಗಳಿಲ್ಲದೆಯೂ ಯಾರನ್ನು ಬೇಕಾದರೂ ಬಂಧಿಸುವ ಸರಕಾರದ ಅಧಿಕಾರದ ವಿರುದ್ಧ ಪ್ರತಿಭಟನೆ ಮೇಲೆ ಸು. 1,400 ಜನರನ್ನು ಬಲಿಪಡೆದ ಜಲಿಯನ್ ವಾಲಾಭಾಗ್ ಹತ್ಯಾಕಾಂಡ ಗಾಢವಾದ ಪ್ರಭಾವವನ್ನು ಬೀರಿದ್ದವು. 12 ವರ್ಷದ ಬಾಲಕ ಭಗತ್, ಜಲಿಯನ್ ವಾಲಾಬಾಗ್‌ನ ರಕ್ತ ಸಿಕ್ತ ಮಣ್ಣನ್ನು ತೆಗೆದುಕೊಂಡು ಹೋಗಿದ್ದ.

1920 ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಅಸಹಕಾರ ಚಳುವಳಿ ಆರಂಭವಾಯಿತು. 1922 'ಚೌರಿಚೌರ'ದಲ್ಲಿ ದೌರ್ಜನ್ಯಕಾರಿ ಪೋಲಿಸರನ್ನು, ಪೋಲಿಸ್ ಠಾಣೆಗೆ ಬೆಂಕಿ ಹಾಕಿ ಸುಟ್ಟ ಘಟನೆಯಿಂದಾಗಿ ಚಳುವಳಿಯನ್ನು ವಾಪಸ್ ಪಡೆದ ಗಾಂಧೀಜಿಯವರ ನಡೆ ಭಗತ್ ಸಿಂಗ್‌ನಲ್ಲಿ ನಿರಾಶೆ ಮೂಡಿಸಿತು. ಭಗತ್ ಸಿಂಗ್ ಒಬ್ಬ ಅಧ್ಯಯನಶೀಲ ವ್ಯಕ್ತಿಯಾಗಿದ್ದ. ಮುಂದೆ ಎಚ್.ಆರ್..ಎ.– ಹಿಂದೂಸ್ಥಾನ ರಿಪಬ್ಲಿಕ್ ಆಸೋಸಿಯೇಷನ್, ಎಂದಿದ್ದ ಕ್ರಾಂತಿಕಾರಿಗಳ ಸಂಘಟನೆಯನ್ನು ಹಿಂದೂಸ್ತಾನ ಸೋಷಿಯಲಿಸ್ಟ್ ರಿಪಬ್ಲಿಕ್ ಅಸೋಸಿಯೇಷನ್– 'ಎಚ್.ಎಸ್.ಆರ್.ಎ.' ಮಾಡಿದ್ದು ಭಗತ್.

ಅಕ್ಟೋಬರ್ 30– 1928–ಲಾಹೋರ್‌ನಲ್ಲಿ ಸೈಮನ್ ಕಮೀಷನ್ ವಿರುದ್ಧ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಲಾಲ ಲಜಪತ್ ರಾಯ್ ಅವರ ಮೇಲೆ ಪೋಲಿಸ್ ಅಧಿಕಾರಿ ಸ್ಕಾಟ್‌ನಿಂದ ಹಲ್ಲೆ ನಡೆದು, ನವೆಂಬರ್ 17, 1928 ರಂದು ಲಾಲ ಲಜಪತ ರಾಯ್ ಅವರ ದುರಂತ ಸಾವು ಕಂಡರು.



ರಾಜಗುರು– ಭಗತ್, ಗುರುತಿಸಿದವರ ತಪ್ಪಿನಿಂದಾಗಿ ಲಾಹೋರ್ ಎಸ್.ಪಿ. ಸ್ಕಾಟ್' ಬದಲು ಮತ್ತೊಬ್ಬ ಬ್ರಿಟೀಷ್ ಅಧಿಕಾರಿ 'ಸಾಂಡರ್ಸ್'ಗೆ ಗುಂಡು ಹಾರಿಸಿ ಕೊಲ್ಲುತ್ತಾರೆ. ಏಪ್ರಿಲ್–8, 1929–ದೆಹಲಿಯ ಸೆಂಟ್ರಲ್ ಅಸೆಂಬ್ಲಿಯಲ್ಲಿ ಜನರಿಲ್ಲದ ಜಾಗದಲ್ಲಿ ಬಾಂಬ್ ಸ್ಫೋಟಿಸುತ್ತಾರೆ. ಭಗತ್ ಸಿಂಗ್ ಮತ್ತು ಬಟುಕೇಶ್ವರ ದತ್‌ರಿಂದ, ಇನ್‌ಕ್ವಿಲಾಬ್ ಜಿಂದಾಬಾದ್ ಘೋಷಣೆ..ಪ್ರೇಕ್ಷಕರ ಗ್ಯಾಲರಿಯಿಂದ ಕರಪತ್ರವನ್ನು ತೂರುತ್ತಾರೆ. ತಾವಾಗಿ ಪೋಲೀಸ ಬಂಧನ ಒಳಗಾಗುತ್ತಾರೆ. ಕ್ರಾಂತಿಕಾರಿಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಹಾಗೆಯೇ ಯಾರನ್ನೂ ಕೊಲ್ಲಲಿಲ್ಲ. ಬಾಂಬ್ ಹಾಕಿದ್ದು 'ಕಿವುಡರಿಗೆ ಕೇಳಿಸಬೇಕಾದರೆ, ಗಟ್ಟಿಯಾಗಿ ಶಬ್ದ ಮಾಡಬೇಕು' ಎಂದು ಮತ್ತು, ಭಾರತೀಯರೂ ಮನಸ್ಸು ಮಾಡಿದರೆ ಏನೂ ಮಾಡಬಲ್ಲರು ಎಂಬುದನ್ನು ತೋರಿಸಿ, ಸೂರ್ಯ ಮುಳುಗದ ಸಾಮ್ರಾಜ್ಯ ಎನ್ನಲಾಗುತ್ತಿದ್ದ ಬ್ರಿಟೀಷ್ ಪ್ರಭುತ್ವವು ಬೆಚ್ಚಿ ಬೀಳುವಂತೆ ಮಾಡಬೇಕು.' ಹಾಗೂ 'ಬ್ರಿಟನ್ ಅನ್ನು ತನ್ನ ಕನಸಿನಿಂದ ಎಬ್ಬಿಸಬೇಕು' ಎಂಬ ಗುರಿಯೊಂದಿಗೆ.

'ಇನ್‌ಕ್ವಿಲಾಬ್ ಜಿಂದಾಬಾದ್' ಘೋಷಣೆ, 'ಸಮಾಜವಾದ'ದ ಕ್ರಾಂತಿಕಾರಿ ವಿಚಾರಗಳನ್ನು ಪಸರಿಸುವ ಉದ್ದೇಶವಿತ್ತು. ಆ ಕಾಲದಲ್ಲಿ ಜನರಿಗೆ 'ಮಾರ್ಕ್ಸ್‌ವಾದ'ದ 'ಸಮಾಜವಾದ'ದ ವಿಚಾರಗಳು ತಿಳಿದಿರಲಿಲ್ಲ. ಅವು ಸಂಪೂರ್ಣ ಹೊಸ ವಿಚಾರಗಳಿದ್ದವು.

ನ್ಯಾಯಾಲಯಕ್ಕೆ ನೀಡಿದ ಲಿಖಿತ ಹೇಳಿಕೆಯಲ್ಲಿ ಸರಿಯಾದ ಸಮರ್ಥನೆ" ಇಂಗ್ಲೆಂಡ್ ಅನ್ನು ಅದರ ಕನಸಿನಿಂದ ಎಬ್ಬಿಸಲು ಬಾಂಬ್ ಸ್ಫೋಟ ಅಗತ್ಯವಾಗಿತ್ತು." ಎಂದು ವಿವರಿಸುತ್ತಾರೆ. "ನಮ್ಮ ಅರ್ಥದಲ್ಲಿ ಕ್ರಾಂತಿ ಎಂದರೆ, ಸಮಾಜವಾದಿ ವ್ಯವಸ್ಥೆಯ ಅಂತಿಮ ಸ್ಥಾಪನೆ. ಈ ಸಮಾಜವು ಶ್ರಮಿಕ ವರ್ಗದ ಸಾರ್ವಭೌಮತ್ವವನ್ನು ಮಾನ್ಯ ಮಾಡುತ್ತದೆ. ಈ ಸಮಾಜವು ತಾನು ಕುಸಿದು ಬೀಳುವ ಭಯದಿಂದ ಮುಕ್ತವಾಗಿರುತ್ತದೆ.

ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಯುದ್ಧಗಳ ಯಾತನೆಗಳ ಬಂಧನದಿಂದ ಮನುಷ್ಯತ್ವವನ್ನು ವಿಶ್ವ ಒಕ್ಕೂಟ ಬಿಡಿಸಿಕೊಳ್ಳಬೇಕು. ನ್ಯಾಯಾಲಯದ ವಿಚಾರಣೆಯ ಸಂದರ್ಭವನ್ನೂ ಸಹ ಕ್ರಾಂತಿಕಾರಿ ವಿಚಾರಗಳನ್ನು ಹರಡುವ ವೇದಿಕೆಯನ್ನಾಗಿ ಬಳಕೆ ಮಾಡುವುದು ಕ್ರಾಂತಿಕಾರಿಗಳ ಉದ್ದೇಶವಾಗಿತ್ತು.

ಭಾಗ 1

ಭಗತ್ ಸಿಂಗ್ ಗಂಭೀರ ಓದುಗ. ನಿರಂತರ ಅಧ್ಯಯನ ಅವನ ದಿನಚರಿಯ ಪ್ರಮುಖ ಚಟುವಟಿಕೆ. ಒಮ್ಮೆ ತಂದೆ ಮದುವೆಯ ಪ್ರಸ್ತಾಪ ಮಾಡಿದಾಗ, ಮದುವೆಯ ಸೂಚನೆಯನ್ನು ನಿರಾಕರಣೆ ಮಾಡಿ ಮನೆ ಬಿಟ್ಟು ಹೋಗಿದ್ದ ಭಗತ್ ಸಿಂಗ್.



ಈ ಕ್ರಾಂತಿಕಾರಿಗಳು ವೈರಾಗ್ಯ ಭಾವ ಹೊಂದಿದ್ದ ಸನ್ಯಾಸಿಗಳೇನೂ ಆಗಿರಲಿಲ್ಲ, ಸಾಂಸಾರಿಕ ಜೀವನದ ಸುಖ ಸಂತೋಷಗಳ ಬಗೆಗೆ ತಿರಸ್ಕಾರ ಭಾವ ಹೊಂದಿದ್ದವರೂ ಅಲ್ಲ, ಕ್ರಾಂತಿಕಾರಿ ಚಳುವಳಿಗೆ ಅಗತ್ಯವಾದ 'ತ್ಯಾಗ' ಮನೋಭಾವ ಹೊಂದಿದ್ದವಾಗಿದ್ದರು ಎಂಬುದು ಈ ಕ್ರಾಂತಿಕಾರಿಗಳ ನಡುವಿನ ಚರ್ಚೆಯ ವಿವರಗಳನ್ನು ನೋಡಿದಾಗ ತಿಳಿಯುತ್ತದೆ.

ಭಗತ್ ಸಿಂಗನ ಕ್ರಾಂತಿಕಾರಿ ಬದ್ಧ ಯಾವ ಮಟ್ಟದ್ದು ಎಂದರೆ, ತನ್ನನ್ನು ನೇಣಿಗೆ ಹಾಕದೇ–ಸಾರ್ವಜನಿಕವಾಗಿ ಗುಂಡು ಹೊಡೆದು ಸಾಯಿಸಿ ಎಂದು– ಸರಕಾರಕ್ಕೆ ವಿನಂತಿಸಿ ಭಗತ್ ಸಿಂಗ್ ಪತ್ರ ಬರೆಯುತ್ತಾನೆ. ಕ್ರಾಂತಿಕಾರಿ ವಿಚಾರಗಳನ್ನು ಇನ್ನೂ ಹೆಚ್ಚು ಜನರಿಗೆ ತಲುಪಿಸುವ ಮಾರ್ಗ ಎಂಬುದು ಭಗತ್ ಸಿಂಗನ ಆಲೋಚನೆ.

ಬ್ರಿಟೀಷರು ನಿಗದಿತವಾದ ಮಾರ್ಚ್ 24, 1931 ರ ಬದಲಿಗೆ, ಮಾರ್ಚ್ –23, 1931 ರ ಸಂಜೆ, ಕಳ್ಳತನದಲ್ಲಿ ಲಾಹೋರ್‌ನ ಜೈಲಿನಲ್ಲಿ ಮೂವರು ಕ್ರಾಂತಿಕಾರಿಗಳನ್ನು ಗಲ್ಲಿಗೆ ಹಾಕಿದರು– ಮತ್ತು ಜೈಲಿನ ಹಿಂಬದಿಯ ಗೋಡೆ ಒಡೆದು ಕಳ್ಳಮಾರ್ಗದಲ್ಲಿ ದೇಹಗಳನ್ನು ಜೈಲಿನಿಂದ ಹೊರಗೆ– ತೆಗೆದುಕೊಂಡು ರಾವಿ ನದಿಯ ದಡಕ್ಕೆ ಬದಲಾಗಿ, ಸ್ವಲ್ಪ ದೂರದ ಸಟ್ಲೇಜ್ ನದಿ ದಡದಲ್ಲಿ ಬೆಂಕಿ ಹಚ್ಚಿಗೆ, ಅರೆ ಬರೆ ಸುಟ್ಟು ಓಡಿಹೋದರು. ನಂತರ ಜನತೆ

**ಪುಟ 12 ಕ್ಕೆ**

**JANASHAKTHI KANNADA VARA PATRIKE:** Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**